೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಪ್ರೊ|| ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ,

"೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು.

ಪ್ರೊ|| ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದರ ಮೇಲೆ ವಿಫಲವಾಗಿ ಚರ್ಚೆಯಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ರೀತಿಯಲ್ಲಿ ಅವರದೇ ಆದ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಎಫೆಕ್ಟೀವ್ ಆಗಿ ಕೊಟ್ಟಿದ್ದಾರೆ. ಆದ್ದರಿಂದ, ಈ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕಕ್ಕೆ ಬೆಂಬಲ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಇವೊತ್ತು ಅನೇಕ ವಿಷಯಗಳ ಬಗ್ಗೆ ಸಪ್ಲಿಮೆಂಟರಿಯಲ್ಲಿ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಈ ಪೂರಕವಾದ ಬೇಡಿಕೆಗಳನ್ನು ಹೆಚ್ಚು ಕೇಳಿಕೊಂಡಿದ್ದಾರೆ. ಅದರಲ್ಲಿ ಮುಖ್ಯವಾಗಿ ತಮಗೆ ಹೇಳುವುದು. ಎಂದರೆ. ಉದಾಹರಣೆಗೆ ಈಗ ಅಭಿಯಾಚನೆಯ ಕ್ರಮಾಂಕ ೬ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ಉದ್ಯಮ ಹೊರತು) ಅದರಲ್ಲಿ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಬಂಡವಾಳ ಹೂಡಲು ಒಂದು ಕೋಟಿ ರೂಪಾಯಿ ಕೊಡಬೇಕೆಂದು, ಮತ್ತೆ ಮರು ಪಾವತಿ ಮಾಡಲು ಅಷ್ಟೇ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಹಾಗೆಯೇ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಬಗ್ಗೆಯೂ ಹೇಳಿದ್ದಾರೆ. ಬಾಗಲಕೋಟೆ ಸ್ಪಿನ್ನಿಂಗ್ ಮಿಲ್ಸ್ ಮತ್ತು ರಾಯಚೂರು ಸ್ಪಿನ್ನಿಂಗ್ ಮಿಲ್ಲುಗಳಿಗೆ ಕ್ರಮವಾಗಿ ೧೬ ಲಕ್ಷ ಮತ್ತು ೬ ಲಕ್ಷ ರೂಪಾಯಿಗಳು ವೇತನ ಮಂಜೂರಿಗಾಗಿ ಕೊಡಬೇಕೆಂದು ಹೇಳಿದ್ದಾರೆ. ಕರ್ನಾಟಕ ಸಾಬೂನು ಮತ್ತು ಡಿಟರ್ಜೆಂಟ್ಸ್ ಕಂಪನಿಯು ಹಣದ ತೊಂದರೆ ತುರ್ತು ಪರಿಹಾರಕ್ಕಾಗಿ ೨ ಕೋಟಿ ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ನನ್ನ ಟೀಕೆ ಇರುವುದು ಇವರಿಗೆಲ್ಲಾ ಕೊಡಬಾರದು ಎಂದು ಅಲ್ಲ. ಈ ಸ್ಪಿನ್ನಿಂಗ್ ಮಿಲ್ ಬಹಳ ತೊಂದರೆಯಲ್ಲಿದೆ, ಹಿಂದೆ ಕೂಡ ನಾನು ಸಹಾಯ ಮಾಡಿದ್ದೇನೆ. ಈಗ ೧೬ ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಅವರು ಸಂಬಳ ಕೊಡಲಿ ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದಾರೆ. ಅವರ ದೃಷ್ಟಿಕೋನದ ವಿರುದ್ಧ ಇಲ್ಲ. ಸಂಬಳ ಇಲ್ಲದೇ ಇವೊತ್ತಿನ ದಿವಸ ಇರಲ್ಲಿಕ್ಕೆ ಸಾಧ್ಯವಿಲ್ಲ. ಈಗ ಅಲ್ಲಿ ಜಾಸ್ತಿ ಸಂಬಳ ಕೊಡಿ ಅಂತ ಹೇಳಿಲ್ಲ, ಸ್ಟ್ರೈಕವ ಮಾಡಲಿಲ್ಲ, ಏನೂ ಮಾಡಲಿಲ್ಲ. ಮುಖ್ಯವಾಗಿ ಬಾಗಲಕೋಟೆಯಲ್ಲಿ ನನಗೆ ತಿಳಿದು ಬಂದಿರುವ ಪ್ರಕಾರ ಅವ್ಯವಹಾರ ನಡೆದಿದೆ. ಅಲ್ಲಿ ವ್ಯವಹಾರಗಳು ಸರಿಯಾಗಿ ನಡೆಯುತ್ತಿಲ್ಲ. ಇದರ ಬಗ್ಗೆ ಸರ್ಕಾರದವರು ಸರಿಯಾದ ರೀತಿಯಲ್ಲಿ ತನಿಖೆಯನ್ನು ನಡೆಸಬೇಕು. ವಿಚಾರಣೆಯನ್ನು ನಡೆಸಬೇಕು. ಇದನ್ನು ಮಾಡದೆ ನೀವು ಅಲ್ಲಿಗೆ ಮತ್ತೆ ಹಣವನ್ನು ಕೊಡುವುದಾದರೆ ಅದರಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಇದರ ಜೊತೆಗೆ ಅಲ್ಲಿಯ ಕಾರ್ಮಿಕರು ಏನು ಸೂಚನೆಗಳನ್ನು ಕೊಟಿದ್ದಾರೆ ಅವುಗಳನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ರಾಯಚೂರು ಸಹಕಾರಿ ಸ್ಪಿನ್ನಿಂಗ್ ಮಿಲ್ ಮತ್ತು ಬಾಗಲಕೋಟೆ ಸ್ಪಿನ್ನಿಂಗ್ ಮಿಲ್‌ಗಳಲ್ಲಿ ಒಂದೊಂದು ಯೂನಿಟ್‌ಗೂ ಸಂಬಂಧಪಟ್ಟಂತೆ ತನಿಖೆಯನ್ನು ನಡೆಸಬೇಕು. ಹಾಗೆ ನಡೆಸದೇ ನೀವು ಹಣವನ್ನು ಏನು ಕೊಟ್ಟರೂ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಇನ್ನು ಕಳೆದ ಸಾರಿ ಎಂ ಇ.ಐ. ಗೆ ಹಣವನ್ನು ಕೊಟ್ಟಿದ್ದಿರಿ. ಆದರೆ ಈ ಸಾರಿ ಇದಕ್ಕೆ ಹಣವನ್ನೇ ತೋರಿಸಿಲ್ಲ. ಇದು ಸರ್ಕಾರದ ಒಂದು ಕೈಗಾರಿಕೆ. ಇದು ಉಳಿಯಬೇಕೋ, ಬೇಡವೋ ಎಂಬುದನ್ನು ನೀವೇ ಹೇಳಿ. ಇದು ಒಂದು ದೊಡ್ಡ ಕಾರ್ಖಾನೆ. ಮತ್ತು ಒಳ್ಳೆಯ ಕಾರ್ಖಾನೆ. ಇಲ್ಲಿ ೨ ಸಾವಿರ ಜನ ಕಾರ್ಮಿಕರಿದ್ದಾರೆ. ಈ ಕೈಗಾರಿಕೆ ಸರಿಯಾಗಿ ನಡೆಯುವುದಕ್ಕೆ ಏನು ಮಾಡಬೇಕೆಂದು ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಸೂಚಿಸಿದ್ದೆ. ಇದರ ಬಗ್ಗೆ ಮಾತುಕತೆ ಮಾಡುವ ಸಲುವಾಗಿ ೨ ದಿವಸಗಳನ್ನು ಫಿಕ್ಸ್ ಮಾಡಿದರು. ಆದರೆ ಆ ಬಗ್ಗೆ ಚರ್ಚೆಯೇ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಡೆಯಲಿಲ್ಲ. ಇವತ್ತು ಎಂ.ಇ.ಐ. ಮುಚ್ಚುವ ಸ್ಥಿತಿಗೆ ಬಂದಿದೆ. ಅಲ್ಲಿ ಪ್ರೊಡಕ್ಷನ್‌ಗೆ ೧೫ ಲಕ್ಷ ಬೇಕಾದರೆ ಅಲ್ಲಿಯ ಕಾರ್ಮಿಕರ ಸಂಬಳಕ್ಕೆ ೩೫ ಲಕ್ಷ ರೂಪಾಯಿ ಬೇಕಾಗುತ್ತದೆ. ಇದೇ ರೀತಿ ನಿಮ್ಮ ಸಿಲ್ಕ್ ಬೋರ್ಡ್ ಕೂಡ ಮುಚ್ಚುವ ಸ್ಥಿತಿಯಲ್ಲಿದೆ. ನಾನು ತಮಗೆ ಹೇಳುತ್ತೇನೆ, ದಯವಿಟ್ಟು ಈ ಎಂ.ಇ.ಐ. ನ್ನು ಮುಚ್ಚುವಂತೆ ಮಾಡಬೇಡಿ. ಇದು ಚೆನ್ನಾಗಿ ನಡೆಯುವುದಕ್ಕೆ ನೀವು ಸಹಾಯ ಮಾಡಬೇಕು. ಅಲ್ಲಿಯ ಕಾರ್ಮಿಕರ ಸಹಕಾರವನ್ನು ಪಡೆದು ಅದು ಯಾವ ರೀತಿಯಲ್ಲಿ ಉತ್ತಮವಾಗಿ ನಡೆಯುವುದಕ್ಕೆ ಸಹಾಯ ಮಾಡಬೇಕೋ ಅದನ್ನು ಮಾಡಿ. ಒಟ್ಟಿನಲ್ಲಿ ಅದು ಮುಚ್ಚಿ ಹೋಗದಂತೆ ನೋಡಿಕೊಳ್ಳಬೇಕು. ಈ ಸಾರಿ ಇದರಲ್ಲಿ ಎಂ. ಇ. ಐ. ನ ಹೆಸರನ್ನು ಸೇರಿಸದೇ ಇರುವುದು ಸರಿಯಲ್ಲ. ಈಗಲಾದರೂ ಸೇರಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ.

ಇನ್ನು ಎರಡನೆಯ ವಿಷಯವೆಂದರೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ವಿಚಾರಕ್ಕೆ ಸಂಬಂಧ ಪಟ್ಟಿದ್ದುದು. ಪೂರಕ ಅಂದಾಜುಗಳ ಪುಸ್ತಕದ ೨೩ನೇ ಪುಟದಲ್ಲಿ "ಇತರೆ ವಿವಿಧ ಸೇವೆಗಳು" ಎಂಬುದಕ್ಕೆ ವಿವರಣಾತ್ಮಕ ಟಿಪ್ಪಣಿಯಲ್ಲಿ ಹೀಗೆ ಹೇಳಿದ್ದೀರಿ :

> "ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ಸ್, ಇವರು ಕರ್ನಾಟಕ ರಾಜ್ಯ ಲಾಟರಿ ಮಾರಾಟಕ್ಕೆ ಏಕೈಕ ಏಜಂಟರಾಗಿದ್ದು ಇವರಿಗೆ ನೀಡುವ ಕಮಿಷನ್ ದರವನ್ನು ಶೇ. ೩೨ ರಿಂದ ೩೭ಕ್ಕೆ ದಿನಾಂಕ: ೨೫-೧೧-೮೮ರಿಂದ ಅನ್ವಯವಾಗುವಂತೆ ಹೆಚ್ಚಿಸಲಾಗಿದೆ. ಈ ಹೆಚ್ಚಿನ ಕಮಿಷನ್ ದರವು ಉಪ ಏಜೆಂಟರುಗಳಿಗೆ ನೀಡಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ. ಕಮಿಷನ್ ಹೆಚ್ಚಳದಿಂದ ಹೆಚ್ಚು ವೆಚ್ಚ ಬಂದಿದೆ."
>
> "ಬಹುಮಾನ ಮೊತ್ತವನ್ನು ಏರಿಸಿರುವುದರಿಂದ ಮತ್ತು ಹೆಚ್ಚು ಡ್ರಾಗಳನ್ನು ಮಾಡಿರುವುದರಿಂದ ಸೇವಾ ಶುಲ್ಕದಲ್ಲಿ ಹೆಚ್ಚು ವೆಚ್ಚ ಉಂಟಾಗಿದೆ."

ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಇದರಿಂದ ಏನು ಅರ್ಥವಾಗುತ್ತದೆಂದರೆ ಮೊದಲು ಈ ಲಾಟರಿ ಟಿಕೆಟ್‌ಗಳನ್ನು ಜನರು ಏನು ಕೊಂಡುಕೊಳ್ಳುತ್ತಿದ್ದರು ಅದು ಈಗ ಕಡಿಮೆಯಾಗುತ್ತಾ ಬಂದಿದೆ. ಆದ್ದರಿಂದ ಬಹುಮಾನದ ಮೊತ್ತವನ್ನು ಜಾಸ್ತಿ ಮಾಡುತ್ತಿದ್ದೇವೆ, ಏಜೆಂಟ್‌ಗಳ ಕಮಿಷನ್‌ನ್ನು ಹೆಚ್ಚು ಮಾಡುತ್ತಿದ್ದೇವೆ ಎಂದು ಹೇಳಿದಂತಾಗಿದೆ.

ಸ್ವಾಮಿ, ನಾನಾದರೂ ಸರ್ಕಾರಕ್ಕೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಈ ಲಾಟರಿಯ ಬಗ್ಗೆ ಜನರಲ್ಲಿ ಅಭಿಮಾನವೇ ಇಲ್ಲದಿದ್ದರೆ ಇದು ಏತಕ್ಕೆ ಇರಬೇಕು ? ಮಾನ್ಯ ಸಭಾಪತಿಯವರೆ, ಎಂ.ಎಸ್.ಐ.ಎಲ್.ಗೆ ಕಮಿಷನ್ ಅನ್ನು ಇನ್‌ಕ್ರೀಸ್ ಮಾಡಿದ್ದೀರಿ ಅದು ಅರ್ಥವಿಲ್ಲದ ಮಾತು. ಇವರ ಉಪ ಏಜೆಂಟ್ಸ್ ಯಾರು ? ಅವರು ಸರಿಯಾಗಿ ಕೆಲಸ ಮಾಡಿದ್ದಾರೋ ಇಲ್ಲವೋ, ಎಂಬುದು ಗೊತ್ತಿಲ್ಲ. ಹೆಚ್ಚು ಕಮಿಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಎಲ್ಲಾ ಪೂರ್ತಿ ವಿವರಗಳು ಇಲ್ಲ. ಸುಮ್ಮನೆ ಬಹುಮಾನದ ಮೊತ್ತವನ್ನು ಏರಿಸಿದ್ದಾರೆ. ಲಾಟರಿ ಕಮಿಷನ್ ಅನ್ನು ಜಾಸ್ತಿ ಮಾಡಿರುವುದು ಸರಿಯಾದ ಧೋರಣೆ ಅಲ್ಲ. ಅದನ್ನು ಪ್ರತಿಭಟಿಸಬೇಕಾಗಿದೆ. ಇದು ಎರಡನೆಯ ವಿಷಯ.

ಇನ್ನು ಮೂರನೆಯ ವಿಷಯ ಪೊಲೀಸ್ ಮತ್ತು ಅಗ್ನಿಶಾಮಕ ಸೇವೆಯ ಬಗ್ಗೆ. ಪುಟ ೨೭ರಲ್ಲಿ ಏನು ಹೇಳಿದ್ದೀರೆಂದರೆ, ಪೋಲೀಸ್ ಸಿಬ್ಬಂದಿಗೆ ಸಮವಸ್ತ್ರ ಒದಗಿಸಲು ಹಣದ ಅಗತ್ಯತೆ ೭೫ ಲಕ್ಷ ರೂಪಾಯಿಯೆಂದು, ಇದು ಅವಶ್ಯಕವಾಗಿದೆ, ಎರಡನೆಯ ಬೇಡಿಕೆ ಏನೆಂದರೆ ಬೀದರ್ ಘಟನೆಯ ಬಗ್ಗೆ ಅಲ್ಲಿನ ಸಂತ್ರಸ್ತರಿಗೆ ಪರಿಹಾರ ಕೊಡಲು ೧೫ ಲಕ್ಷ ರೂಪಾಯಿ ಅವಶ್ಯಕತೆ ಇದೆಯೆಂದು ಹೇಳಿದ್ದೀರಿ. ಪೋಲೀಸಿನವರಿಗೆ ಸಮವಸ್ತ್ರವನ್ನು ಒದಗಿಸಿಕೊಡಬೇಡಿಯೆಂದು ನಾನು ಹೇಳುವುದಿಲ್ಲ. ಅವರಿಗೆ ಒದಗಿಸಿ ಕೊಡಲೆ ಬೇಕು. ಅದಕ್ಕಿಂತ ಬಹಳ ಮುಖ್ಯವಾಗಿ ಅವರಿಗೆ ಮನೆಗಳು ಬೇಕು. ಅವರುಗಳಿಗೆ ಮನೆಗಳು ಇಲ್ಲದೆ ಬಹಳ ತೊಂದರೆಯನ್ನು ಪಡುತ್ತಿದ್ದಾರೆನ್ನುವ ವಿಷಯ ಪದೇ ಪದೇ ಈ ಮನೆಯಲ್ಲಿ ಬಂದಿದೆ, ಧರ್ಮವೀರ ಕಮಿಷನ್ ಅವರು ಇದರ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಆದರೂ ಅವರಿಗೆ ಮನೆಗಳನ್ನು ಕಟ್ಟಿಕೊಡುವುದು ನಿಧಾನಗತಿಯಲ್ಲಿ ಹೋಗುತ್ತಿದೆ. ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಇನ್ನು ಬೀದರ್ ಘಟನೆಯ ಬಗ್ಗೆ ನೊಂದವರಿಗೆ ಪರಿಹಾರವನ್ನು ನೀಡಲು ೧೫ ಲಕ್ಷ ರೂಪಾಯಿಗಳ ಅವಶ್ಯಕತೆ ಇದೆಯೆಂದು ಹೇಳಿದ್ದೀರಿ, ಈ ೧೫ ಲಕ್ಷ ರೂಪಾಯಿಗಳ ಸಂಖ್ಯೆಯು ಹೇಗೆ ಬಂತು ಎಂಬುದು ಗೊತ್ತಾಗುತ್ತಿಲ್ಲ. ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದರು ಶ್ರೀ ಮುಂದ್ಕಾಳ್‌ರವರ ಅಧ್ಯಕ್ಷತೆಯಲ್ಲಿ, ನಾನೂ ಕೂಡ ಆ ಸಮಿತಿಯ ಜೊತೆಯಲ್ಲಿ ಅಲ್ಲಿಗೆ ಹೋಗಿ ಬಂದಿದ್ದೇನೆ. ಅಲ್ಲಿ

ಆಗಿರತಕ್ಕ ತೊಂದರೆ ಹಾಗೂ ನಷ್ಟ ೧೫ ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಇದೆ. ಆರು ಜನ ಸಿಖ್ ವಿದ್ಯಾರ್ಥಿಗಳು ಸತ್ತಿದ್ದಾರೆ. ಮನೆಗಳು ಹಾಗೂ ಅಂಗಡಿಗಳಿಗೆ ಬೆಂಕಿ ಹತ್ತಿಕೊಂಡು ಸುಟ್ಟುಹೋಗಿವೆ. ಅವುಗಳನ್ನೆಲ್ಲಾ ನಾವು ಹೋಗಿ ನೋಡಿಕೊಂಡು ಬಂದಿದ್ದೇವೆ. ಒಂದೊಂದು ಅಂಗಡಿಯಲ್ಲಿ ೧೫-೨೦ ಲಕ್ಷ ರೂಪಾಯಿಗಳು ನಷ್ಟವಾಗಿದೆ. ಅಲ್ಲಿ ಸುಮಾರು ೫೦-೬೦ ಅಂಗಡಿಗಳಿಂದ ಎಷ್ಟು ನಷ್ಟವಾಗಿದೆ ಎಂಬುದನ್ನು ತಾವೇ ಊಹಿಸಬಹುದು. ಅವರಿಗೆ ನೀವು ಸುಮಾರು ಒಂದೂವರೆಯಿಂದ ಎರಡು ಕೋಟಿ ರೂಪಾಯಿಯ ಪರಿಹಾರವನ್ನು ಕೊಡಬೇಕಾಗುತ್ತದೆ. ತಾವು ಕೊಟ್ಟಿರತಕ್ಕದ್ದು ಬಹಳ ಕಡಿಮೆ ಇದೆ. ಬೀದರ್ ಪ್ರಶ್ನೆಯನ್ನು ತಾವು ಸಣ್ಣದಾಗಿ ಪರಿಗಣಿಸುವುದು ಸರಿಯಲ್ಲ. ಬೀದರ್ ಪ್ರಶ್ನೆ ರಾಷ್ಟ್ರವ್ಯಾಪ್ತವಾದ ಪ್ರಶ್ನೆಯಾಗಿದೆ. ಎಲ್ಲರೂ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಮೊನ್ನೆಯ ಪತ್ರಿಕೆಯಲ್ಲಿ ಏನು ಬಂದಿತು ಎಂದರೆ ದರ್ಶನ್‌ಸಿಂಗ್, ಎಸ್.ಜಿ.ಪಿ.ಸಿ. ಮುಖಂಡರು ಬೀದರ್ ಬಗ್ಗೆ ಏನು ಹೇಳಿದ್ದಾರೆಂದರೆ

> "You have got the mother. The child has to cry and then only you may get something..."

ಅವರು ವ್ಯಂಗ್ಯವಾಗಿ ಪರಿಹಾರ ಕೊಟ್ಟಿರುವುದು ಕಡಿಮೆ ಎನ್ನುವ ರೀತಿಯಲ್ಲಿ ಈ ರೀತಿ ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ನಾನು ಕೂಡ ಡೆಲ್ಲಿಗೆ ಹೋದಾಗ ಬೀದರ್ ಬಗ್ಗೆ ಅಲ್ಲಿನ ಜನರಲ್ಲಿ ಸರಿಯಾದ ಅಭಿಪ್ರಾಯ ಇನ್ನೂ ಮೂಡಿಬಂದಿಲ್ಲ. ಪರಿಹಾರ ಸರಿಯಾಗಿ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಬೀದರ್ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ತಮ್ಮ ಪೂರಕ ಬಜೆಟ್‌ನಲ್ಲಿ ಕೊಟ್ಟಿರತಕ್ಕ ಹಣವನ್ನು ನೋಡಿದರೆ ತಾವು ಇದರ ಬಗ್ಗೆ ಹೆಚ್ಚು ಯೋಚನೆ ಮಾಡಿಲ್ಲವೆಂದು ತೋರುತ್ತದೆ. ಈಗಲೂ ಅಲ್ಲಿ ತೊಂದರೆ ಇದೆ. ಮೊನ್ನೆ ಎರಡು ಘಟನೆಗಳು ಆಗಿವೆ. ಅಲ್ಲಿ ಟೆನ್‌ಷನ್ ಇದೆ. ಇದರ ಬಗ್ಗೆ ಏನು ಮಾಡಿದ್ದೀರೆಂಬುದರ ಬಗ್ಗೆ ಉತ್ತರ ಕೊಡಬೇಕು. ಇದರ ಹೊಣೆಯನ್ನು ನೀವೇ ಹೊತ್ತುಕೊಳ್ಳಬೇಕಾಗಿದೆ.

೧-೦೦ ಪಿ. ಎಂ.

ಇನ್ನೊಂದು ಕಡೆಯದಾಗಿ ಹೇಳಿ ಮುಗಿಸುತ್ತೇನೆ, ಅದೇನೆಂದರೆ ಗ್ರಾಮೀಣ ಸಂಘಟನ ಅಭಿವೃದ್ಧಿ ಯೋಜನೆ. ಇನ್ನೊಂದು ಪೇಜ್ ನಂಬರ್ ೫೫-೫೬ರಲ್ಲಿ ಸಮುದಾಯಕ ಅಭಿವೃದ್ಧಿಯಲ್ಲಿ ಕೊಟ್ಟಿರುವುದು ವಿವರಣಾತ್ಮಕ ಟಿಪ್ಪಣಿ ಬಾಬು ಸಂಖ್ಯೆ ೧ರಲ್ಲಿ ಏನಿದೆ ಎಂದರೆ "Karnataka shows the way" ಪುಸ್ತಕದ ಮುದ್ರಣ ವೆಚ್ಚವನ್ನು ಭರಿಸಲು ಕಛೇರಿ ವೆಚ್ಚದಲ್ಲಿ ಏರಿಕೆ ಉಂಟಾಗಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಖಾಲಿ ಹುದ್ದೆಗಳಿಗೆ ಚುನಾವಣೆಗಳನ್ನು ನಡೆಸಲು ಮತ್ತು ಮಸಿಯ ದರಗಳನ್ನು ಪರಿಷ್ಕರಿಸಿದ್ದರಿಂದ ಮೈಸೂರು ಲ್ಯಾಕ್ ಮತ್ತು ಪೈಂಟ್ ವರ್ಕ್ಸ್‌ಗೆ ಪಾವತಿ ಮಾಡಬೇಕಾದ ಬಾಕಿಯ ಪ್ರಯುಕ್ತ ಏರಿಕೆ ಉಂಟಾಗಿದೆ.

ಕರ್ನಾಟಕ ಪಂಚಾಯತಿ ರಾಜ್ಯದ ಮೇಲೆ ಕರ್ನಾಟಕ ಪತ್ರಿಕೆ ಅಕಾಡೆಮಿಯು ವಿಚಾರ ಸಂಕೀರ್ಣವನ್ನು ಏರ್ಪಡಿಸಿತ್ತು. ಇದರ ಖರ್ಚಿನ ಬಾಬ್ತು ಪಾವತಿ ಮಾಡಲು ೧.೮೦ ಲಕ್ಷ ರೂ.ಗಳು ಬೇಕಾದರೆ ಇಂಟರಿಮ್ ಮಂಡಲದ ರಚನೆಯಾದ್ದರಿಂದ ಪಾವತಿ ಮಾಡಬಹುದಾದ ಪರ್‌ಕ್ಯಾಪಿಟ ಅನುದಾನವು ಹೆಚ್ಚಿದೆ. ಆದ್ದರಿಂದ ಪೂರಕ ಅನುದಾನದ ಬೇಡಿಕೆ ಎಂದು ಬಾಬು ಸಂಖ್ಯೆ ೫ರಲ್ಲಿ ಆಯವ್ಯಯದಲ್ಲಿ ೪೨.೧೦ ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಭಾರತ ಸರಕಾರವು ಈ ಯೋಜನೆಯ ವೆಚ್ಚವನ್ನು ೬೨.೫೦ ಲಕ್ಷ ರೂ.ಗಳಿಗೆ ಏರಿಸಿದೆ. ಈ ವ್ಯತ್ಯಾಸವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ ಎಂದು ಹೇಳಿಬಿಟ್ಟು ಅದರಲ್ಲಿ ಹೇಳಿದ್ದಾರೆ. ಇದರಲ್ಲಿ ನಾನಾದರೂ ಹೇಳುವುದೇನೆಂದರೆ ಕರ್ನಾಟಕ ಶೋಸ್ ದಿ ವೇ ಪುಸ್ತಕದ ಮುದ್ರಣದ ವೆಚ್ಚವನ್ನು ಏತಕ್ಕೆ ಭರಿಸಬೇಕು ? ಕರ್ನಾಟಕ ಶೋಸ್ ದಿ ವೇ ಪುಸ್ತಕವನ್ನು ನೋಡಿದರೆ ನನಗೆ ಇಂಥ ಒಂದು ಪುಸ್ತಕವನ್ನು ಪ್ರಿಂಟ್ ಮಾಡಬೇಕಾಗಿತ್ತೇ ಎನ್ನುವ ಪ್ರಶ್ನೆ ಬರುತ್ತದೆ. ಇದಕ್ಕಾಗಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಎಲ್ಲಾ ಪುಸ್ತಕಗಳು ಚೆನ್ನಾಗಿ ಬರುತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮಂತ್ರಿಗಳಾಗಿದ್ದಾಗ ತಂದಂಥ ಪುಸ್ತಕಗಳು, ಅವರ ಹೆಸರಿನಲ್ಲಿಯೇ ಬಂದಿದೆ. ಬಹಳ ಚೆನ್ನಾಗಿದೆ ಕಂಟೆಂಟ್ಸ್ ಸರಿಯಾಗಿದೆ, ಅದರ ಫಾರಮ್ ಬ್ಯೂಟಿಫುಲ್ ಆಗಿದೆ. ಆದರೆ ಇಷ್ಟೊಂದು ದುಡ್ಡನ್ನು ವೆಚ್ಚ ಮಾಡಿ ತರುವ ಔಚಿತ್ಯವಿತ್ತೆ ಎನ್ನುವುದು. ಬೇರೆ ಪಂಚಾಯತ್ ಇವೇ ಮುಂತಾದ ಬಾಬುಗಳಿಗೆ ಹಣವನ್ನು ಖರ್ಚು ಮಾಡಿದ್ದರೆ ತೊಂದರೆ ಏನು ಇರುತ್ತಿರಲಿಲ್ಲ. ಇಷ್ಟು ಮಾತ್ರ ಹೇಳಿ ಈ ಪೂರಕ ಬೇಡಿಕೆ ಮಂಡನೆ ಮಾಡಿದ್ದರ ಮೇಲೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈಗ ಪೂರಕ ಅಂದಾಜು ಪಟ್ಟಿಯಲ್ಲಿ ಪ್ರಾರಂಭಿಕ ಟಿಪ್ಪಣಿಯಲ್ಲಿ ಅವರು ಕೊಟ್ಟಿರುವ ೯೫.೪೮ ಕೋಟಿ ರೂಪಾಯಿಗಳಲ್ಲಿ ಸುಮಾರು ೪೪.೮೫ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ ಸಹಾಯಕ್ಕೆ ಸಂಬಂಧಪಟ್ಟ ಜಮೆಯಿಂದ ೬೮ ಲಕ್ಷ ರೂಪಾಯಿಗಳನ್ನು ಇತರೆ ಜಮೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ ೪೯.೯೭ ಕೋಟಿ ರೂಪಾಯಿ ಎಂದು ಕೊಟ್ಟಿದೆ. ಈಗ ಸ್ವಲ್ಪ ಇದರ ಬಗ್ಗೆ ಪರಿಶೀಲನೆ ಮಾಡಿದರೆ, ಈ ಅಭಿವೃದ್ಧಿಯ ಬಗ್ಗೆ ಸಪ್ಲಿಮೆಂಟರಿಯಲ್ಲಿ ಏನಾದರೂ new services ಕೇಳಿದ್ದರೆ ಬಹಳ ಸಂತೋಷವಾಗುತ್ತಿತ್ತು, ಮಂಜೂರು ಮಾಡಬಹುದಾಗಿತ್ತು. ಆದರೆ ಇದೆಲ್ಲ ಐಟಮ್‌ಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವುದಕ್ಕೆ ಹೋಗಿದ್ದಾರೆ. ಇದರಲ್ಲಿ ಒಂದು ವಿಚಾರವನ್ನು ಮಾತ್ರ ವಿಶೇಷವಾಗಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಾವು ೪೯ನೇ ಪುಟದಲ್ಲಿ ಅಭಿಯಾಚನೆ ಕ್ರಮಾಂಕ ೩೨ರಲ್ಲಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ ಕೊಡತಕ್ಕಂಥದ್ದು ಯಾವಾಗಲೂ ಕೂಡ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಕೊಡುತ್ತಿಲ್ಲ. ಬಹುಶಃ ೧೯೮೭ನೇ ಇಸವಿಯಲ್ಲಿ ಬಹಳ ವಿಪರೀತವಾಗಿ ಪ್ರವಾಹ ಬಂದಿತ್ತು. ಬೆಂಗಳೂರಿನಲ್ಲಿ ಮತ್ತು ಇನ್ನೂ ಅನೇಕ ಕಡೆಗಳಲ್ಲಿ ಬಹಳವಾಗಿ ನೈಸರ್ಗಿಕ ವಿಕೋಪಕ್ಕೆ ಒಳಗಾಯಿತು. ಅದಕ್ಕೆ ಪರಿಹಾರವೆಂದು ಹೇಳಿ ೨೦೦–೨೫೦ ಕೋಟಿ ರೂಪಾಯಿಗಳನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೊರೆಂಡಮ್ ಕಳುಹಿಸಿದ್ದೀರಿ. ಇದರ ಬಗ್ಗೆ ನಿನ್ನೆ ಇಲ್ಲಿ ಸಾಕಷ್ಟು ಭಾಷಣ ಕೂಡ ನಡೆಯಿತು. ೨೫೦ ಕೋಟಿ ರೂಪಾಯಿಗಳಷ್ಟು ಪ್ರವಾಹದ ಹಾವಳಿಯಿಂದ ಡ್ಯಾಮೇಜ್ ಆಗಿದೆ ಎಂದು ಅಷ್ಟೇ ಪರಿಹಾರವನ್ನು ಕೊಡುತ್ತಾರೆಂದು ಜನರೂ ಕೂಡ ಕಾದಿದ್ದರು. This cat is out of the bag. ನೀವು ಏನು ಪರಿಹಾರ ೨೦೦–೨೫೦ ಕೋಟಿ ರೂಪಾಯಿಗಳನ್ನು ಕೇಳಿ ಕೇಂದ್ರ ಸರ್ಕಾರಕ್ಕೆ ಮೆಮೊರೆಂಡಮ್ ಕಳುಹಿಸಿಕೊಟ್ಟಿರಿ. ಅದರ ಬಗ್ಗೆ ಸಾಕಷ್ಟು ಭಾಷಣ ಕೂಡ ನಡೆಯಿತು. ೨೫೦ ಕೋಟಿ ರೂಪಾಯಿಗಳಷ್ಟು ಪ್ರವಾಹದಿಂದ ಡ್ಯಾಮೇಜ್ ಆಗಿದೆ ಅಷ್ಟು ಪರಿಹಾರವನ್ನು ಕೊಡುತ್ತಾರೆಂದು ಜನರೂ ಕೂಡ ಕಾದಿದ್ದರು. ೨೦೦–೨೫೦ ಕೋಟಿ ರೂಪಾಯಿಗಳ ಏನು ಮೆಮೊರೆಂಡಮ್ ಕೊಟ್ಟಿದ್ದೀರಿ ಅದು ಕ್ರಿಡಿಬಲ್ ಅಲ್ಲ. ಅದನ್ನು ದೇಶದ ಮುಂದೆ ಇಡಬೇಕಾದಂಥ ಪರಿಸ್ಥಿತಿ ಬಂದಿದೆ ಈ ನೈಸರ್ಗಿಕ ವಿಕೋಪದ ಬಗ್ಗೆ ಇಷ್ಟು ಭೀಕರವಾದ ಪರಿಸ್ಥಿತಿಯನ್ನು ಕರ್ನಾಟಕ ರಾಜ್ಯದಲ್ಲಿ ಜನತೆ ಎದುರಿಸಿದರೂ ಕೂಡ ಜನರ ಕಣ್ಣಿಗೆ ಮಣ್ಣೆರಚಿ ರಾಜಕೀಯದ ಸವಾಲನ್ನು ಕೇಂದ್ರ ಸರ್ಕಾರಕ್ಕೆ ಎಸೆಯಬೇಕು ಎಂದು ಮಾಡಿದಂಥ ಖರ್ಚು ೯ ಕೋಟಿ ೩೮ ಲಕ್ಷ ರೂಪಾಯಿಗಳು ಮಾತ್ರ. ಕೇಂದ್ರ ಸರ್ಕಾರ ತನ್ನ ಅಧ್ಯಯನ ತಂಡವನ್ನು ಇಲ್ಲಿಗೆ ಕಳುಹಿಸಿ, ಅವರು ಈ ವಿಚಾರಗಳನ್ನು ಪರಿಶೀಲನೆ ನಡೆಸಿ ೧೫ ಕೋಟಿ ರೂಪಾಯಿಗಳವರೆಗೆ ಪರಿಹಾರ ಕೊಡಬಹುದೆಂದು ಹೇಳಿದ್ದಾರೆ. ನಿಮ್ಮ ೨೫೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಬಿಡಿ. ಕೇಂದ್ರ ಅಧ್ಯಯನ ಸಮಿತಿಯವರು ಬಂದು ಇಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ ಅದರಂತೆ ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲವೆಂದರೆ ಜನರ ಬಗ್ಗೆ ನಿಮಗೆ ಯಾವ ರೀತಿ ಅನುಕಂಪ ಇದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ನೀವು ಮೊಸಳೆ ಕಣ್ಣೀರು ಸುರಿಸುತ್ತೀರಿ. ಅಂದರೂ ಅದು ತಪ್ಪಾಗುತ್ತದೆ. ನೀವು ಏನು ಕಣ್ಣೀರು ಸುರಿಸುತ್ತೀರೋ ಗೊತ್ತಿಲ್ಲ. ೯ ಕೋಟಿ ೩೮ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಜನರಿಗೆ ವಂಚನೆ ಮಾಡಿದ್ದೀರೆಂದು ಹೇಳಬೇಕಾಗಿದೆ. ಆದುದರಿಂದ ಈ ತರಹ ಮೆಮೋರ್ಯಾಂಡಂ ಅನ್ನು ಕೊಟ್ಟಾಗ ಜನರು ನಂಬುತ್ತಾರೆ. ಕೇಂದ್ರ ಸರ್ಕಾರವೂ ನಂಬುತ್ತದೆಯೇ? ಕೇಂದ್ರ ಸರ್ಕಾರ ೧೫ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಬಹುದೆಂದು ಹೇಳಿರುವಾಗ ನೀವು ೯ ಕೋಟಿ ೩೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಯಾವ ರೀತಿ ಬೆಲೆ ನಮ್ಮ ಸರ್ಕಾರಕ್ಕೆ ಬರುತ್ತದೆಂದು ವಿಶೇಷವಾಗಿ ಪ್ರಸ್ತಾಪಿಸಬೇಕಾಗಿದೆ. ಪುಟ ೨೧ನ್ನು ನೋಡಿದರೆ, ಸ್ಮಾಲ್ ಸೇವಿಂಗ್ಸ್‌ನಲ್ಲಿ ಪ್ರೋತ್ಸಾಹಕ ಬಹುಮಾನವಾಗಿ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಇದೆ. ಇದರಲ್ಲಿ ಯಾವ ರೀತಿ ಕೊಟ್ಟಿದ್ದೀರಿ? ಯಾವ ಯಾವ ಸಂಸ್ಥೆಗಳಿಗೆ ಕೊಟ್ಟಿದ್ದೀರಿ ಎಂಬುದು ಬೇಕು. ರಾಷ್ಟ್ರೀಕೃತ ಬ್ಯಾಂಕುಗಳು ಏನಿರುತ್ತವೆ ಅವುಗಳಿಗೆ ಮಾರ್ಚಿ ೨೮–೩೦ ರೊಳಗೆ ಸ್ಮಾಲ್ ಸೇವಿಂಗ್ಸ್ ಅನ್ನು ಕೊಡುವುದು. ಮತ್ತೆ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಅದರ ಲೆಕ್ಕವನ್ನು ತೋರಿಸುವುದು. There should not be a hide and seek game between the Government of India and Government of Karnataka. ಹೀಗೆ ನಿಮ್ಮ ಅಡ್ಜಸ್ಟ್‌ಮೆಂಟಿಗೆ ಇಷ್ಟು ಅಮೌಂಟ್ ಸಿಗುತ್ತದೆ. ಆರ್.ಬಿ.ಐ. ಅಡ್ಜಸ್ಟ್‌ಮೆಂಟಿಗೆ ಬಂದಾಗ ನಿಮಗೆ ಅದು ಸಿಗುತ್ತದೆ. You get the money by March

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

end and give back the money in April 1st week, Hide and seek game ಇದು ನಮಗೆ ಬೇಕು. ಸ್ಮಾಲ್ ಸೇವಿಂಗ್ಸ್ ಯೋಜನೆ ಏನಿದೆ ಇದು ಮೊದಲಿನ ಹಾಗೆ ನಡೆದುಕೊಂಡು ಬಂದಿಲ್ಲ. ಮಾರ್ಚಿ ಕೊನೆಯೊಳಗೆ ಬ್ಯಾಂಕುಗಳನ್ನು ಪ್ರೋತ್ಸಾಹಿಸಿ ಹಣ ವಸೂಲ್ಮಾಡುವುದು ಮತ್ತು ಅವರಿಗೆ ಪ್ರೋತ್ಸಾಹ ಕೊಡುವುದು. ಮತ್ತೆ ಏಪ್ರಿಲ್‌ನಲ್ಲಿ ಪುನಃ ಹಣವನ್ನು ಹಿಂದಕ್ಕೆ ಕೊಡುವುದು. ಈ ತರಹ ವ್ಯವಹಾರ ಮಾಡಿ ಯಾರಿಗೆ ಯಾರು ವಂಚಿಸುತ್ತಿದ್ದಾರೆ ಎಂಬುದನ್ನು ನೋಡಬೇಕು. ಆದುದರಿಂದ ಈ ತರಹ ಪ್ರೋತ್ಸಾಹಕ ಬಹುಮಾನವನ್ನು ಏನು ಕೊಡುತ್ತಿದ್ದಾರೆ it is not a small savings scheme in the real terms. This is a froud on the people. ರಿಯಲ್ ಆಗಿ ಪ್ರೋತ್ಸಾಹಕ ಬಹುಮಾನಗಳನ್ನು ಕೊಟ್ಟು, ರೀಯಲ್ ಆಗಿ ಬ್ಯಾಂಕಿನವರು ಮತ್ತಿತರರು ಇನ್‌ವೆಸ್ಟ್‌ಮೆಂಟನ್ನು ಮಾಡಿದರೆ then you have given small savings here ಏಕೆಂದರೆ ಬ್ಯಾಂಕಿನವರನ್ನು ಸ್ಮಾಲ್ ಸೇವಿಂಗ್ಸ್‌ಗೆ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಹೇಳುತ್ತಾ small savings in Karnataka it is losing its sanctity ಈ ರೀತಿಯಾಗಿ ಬ್ಯಾಂಕ್ ಮತ್ತಿತರರ ಜೊತೆಯಲ್ಲಿ ವ್ಯವಹಾರ ಮಾಡಿಕೊಂಡು ಪ್ರೋತ್ಸಾಹಕ ಬಹುಮಾನಗಳನ್ನು ಅವರಿಗೆ ಕೊಟ್ಟು this will be a froud on the people. I think a top level enquiry will have to be held. ಈ ರೀತಿಯಾಗಿ ಪ್ರೋತ್ಸಾಹಕ ಬಹುಮಾನಗಳನ್ನು ಕೊಡತಕ್ಕ ವ್ಯವಹಾರ ನಡೆದಿದೆ. ಇದು ಅವ್ಯವಹಾರ ಆಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮ್ಯಾನ್ಯುಪುಲೇಟಿವ್ deal ಆಗಿದೆ ಸ್ಮಾಲ್ ಸೇವಿಂಗ್ಸ್ ಈ ರೀತಿಯಾದರೆ ಹನಿ ಗೂಡಿ ಹಳ್ಳ ಆಗುವುದಿಲ್ಲ. ದೊಡ್ಡ ದೊಡ್ಡ ನದಿಗಳ ಸಂಘ ಮಾಡಿದ್ದೀರಿ. ಇಲ್ಲಿ ಹನಿಗೂಡುವಂಥ ಪ್ರಶ್ನೆ ಬರುವುದಿಲ್ಲ. You have your own concept ಟೋಟಲ್ ಔಟ್‌ಪುಟ್ ಅನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೀರಿ ಎಂದು ಶಭಾಶ್ ಹೇಳುತ್ತಿದ್ದೇವೆ. To certain extent, of course, it must have provided in the resources. But what is the quality of smali savings ultimately? How is going to sustain the total economy of the State? ಪ್ರೋತ್ಸಾಹಕ ಬಹುಮಾನ ಕೊಡುವಾಗ ಯಾರಿಗೆ ಕೊಡುತ್ತೀರಿ? sustained efforts ಮಾಡುವಂಥ ಸಂಸ್ಥೆಗಳಿಗೆ ಕೊಟ್ಟಿದ್ದರೆ we would have appreciated. But, I am afraid that has not been done. ನಾನು ಮೊದಲನೆಯ ಪುಟದಿಂದ ಕೊನೆಯ ಪುಟದವರೆಗೂ ಸೂಕ್ಷ್ಮವಾಗಿ ನೋಡುತ್ತಿದ್ದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್‌ಚಾರ್ಜ್ ಸಚಿವರು ಸಿದ್ದರಾಮಯ್ಯನವರು. ಅವರು ಆಗಾಗ್ಗೆ ಆಶ್ವಾಸನೆ ಕೊಡುತ್ತಾ ಬಂದರು. ಡ್ರೆಜಿಂಗ್ ಕಾರ್ಪೊರೇಷನ್ ಕೆಲಸ ಹಾಗೆಯೇ ನಿಂತಿದೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಳೂರು ಹಳೇ ಬಂದರು ಮತ್ತಿತರ ಕೆಲಸಗಳಿಗೆ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಆದರೆ ಬಜೆಟ್‌ನಲ್ಲಿ ಹಣ ಪ್ರಾವಿಷನ್ ಮಾಡಿಲ್ಲ. ಕಳೆದ ವರ್ಷ ಕೂಡ ಆಶ್ವಾಸನೆ ಕೊಟ್ಟಿದ್ದರು. ಅಲ್ಲಿ ಹಣ ಪಾವತಿ ಮಾಡಲು ಸಾಧ್ಯವಾಗದೆ ಕೆಲಸ ನಿಲ್ಲಿಸಿದ್ದಾರೆ. ಹಣ ಕೊಡುತ್ತೇವೆ ಎಂದು ಸಿದ್ದರಾಮಯ್ಯನವರು ಮೀಟಿಂಗ್‌ನಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಇಲ್ಲಿ ಏನಾದರೂ ಹಣ ಕೊಟ್ಟಿದ್ದು ಇದೆಯೇ ಎಂದು ಕಣ್ಣು ಹಾಯಿಸಿ ನೋಡಿದರೆ ಯಾವ ಹಣವೂ ನ್ಯೂ ಸರ್ವೀಸ್‌ನಲ್ಲಿ ಕಾಣಲಿಲ್ಲ. ಹಾಲಿ ಬಜೆಟ್‌ನಲ್ಲಿ ಕೂಡ ಪ್ರಾವಿಷನ್ ಇಲ್ಲ. ಅಲ್ಲಿ ಮೀನುಗಾರರು ಸಾವಿರಾರು ಜನ ಕಳೆದ ವರ್ಷ ಪ್ರತಿಭಟನೆ ಮಾಡಿದ್ದಾರೆ. ಡ್ರೆಜಿಂಗ್ ಮಾಡಬೇಕು ಎಂದು ತೀವ್ರವಾಗಿ ಪ್ರತಿಭಟನೆ ಮಾಡಿದ್ದಾರೆ. ಪಿ.ಡಬ್ಲ್ಯೂ.ಡಿ. ಕಾರ್ಯದರ್ಶಿಗಳು, ನಾವು ಎಲ್ಲಾ ಅಲ್ಲಿ ಹೋಗಿದ್ದೆವು. ಸಾಕಷ್ಟು ವಯಲೆನ್ಸ್ ಆಗಿದೆ. ನೀವು ವಯಲೆನ್ಸ್ ಮಾಡಬೇಡಿ, ಹಣ ಬಿಡುಗಡೆ ಮಾಡಿಸಿ ಕೆಲಸ ತೆಗೆದುಕೊಳ್ಳುವಂತೆ ಮಾಡುತ್ತೇವೆ ಎಂದು ನಾವು ಹೇಳಿದಮೇಲೆ ಅದು ನಿಂತಿತು. ಸರ್ಕಾರದಿಂದಲೂ ಆಶ್ವಾಸನೆ ಬಂದಿತ್ತು. ಆದರೆ ಆ ಮಾತನ್ನು ಉಳಿಸಿಕೊಳ್ಳಲಿಲ್ಲ. ನುಡಿದಂತೆ ನಡೆಯಬೇಕಲ್ಲ? ಹಿಂದೆ ಮಾಡದಿದ್ದರೆ ತಾವಾದರೂ ಮಾಡಿ. ನುಡಿದಂತೆ ನಡೆಯುತ್ತೇವೆ ಎಂದು ಹೇಳಿ. Atleast in a matter like this, you will have to shell down a few lakhs of rupees for dredging. ಹಣ ಬಿಡುಗಡೆ ಮಾಡಲಿಲ್ಲ. ಕೆಲಸ ನಿಲ್ಲಿಸಿದ್ದಾರೆ. ಉಲ್ಲಾಳದಲ್ಲಿ, ಕಾಪುವಿನಲ್ಲಿ, ಮುಲ್ಕಿಯಲ್ಲಿ ಇಡೀ ಕರಾವಳಿ ಪ್ರದೇಶದಲ್ಲಿ ಮನೆ ಮಠ ಹೋಗುತ್ತಿದೆ. ತೆಂಗಿನ ತೋಟಗಳು ಹೋಗುತ್ತಿವೆ. ಅಪಾರ ನಷ್ಟ ಆಗುತ್ತಿದೆ. ಅಲ್ಲಿ ಜನ ಭೀಕರವಾದಂಥ ಸಾವಿನ ದವಡೆಯಲ್ಲಿ ಸಿಲುಕಿ ಒದ್ದಾಡುವ ಪರಿಸ್ಥಿತಿ ಇರುವುದರಿಂದ ಸೀ ವೆಲ್ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ೪೯ ಕೋಟಿ ೩೫ ಲಕ್ಷ ರೂಪಾಯಿ

ಗಳಲ್ಲಿ ಕಡೇಪಕ್ಷ ೫ ಕೋಟಿ ರೂಪಾಯಿಗಳನ್ನಾದರೂ ಸೀವಾಲ್ ಕಟ್ಟುವುದಕ್ಕೆ ಮತ್ತು ಸೀ ಎರೋಷನ್ ತಡೆಯುವುದಕ್ಕೆ ಡ್ರೆಜಿಂಗ್ ಕಾರ್ಪೊರೇಷನ್‌ಗೆ ಕೊಟ್ಟಿದ್ದರೆ ತಮ್ಮ ಪ್ರಾಮಾಣಿಕತೆಗೆ ಶಹಭಾಸ್ ಎನ್ನಬಹುದಾಗಿತ್ತು. ಆದರೆ ಇದರಲ್ಲಿ ಕೊಟ್ಟಿಲ್ಲ. ದಿನ ಬೆಳಗಾದರೆ ಸಮುದ್ರ ಕೊರೆತ ಆಗುತ್ತಿದೆ. ಜನ ಕಷ್ಟ ಅನುಭವಿಸುತ್ತಿದ್ದಾರೆ ಅವರ ಮನೆಗಳು ಕೊಚ್ಚಿಕೊಂಡು ಹೋಗುತ್ತಿವೆ. ಇದಕ್ಕೆ ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಹಣ ಬಿಡುಗಡೆ ಮಾಡಿರಬಹುದು ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಇಲ್ಲೂ ಬಿಡುಗಡೆ ಮಾಡದಿರುವುದು ನೋಡಿ ನಮಗೆ ನಿರಾಶೆಯಾಗಿದೆ. ಏನು ತಾವು ಪೂರಕ ಬಜೆಟ್ ಮಂಡಿಸಿದ್ದೀರಿ ಇದು ಉಪಯುಕ್ತವಾಗಿ ಪ್ರಸಕ್ತ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯ ತಕ್ಕ ದೃಷ್ಟಿಯಲ್ಲಿ ಯಾವುದೇ ಕೊಡುಗೆಯನ್ನು ಕೊಡುತ್ತಿಲ್ಲ ಎಂದು ನಿರಾಶೆಯಿಂದ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲು).—ಮಾನ್ಯ ಅಧ್ಯಕ್ಷರೆ, ಡೈರಿ ಡೆವಲಪ್‌ಮೆಂಟ್ ಹಾಗೂ ಪಶುಸಂಗೋಪನೆ ವಿಚಾರದಲ್ಲಿ ಪೂರಕ ಬಜೆಟ್‌ನಲ್ಲಿ ೬೩ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಮಾನ್ಯ ಕೃಷ್ಣರವರು ಇಲ್ಲಿಯೇ ಇದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೧೦ ಲಕ್ಷ ಜನ ಹಾಲನ್ನು ಡೈರಿಗೆ ಹಾಕುವಂತಹವರು ಇರಬಹುದು. ಹಾಲಿನ ಬೆಲೆಯನ್ನು ಒಂದು ಲೀಟರ್‌ಗೆ ೫೦ ಪೈಸೆ ಜಾಸ್ತಿ ಮಾಡಿದ್ದಾರೆ. ಆದರೆ ಎಸ್.ಎನ್.ಎಫ್. ೮.೫ ಪರ್ಸೆಂಟ್ ಏನು ಇತ್ತು, ಈಗ ಅದನ್ನು ೮.೬ ಪರ್ಸೆಂಟ್‌ಗೆ ಹೆಚ್ಚು ಮಾಡಿದ್ದಾರೆ. ಇದರಿಂದ ಪ್ರತಿನಿತ್ಯ ೭೫ ಪರ್ಸೆಂಟ್ ರೈತರ ಹಾಲು ರಿಜೆಕ್ಟ್ ಆಗುತ್ತಿದೆ. ಇವರಿಗೆ ಹೇಳಿದ್ದೇವೆ. ಅವರಿಗೆ ಅರ್ಥವಾಗುವುದಿಲ್ಲ. ಅವರ ಅಧಿಕಾರಿಗಳೂ ಅವರಿಗೆ ಸರಿಯಾಗಿ ಗೈಡ್ ಮಾಡುತ್ತಿಲ್ಲ. ಇವರೂ ಅದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಇದರಿಂದ ನಮ್ಮ ರೈತರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಕಲೆ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವೆ ಇಲಾಖೆಗೆ ೨ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಡೆವಲಪ್‌ಮೆಂಟ್ ಆಫ್ ಕನ್ನಡ ಮತ್ತು ಯೂತ್ ಸರ್ವೀಸ್ ಬಗ್ಗೆ ಹೇಳುವುದಾದರೆ ಇವತ್ತೂ ಕರ್ನಾಟಕದಲ್ಲಿರತಕ್ಕ ಯುವಕರು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇವತ್ತೂ ೫ ಸಾವಿರ ಯುವಕರು ದೊಡ್ಡ ಡೆಮಾನ್‌ಸ್ಟ್ರೇಷನ್ ಮಾಡುತ್ತಿದ್ದಾರೆ. ಅವರಿಗೆ ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಬಗ್ಗೆ ಯೋಚನೆ ಮಾಡಿದ್ದಾರೆ. ಅದನ್ನು ಯಾವ ರೀತಿ ಈ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುತ್ತಾರೋ ಗೊತ್ತಿಲ್ಲ. ೨೦ ಸಾವಿರ ಜನರಿಗೆ ಕೆಲಸ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈಗ ಇರುವ ಯುವಕರು ವಿದ್ಯಾವಂತರು ಇದ್ದಾರೆ. ಸ್ಟೈಫಂಡರಿ ಗ್ರಾಜುಯೇಟ್ಸ್ ಯಾರು ಇದ್ದಾರೆ, ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ರಾತ್ರಿಯೆಲ್ಲಾ ಎಲ್ಲಾ ರೂಮುಗಳಿಗೂ ಮುತ್ತಿಗೆ ಹಾಕಿದ್ದರು. ಅವರ ಬಗ್ಗೆ ಕಾಳಜಿ ಇದೆಯೋ? ೧೦ ವರ್ಷಗಳಿಂದಲೂ ಅವರನ್ನು ಖಾಯಂ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅವರಲ್ಲಿ ಕೆಲವರಿಗೆ ೪–೫ ಮಕ್ಕಳು ಇದ್ದಾರೆ. ನಾನು ಅವರನ್ನು ಕುರಿತು ಇಬ್ಬರಿಗೇ ಲಿಮಿಟ್ ಮಾಡ್ರಯ್ಯ ಅಂದರೆ, ಅದಕ್ಕೇನು ಇಲ್ಲ ಜಾಸ್ತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಯೋಚನೆ ಮಾಡುತ್ತಿಲ್ಲ. ಇವರನ್ನು ಏನು ಈಗಾಗಲೇ ನೇಮಿಸಿಕೊಳ್ಳಲಾಗಿದೆ ಅವರಿಗೆ ಪೂರ್ಣ ಪ್ರಮಾಣದ ನೌಕರರನ್ನಾಗಿ ನೇಮಕ ಮಾಡಿಕೊಳ್ಳಬೇಕು. ಅದೇ ರೀತಿ ಸಿ.ಪಿ.ಎಡ್. ಆಗಿರತಕ್ಕ ಶಿಕ್ಷಕರನ್ನು ಕೂಡ ಖಾಲಿ ಇರತಕ್ಕ ಕಡೆಗಳಲ್ಲೆಲ್ಲಾ ನೇಮಕ ಮಾಡಿಕೊಳ್ಳಬೇಕು. ಕನ್ನಡ ಕಲ್ಚರ್ ಬಗ್ಗೆ ಹೇಳುವುದಾದರೆ, ಬಹಳ ಸೂಕ್ಷ್ಮವಾದ ವಿಚಾರ. ನಮಗೆ ಮುಖ್ಯವಾಗಿ ಮನರಂಜನೆ ಇರುವಂತಹ ಫಿಲಂ. ಈಗ ''ಅನಂತನ ಅವಾಂತರ ಎಂಬ ಬ್ಲೂ ಫಿಲಂ'' ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,— ಬ್ಲೂ ಫಿಲಂಗೆ ನೀವು ಏಕೆ ಹೋಗುತ್ತೀರಿ?

ಶ್ರೀ ಆರ್. ವೆಂಕಟರಾಮಯ್ಯ. ಮಲೆಯಾಳಂನಲ್ಲಿ ಜಾಸ್ತಿ ಈ ತರಹದ್ದು.

ಶ್ರೀ ಪಿ. ರತ್ನಾಕರ್.—ಎಲ್ಲಾ ಭಾಷೆಯ ಬ್ಲೂ ಫಿಲಂ ನೋಡುತ್ತಾರೆ ಎಂದು ಕಾಣುತ್ತದೆ.

ಶ್ರೀ ಸಿ. ಭೈರೇಗೌಡ. ಅವರ ದಿನಚರಿಯಲ್ಲಿ ಸಿನಿಮಾ ನೋಡತಕ್ಕಂತಹದ್ದೂ ಒಂದು ಕಾರ್ಯಕ್ರಮ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ರತ್ನಾಕರ್‌ರೆ ಇದೊಂದು ಪ್ರಿವಿಲೇಜ್. ಮಾನ್ಯ ಮುಖ್ಯಮಂತ್ರಿಗಳೂ ಅದನ್ನು ಹೋಗಿ ನೋಡಬೇಕು. ಅದು ಸರಿಯಾಗಿ ಇದೆಯೋ ಎಂಬುದನ್ನು ತೀರ್ಮಾನ ಮಾಡಲಿ. ತಾವೂ ಕೂಡ ಹೋಗಿ ನೋಡಿ. ಮುಖ್ಯಮಂತ್ರಿಯಾದಾಕ್ಷಣ ಅವರಿಗೆ ಏಕೆ ರಿಸ್ಟ್ರಿಕ್ಷನ್?

ಶ್ರೀ ಪಟಮಕ್ಕಿ ರತ್ನಾಕರ್. ಮಾರ್ಕ್ಸ್‌ವಾದಿಗಳೆಲ್ಲಾ ಸಿನಿಮಾ ನೋಡುವುದಕ್ಕೆ ಹೇಗೆ ಹೋಗುತ್ತಾರೆ?

ಶ್ರೀ ಎಂ. ಎಸ್. ಕೃಷ್ಣನ್. ಮಾರ್ಕ್ಸ್‌ವಾದಿಗಳೆಲ್ಲರೂ ಮನುಷ್ಯರಲ್ಲವೆ? ನೀವೊಬ್ಬರೇ ಮನುಷ್ಯರೆಂದು ತಿಳಿದುಕೊಂಡಿದ್ದೀರೇನು?

ಶ್ರೀ ಎಂ. ರಘುಪತಿ.—ಮಾರ್ಕ್ಸ್‌ವಾದಿಗಳು ಏಕೆ ಊಟ ಮಾಡಬೇಕು?

ಶ್ರೀ ಪಟಮಕ್ಕಿ ರತ್ನಾಕರ್.—ಮಾರ್ಕ್ಸ್‌ವಾದಿಗಳು ಇಂತಹ ಫಿಲಂನ್ನೇ ಹುಡುಕಿಕೊಂಡು ಏಕೆ ಹೋಗುತ್ತಾರೆ?

ಶ್ರೀ ಆರ್. ವೆಂಕಟರಾಮಯ್ಯ.—ಆ ಫಿಲಂನ್ನು ನೋಡಿದರೆ, ನಿಜವಾಗಿಯೂ ಬಹಳ ಕೆಟ್ಟ ಅಭಿರುಚಿಯನ್ನು ಪ್ರಚೋದನೆ ಮಾಡತಕ್ಕಂಥದ್ದು ಇದೆ. ಅದನ್ನು ತಾವೇ ಆದರೂ ನೋಡಿ. ಇಲ್ಲವೇ ಆ ಬಗ್ಗೆ ವರದಿಯನ್ನಾದರೂ ತರಿಸಿಕೊಳ್ಳಿ. ಅದನ್ನು ತಕ್ಷಣವೇ ಬ್ಯಾನ್ ಮಾಡಬೇಕು. ಅಂತಹ ಸಂಸ್ಕೃತಿ ಸಮಾಜದಲ್ಲಿ ಬೆಳೆಯಬಾರದೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಂತಹ ಫಿಲಂಗಳನ್ನು ತೆಗೆಯುವುದರಿಂದ ಹೆಚ್ಚು ಕಲೆಕ್ಷನ್ ಕೂಡ ಬರುತ್ತದೆ. ಅವರು ಅದಕ್ಕಾಗಿ ಹೆಚ್ಚು ಹಣವನ್ನೂ ಕೂಡ ಖರ್ಚು ಮಾಡಿಲ್ಲ. ಸರ್ಕಾರ ಕೂಡ ೨ ಲಕ್ಷ ರೂಪಾಯಿಗಳ ಹಣವನ್ನು ಕೊಡುತ್ತಿದ್ದಾರೆ. ಇದನ್ನು ದಯಮಾಡಿ ಪರಿಶೀಲಿಸಬೇಕು.

ಇನ್ನು ಆಪರೇಷನ್ ಬ್ಲಾಕ್ ಬೋರ್ಡ್‌ಗಾಗಿ ೫೦,೩೦,೦೦೦ ರೂಪಾಯಿಗಳನ್ನು ಕೇಳಿದ್ದಾರೆ. ಈ ಯೋಜನೆ ಬಹಳ ಮುಖ್ಯವಾದುದು. ಸ್ಕೂಲು ಬಿಲ್ಡಿಂಗ್ ಬಗ್ಗೆ ಹೆಚ್ಚು ಕಾಳಜಿ ವಹಿಸಿದ್ದಾರೆ. ಒಂದೊಂದು ತಾಲ್ಲೂಕನ್ನು ಒಂದೊಂದು ಜಿಲ್ಲೆಯಲ್ಲಿ ಸೇರಿಸಿದ್ದಾರೆ. ಒಂದು ಜಿಲ್ಲೆಯಲ್ಲಿ ೨ ತಾಲ್ಲೂಕುಗಳನ್ನಾದರೂ ಇದರಡಿಯಲ್ಲಿ ತರುವಂತಹ ವ್ಯವಸ್ಥೆ ಮಾಡಬೇಕು. ಈಗ ಶಾಲೆಗಳು ಕೇವಲ ಶಾಲಾ ಕಟ್ಟಡದಲ್ಲೇ ನಡೆಯುತ್ತಿಲ್ಲ. ಎಲ್ಲಿ ದೊಡ್ಡ ದೊಡ್ಡ ಮರಗಳು ಇವೆಯೋ ಅಲ್ಲೆಲ್ಲಾ ಸ್ಕೂಲುಗಳನ್ನು ಮಾಡಿದ್ದಾರೆ. ಒಂದು ದೇವಸ್ಥಾನ ಮಠ ಛತ್ರ ಯಾವುದನ್ನೂ ಬಿಟ್ಟಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಸ್ವಲ್ಪ ಜಾಸ್ತಿ ಹಣ ಕೊಡಬೇಕೆಂದು ಹೇಳುತ್ತೇನೆ. ಇನ್ನು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನಲ್ಲಿ ಅಲೋ ಮಾಡುವುದಕ್ಕಾಗುವುದಿಲ್ಲ. ಪೇಜ್ ೧೨ರಲ್ಲಿ ತಾವು "A loan of Rs. 34.15 lakhs was sanctioned to private educational Institutions for construction of school buildings The loan releted to the period 1984-85. On this, a sum of Rs. 11.75 lakhs has been recovered. On a request made by a few institutions, the balance of loan amount has been treated as grant-In-aid". ಇದನ್ನು ಮಾಡಬಾರದಾಗಿತ್ತು. ಈ ಪ್ರೈವೇಟ್‌ನವರಿಗೆ ಎಷ್ಟೊಂದು ಅನುಕೂಲ ಕೊಟ್ಟಿದ್ದೀರೆಂದರೆ ೨೩ ಲಕ್ಷ ಗ್ರಾಂಟ್-ಇನ್-ಏಡ್ ಎಂದು ಮಾಡಿದ್ದೀರಿ. ಇದು ಹಳೆಯದು. ಇಂತಹದ್ದು ಮಾಡಬಾರದಾಗಿತ್ತು. ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ನವರಿಗೆ ಇಂಥ ಅನುಕೂಲ ಬೇಕಾಗಿರಲಿಲ್ಲ.

ಇನ್ನು ಗ್ರೀನ್ ಕಾರ್ಡ್ಸ್ ಬಗ್ಗೆ ಫುಡ್ ಅಂಡ್ ಸಿವಿಲ್ ಸಪ್ಲೈನವರು ೩ ಲಕ್ಷ ೪೦ ಸಾವಿರ ಕೇಳಿದ್ದಾರೆ. ಹಳ್ಳಿಗಳಲ್ಲಿ ಇವತ್ತಿನ ದಿವಸ ಅರ್ಹರಿಗೆ ಗ್ರೀನ್ ಕಾರ್ಡ್ಸ್ ಕೊಟ್ಟಿಲ್ಲ. ಕೊಡುತ್ತೇವೆಂದು ಅವರು ಹೇಳುತ್ತಾರೆ. ಮತ್ತೆ ಕೇಳಿದರೆ ಗ್ರೀನ್ ಕಾರ್ಡ್ಸ್ ಸಪ್ಲೈ ಇಲ್ಲ ಎಂದು ಅವರು ಹೇಳುತ್ತಾರೆ. ಈಗಲಾದರೂ ಸಪ್ಲೈ ಮಾಡಿ ಅರ್ಹರಾದವರಿಗೆ ಕೊಡುವ ವ್ಯವಸ್ಥೆಯಾಗಬೇಕು. ಮತ್ತೆ ಪೋಲೀಸ್ ಹೆಡ್‌ನಲ್ಲಿ ಒಂದು ಹೇಳುತ್ತೀರಿ. ಪೋಲೀಸ್ ಕಾನ್ಸ್‌ಟೇಬಲ್ಸ್, ಹೆಡ್ ಕಾನ್ಸ್‌ಟೇಬಲ್ಸ್ ಹಾಗೂ ಲೋಯರ್ ಸ್ಟಾಫ್ ಏನಿದ್ದಾರೆ ಇವರಿಗೆ ಸಬ್ಸಿಡೈಸ್ಡ್ ರೇಟ್‌ನಲ್ಲಿ ಆಹಾರ ಧಾನ್ಯ ಒದಗಿಸುತ್ತೇವೆಂದು ಹೋದಸಾರಿ ಹೇಳಿದ್ದಿರಿ. ಇಲ್ಲಿಗೆ ೧ ವರ್ಷವಾಯಿತು. ಈ ಯೋಜನೆ ಎಲ್ಲಿಗೆ ಹೋಯಿತು? ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ೩೭.೨೦ ಲಕ್ಷ ಕೇಳಿದ್ದಾರೆ. ಈಗಲೂ ನಾನು ಹೇಳುತ್ತಿದ್ದೇನೆ.

ಮತ್ತು ಡಿ. ಲ್ಯಾಂಡ್‌ನಲ್ಲಿ ಏನು ಬಡವರು ಇದ್ದಾರೆ ಅವರನ್ನು ಇವರು ಒಕ್ಕಲೆಬ್ಬಿಸಿ ಅಕ್ಯೈಪೊ

ಮಾಡುತ್ತಿದ್ದಾರೆ. ಇದು ಅನ್ಯಾಯ. ಈ ಇಲಾಖೆಯವರು ಅಲ್ಲಿಗೆ ಬರದಹಾಗೆ ಮಾಡಬೇಕು. ಬಡವರನ್ನು ಓಡಿಸಲು ಅವರು ಏನೇನು ಮಾಡುತ್ತಿದ್ದಾರೆ ಇದನ್ನು ತಡೆಗಟ್ಟಲು ಸೂಕ್ತ ಡೈರೆಕ್ಷನ್ ಕೊಡಬೇಕು. ಇನ್ನು ಮೈನರ್ ಇರಿಗೇಷನ್ ಬಗ್ಗೆ ೨೪ ಕೋಟಿ ಕೇಳಿದ್ದಾರೆ. ಕೋಲಾರ ಜಿಲ್ಲೆಯ ಮೈನರ್ ಇರಿಗೇಷನ್ ಸ್ಕೀಮ್ ಬಗ್ಗೆ ಮುಖ್ಯ ಮಂತ್ರಿಗಳು ಬಂದು ಒಪ್ಪಿಕೊಂಡಿದ್ದರು. ಈಗ ಅದೇನೋ ಟೆಕ್ನಿಕಲ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೇಳುತ್ತಿದ್ದಾರೆ. ಇದೆಲ್ಲಾ ಕೇವಲ ೪೦ ಲಕ್ಷ ರೂಪಾಯಿಗಳಲ್ಲಿ ಆಗುವುದಿಲ್ಲ. ಬೆಂಗಳೂರು, ತುಮಕೂರು ಮತ್ತು ಕೋಲಾರದಲ್ಲಿ ಇಂತಹ ಕಡೆ ಏನು ಪ್ರಾಜೆಕ್ಟ್ಸ್ ಬರುವ ಕಡೆ ಫೀಜಿಬಲಿಟಿ ಯಾವುದು, ಟೆಕ್ನಿಕಲ್ ಯಾವುದು ಇದೆ ಎಂಬುದನ್ನು ಗಮನಿಸಬೇಕು. ಇನ್ನು ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂನಲ್ಲಿ ೨.೧೧ ಕೋಟಿ ಕೇಳಿದ್ದಾರೆ. ಇದರ ಬಗ್ಗೆ ತಾವೂ ಕೂಡಾ ಇದನ್ನು ಸರಿಯಾಗಿ ಯುಟಿಲೈಸ್ ಮಾಡುತ್ತಾ ಇಲ್ಲ ಎಂದು ಹೇಳಿದ್ದೀರಿ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜುಗಳ ಪುಟ ೯ರ ಟಿಪ್ಪಣಿಯಲ್ಲಿ "ಬಾಗಲಕೋಟೆ ಸ್ಪಿನ್ನಿಂಗ್ ಮಿಲ್ಸ್ ಮತ್ತು ರಾಯಚೂರು ಸ್ಪಿನ್ನಿಂಗ್ ಮಿಲ್ಸ್‌ಗಳಿಗೆ ಕ್ರಮವಾಗಿ ರೂ.೧೬.೦೦ ಲಕ್ಷ ಮತ್ತು ರೂ.೬.೦೦ ಲಕ್ಷ ಗಳನ್ನು ನೌಕರರ ವೇತನ ಮಜೂರಿ ಸಂದಾಯಕ್ಕಾಗಿ ಸರ್ಕಾರವು ಸಾಲ ಮಂಜೂರು ಮಾಡಿದೆ" ಎಂದು ಹೇಳಲಾಗಿದೆ. ನಾನ ಹೇಳುವುದು ಇಷ್ಟೇ. ಬಾಗಲಕೋಟೆ ಸ್ಪಿನ್ನಿಂಗ್ ಮಿಲ್ ಬಾಗಿಲು ಹಾಕಿ ಬಹಳ ದಿನಗಳಾಗಿದ್ದು ಸಾವಿರಾರು ಜನ ನೌಕರರು ಧರಣಿ ಕುಳಿತಿದ್ದು ನಾವೂ ಕೂಡ ಅಲ್ಲಿಗೆ ಹೋಗಿ ಬಂದಿದ್ದೇವೆ. ಆದರೆ ಇದುವರೆಗೂ ಅದರ ಬಾಗಿಲನ್ನು ತೆಗೆದಿಲ್ಲ. ಮತ್ತೆ ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ಕೂಡಾ ನಮ್ಮ ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ. ನನಗೆ ಬಂದಿರುವ ಮಾಹಿತಿ ಪ್ರಕಾರ ನಾನು ಇದನ್ನು ಹೇಳುತ್ತಿದ್ದೇನೆ. ಇಲ್ಲಿ ಏನು ೬.೦೦ ಲಕ್ಷ ರೂಪಾಯಿಗಳನ್ನು ನೌಕರರ ವೇತನ ಮತ್ತು ಮಜೂರಿಗೆ ಸಂದಾಯ ಮಾಡಿದ್ದೇವೆಂದು ಹೇಳುತ್ತಿದ್ದೀರಿ ಅದು ನೌಕರರಿಗೆ ಪೇಮೆಂಟ್ ಆಗಿದೆಯೋ ಇಲ್ಲವೋ ? ಪೇಮೆಂಟ್ ಆಗತ್ತ ಇಲ್ಲವೇ? ಕೇಂದ್ರ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದಾರೆಯೇ ಬಿಡುಗಡೆ ಮಾಡದಿದ್ದರೆ ಅದಕ್ಕೆ ಕಾರಣವೇನು ? ಬೀಗ ಹಾಕಿರತಕ್ಕ ಕಾರ್ಖಾನೆಗಳನ್ನು ತೆರೆಸುವುದಕ್ಕೆ ಏನು ಮಾಡಿದ್ದೀರಿ ? ಮ್ಯಾನೇಜ್‌ಮೆಂಟ್‌ನವರು ದುರುಪಯೋಗ ಮಾಡಿಕೊಂಡಿದ್ದಾರೆ ಅದನ್ನು ತಮ್ಮ ಗಮನಕ್ಕೆ ಬಂದಿದೆಯೇ ? ಅದರ ಬಗ್ಗೆ ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಪೂರಕ ಅಂದಾಜುಗಳು ಪುಟ ೧೪ ರಲ್ಲಿ "ಆಪರೇಷನ್ ಬ್ಲಾಕ್ ಬೋರ್ಡ್" ಪ್ರಸ್ತಾಪ ಮಾಡಿ ಈ ಯೋಜನೆಯಲ್ಲಿ ಏಕ ಉಪಾಧ್ಯಾಯರ ಶಾಲೆಗಳಲ್ಲಿ ಮತ್ತೊಬ್ಬ ಉಪಾಧ್ಯಾಯರನ್ನು ನೇಮಿಸುವುದು. ಶಿಕ್ಷಣ ಸಾಮಗ್ರಿಗಳನ್ನು ಒದಗಿಸುವುದು ಮತ್ತು ಶಾಲಾ ಕೊಠಡಿಗಳನ್ನು ನಿರ್ಮಿಸುವುದನ್ನು ಒಳಗೊಂಡಿರುತ್ತದೆ. ನನ್ನ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್‌ನವರು ಹಿಂದೆ ಇದ್ದ ಉಪಾಧ್ಯಾಯರುಗಳಿಗೆ ಸಂಬಳ

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಕೊಡಲಿಕ್ಕೆ ಈ ಹಣವನ್ನು ಖರ್ಚು ಮಾಡಿದ್ದಾರೆ. ಹೊಸ ದಾಗಿ ಅಡಿಶನಲ್ ಟೀಚರ್ಸ್ ನೇಮಕ ಮಾಡಿಕೊಂಡಿಲ್ಲ. ಶಾಲಾ ಕಟ್ಟಡಗಳನ್ನು ಕಟ್ಟಲಿಕ್ಕೆ ನಿರ್ದಿಷ್ಟ ವಾಗಿ ಈ ಯೋಜನೆಗೋಸ್ಕರ ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಸ್ಪಷ್ಟ ಚಿತ್ರವನ್ನು ಬಜೆಟ್‌ನಲ್ಲಿ ಕೊಡಲಿಲ್ಲ. ಇದರ ಬಗ್ಗೆ ಚರ್ಚೆ ಮಾಡಿದಾಗ ಸರಿಯಾದ ಉತ್ತರ ಸಿಗಲಿಲ್ಲ. ಶಾಲಾ ಕಟ್ಟಡಗಳನ್ನು ಈ ಹಣದಿಂದ ಕಟ್ಟಲಿಲ್ಲ, ಯಾವ ಉದ್ದೇಶಕೋಸ್ಕರ ಹಣ ಕೇಂದ್ರದಿಂದ ಬಂದಿತೋ ಅದಕ್ಕಾಗಿ ಉಪಯೋಗ ಮಾಡಲಿಲ್ಲ. ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಿಲ್ಲ. ಈಗಾಗಲೇ ಕಟ್ಟಡಗಳನ್ನು ಕಟ್ಟಿ ಅಲ್ಲಿ ಏನು ಶಾಲೆಗಳು ನಡೆಯುತ್ತಿವೆ. ಅವುಗಳಿಗಾಗಿ ಈ ಖರ್ಚನ್ನು ತೋರಿಸಿಕೊಂಡರೆ ಕೇಂದ್ರ ಸರ್ಕಾರದ ಉದ್ದೇಶ ಏನಿತ್ತು ಅದ ದುರುಪಯೋಗವಾಗುತ್ತದೆ. ಅದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಹಣಕಾಸಿನ ಉಬ್ಬರವಿರುವಂತಹ ಸಂದರ್ಭದಲ್ಲಿ ಪೂರಕ ಅಂದಾಜುಗಳ ಪುಟ-೫೪ರಲ್ಲಿ ಆಶ್ಚರ್ಯಪಡುವಂತಹ ಸಂಗತಿಯನ್ನು ಹೇಳಿದ್ದಾರೆ. ಪುಟ-೫೫ರಲ್ಲಿ ಅಭಿವೃದ್ಧಿ ಕಮಿಷನರ್ ಕಚೇರಿ ವೆಚ್ಚಕ್ಕಾಗಿ ೧.೬೦ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. "ಕರ್ನಾಟಕ ಶೋಸದಿ ವೇ" ಪುಸ್ತಕದ ಮುದ್ರಣ ವೆಚ್ಚವನ್ನು ಭರಿಸಲು ಕಚೇರಿ ವೆಚ್ಚದಲ್ಲಿ ಏರಿಕೆ ಉಂಟಾಗಿದೆ ಎಂದು ಹೇಳಿದ್ದಾರೆ. ಕರ್ನಾಟಕ ಶೋಸದಿ ವೇ ಪುಸ್ತಕವನ್ನು ನಾನ ಸರ್ಚ್ ಮಾಡಿದೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನನಗೆ ಸಿಗಲಿಲ್ಲ. ಅದು ಎಲ್ಲೂ ಸಿಗುತ್ತಿಲ್ಲ. ನಾನು ಚರ್ಚೆ ಮಾಡುವಾಗ ಅದರ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟರು. ತಾವು ಎಷ್ಟು ಪ್ರತಿಗಳನ್ನು ಪ್ರಿಂಟ್ ಮಾಡಿದ್ದೀರಿ ? ೧.೬೦ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಅಗತ್ಯವಿತ್ತೆ ? ರಾಜ್ಯದಲ್ಲಿ ಜನ ನೀರು ಇಲ್ಲದೆ ಅನ್ನವಿಲ್ಲದೆ ಪರಿತಪಿಸುತ್ತಿರುವಾಗ ನಿಮ್ಮ ಪ್ರಚಾರದ ಅಬ್ಬರಕ್ಕೆ ರಾಜ್ಯದ ಜನ ಕೊಟ್ಟಂತಹ ತೆರಿಗೆ ಹಣವನ್ನು ಖರ್ಚು ಮಾಡುವುದು ಸರಿಯೇ ? ತಾವು ಎಷ್ಟು ಪ್ರತಿಗಳನ್ನು ಪ್ರಿಂಟ್ ಮಾಡಿದ್ದೀರಿ ? ಅವುಗಳನ್ನು ಯಾರಿಗೆ ಹಂಚಿದ್ದೀರಿ ? ಅವುಗಳನ್ನು ದೆಹಲಿಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಿಂಟ್ ಮಾಡಿಸಿದ್ದೀರಾ ? ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಎಷ್ಟು ಪ್ರಿಂಟಾಯಿತು, ಯಾರಿಗೆ ಯಾರಿಗೆ ಹಂಚಿದ್ದೀರಿ, ಅವುಗಳು ಪ್ರಿಂಟ್ ಆಗಿ ನಿಮ್ಮ ಕಛೇರಿಗೆ ತಲುಪಿದೆಯೇ ಆ ಬಗ್ಗೆ ವಿವರಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಪೂರಕ ಅಂದಾಜುಗಳ ಪುಟ-೫೦ರಲ್ಲಿ "೧೯೮೮ರ ಮಳೆಯು ರಾಜ್ಯದ ಅನೇಕ ಭಾಗಗಳಲ್ಲಿ ನಷ್ಟವನ್ನು ಉಂಟು ಮಾಡಿತು. ಈ ಬಗ್ಗೆ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಣ ಬಿಡುಗಡೆ ಮಾಡಲಾಯಿತು. ಸ್ಥಳೀಯ ಸಂಸ್ಥೆಗಳ ರಸ್ತೆ, ಸೇತುವೆ, ಸಣ್ಣ ನೀರಾವರಿ, ಒಳಚರಂಡಿ ವ್ಯವಸ್ಥೆ, ಸಾರ್ವಜನಿಕ ಕಟ್ಟಡ, ಶಾಲೆಗಳು, ಆಸ್ಪತ್ರೆಗಳು ಕಛೇರಿಗಳನ್ನೊಳಗೊಂಡತೆ ದುರಸ್ತಿ ಕಾರ್ಯಗಳು ಪರಿಹಾರ ಕಾರ್ಯಕ್ರಮದಲ್ಲಿ ಒಳಗೊಂಡಿದೆ. ಕೇಂದ್ರ ಅಧ್ಯಯನ ತಂಡದ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರವು ೧೫.೩೮ ಕೋಟಿ ರೂಪಾಯಿಗಳ ಮಿತಿಯೊಳಗೆ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಒಪ್ಪಿಗೆ ನೀಡಿತು. ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಕೇಳುವುದು ಕೇಂದ್ರ ಸರ್ಕಾರ ೧೫.೩೮ ಕೋಟಿ ರೂಪಾಯಿ ಮಿತಿಯೊಳಗೆ ಖರ್ಚು ಮಾಡಬೇಕೆಂದು ಹೇಳಿತ್ತು. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ೨೧೫ ಕೋಟಿ ರೂಪಾಯಿಗಳು ಬೇಕೆಂದು ಮನವಿಯನ್ನು ಸಲ್ಲಿಸುವಂತಹ ಅಗತ್ಯವೇನಿತ್ತು ? ಇವತ್ತು ಕೇಂದ್ರಸರ್ಕಾರ ಬಿಡುಗಡೆ ಮಾಡಿದ ೧೫.೩೮ ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಖರ್ಚು ಮಾಡಿಲ್ಲ. ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಸಂತ್ರಸ್ಥರಾಗಿರತಕ್ಕ ಜನರು ನೆಮ್ಮದಿಯ ಜೀವನ ಮಾಡಲಿಕ್ಕೆ ಖರ್ಚು ಮಾಡಲಿಲ್ಲ.. ೨೧೫-೨೨೦ಕೋಟಿ ರೂಪಾಯಿಗಳನ್ನು ಅಷ್ಟೊಂದು ಹಣವನ್ನು ಕೇಳುವ ಅಗತ್ಯವೇನಿತ್ತು ? ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವಾಗ ಕೇಂದ್ರಸರ್ಕಾರ ೧೫.೩೧ ಕೋಟಿ ರೂಪಾಯಿಗಳನ್ನು ಕೊಟ್ಟಾಗ, ನಮಗೆ ಹಣದ ಅಗತ್ಯವಿದೆ. ಎಂಬುದನ್ನು ಮನವರಿಕೆ ಮಾಡಲು ವಿರೋಧಪಕ್ಷಗಳ ತಂಡದ ನೇತೃತ್ವವನ್ನು ವಹಿಸಿ ಪ್ರಧಾನಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗಬಹುದಾಗಿತ್ತು. ಆ ಕೆಲಸ ಮಾಡಲಿಕ್ಕೆ ನಿಮಗೆ ಬಿಡುವು ಇರಲಿಲ್ಲ. ನಮ್ಮ ರಾಜ್ಯದಲ್ಲಿ ಹಣಕಾಸಿನ ತೊಂದರೆ ಇರುವಾಗ ದೇಶದ ಪ್ರಧಾನ ಮಂತ್ರಿಗಳನ್ನು ಕೇಳುವ ಅಗತ್ಯವಿರಲಿಲ್ಲವೆ ? ವಿರೋಧ ಪಕ್ಷಗಳವರ ಜೊತೆಯಲ್ಲಿ ತಾವು ಹೋಗಿ ಪ್ರಧಾನ ಮಂತ್ರಿಗಳ ಮನ ಒಲಿಸಿಕೊಳ್ಳಬೇಕಾಗಿತ್ತು, ಅದು ನಿಮ್ಮಿಂದ ಆಗಲಿಲ್ಲ. ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಇಂತಹ ಪರಿಹಾರ ಕಾರ್ಯಗಳಿಗಾಗಿ ಎಷ್ಟು ಖರ್ಚು ಮಾಡಿದೆ ? ಅಗತ್ಯವಿಲ್ಲದ ಬಾಬುಗಳಿಗಾಗಿ ಖರ್ಚು ಮಾಡಿದೆ. ೨೨೦ ಕೋಟಿ ರೂಪಾಯಿ ಕೇಳಿದ್ದ ಇವರು ಅವರು ಕೊಟ್ಟ ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಹಣವನ್ನು ಬೇರೆ ಕಡೆ ಉಪಯೋಗ ಮಾಡಿಕೊಂಡು ಆ ಪುಸ್ತಕವನ್ನು ಪ್ರಿಂಟ್ ಮಾಡುವ ಅಗತ್ಯವಿತ್ತೆ? ಅದಕ್ಕಾಗಿ ಈ ಪೂರಕ ಬೇಡಿಕೆಯ ಅಗತ್ಯವೇನು ? ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕೆಲಸ, ಸೇತುವೆ ಕೆಲಸಗಳಿಗಾಗಿ ಹಣವನ್ನು ಖರ್ಚು ಮಾಡಬಹುದಾಗಿತ್ತು. ವಿದ್ಯುತ್‌ಗಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡಹುದಾಗಿತ್ತು ೧.೬೦ರೂಪಾಯಿಗಳನ್ನು ಪುಸ್ತಕ ಪ್ರಿಂಟ್ ಮಾಡಲಿಕ್ಕೆ ತಾವು ಖರ್ಚು ಮಾಡಿದ್ದೀರೀ.

೧-೩೦ ಪಿ. ಎಂ.

ಅಂದರೆ ಎಷ್ಟು ಪ್ರತಿಗಳನ್ನು ನೀವು ಪ್ರಿಂಟ್ ಮಾಡಿಸಿದ್ದೀರಿ? ಇದರ ಅಗತ್ಯ ಇತ್ತೇ? ಹಣ ಕಾಸಿನ ದುಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ದಯಮಾಡಿ ಸರಿಯಾದ ಮಾಹಿತಿಯನ್ನು ಕೊಡಬೇಕು, ಅಗತ್ಯ ಇಲ್ಲದೇ ಇರುವಂಥ ಕಡೆ ಈ ರೀತಿ ದುಂದುವೆಚ್ಚ ಮಾಡಿದ್ದೀರಿ. ಜನ ಕೊಟ್ಟಂಥ ಹಣ ದುರುಪಯೋಗ ಆಗುವಂಥಾದ್ದು ಸಹಿಸುವಂಥ ಸಂಗತಿ ಅಲ್ಲ. ಇಲ್ಲಿ ನಾನು ಕಳೆದ ಐದಾರು ವರ್ಷಗಳ ಪೂರಕ ಬೇಡಿಕೆಗಳನ್ನು ವೆರಿಫೈ ಮಾಡುವ ಪ್ರಯತ್ನ ಮಾಡಿದೆ. ಹಿಂದೆಲ್ಲಾ ಅಗತ್ಯ ಇರುವುದಕ್ಕೆ ಮಾತ್ರ ಖರ್ಚು ಮಾಡುವ ಪ್ರಯತ್ನ ನಡೆಯುತ್ತಿತ್ತು. ಆದರೆ ಇವತ್ತು ಅಗತ್ಯ ಇರುವ ಕಡೆ ಹೆಚ್ಚು ಖರ್ಚು ಮಾಡಿ ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಆದ್ದರಿಂದ ಪೂರಕ ಬೇಡಿಕೆಯನ್ನು ಇಲ್ಲಿ ಕೊಟ್ಟಿರುವಂಥಾದ್ದು ಈ ರಾಜ್ಯದ ಜನತೆಗೆ ಅವರ ಜೀವನಕ್ಕೆ ಉಪಯೋಗವಾಗುವಂಥ ಯಾವುದೇ ಬಾಬಿನಲ್ಲಿ ನೀವು ಖರ್ಚು ಮಾಡದೆ ಏನೋ ಒಂದು ಪ್ರಚಾರಕ್ಕೋಸ್ಕರ ಈ ರೀತಿ ಹಣ ಖರ್ಚು ಮಾಡಿರುವಂಥಾದ್ದು ಸರಿಯಲ್ಲ. ಅತಿವೃಷ್ಟಿಗೆ ತುತ್ತಾಗಿರುವ ರೈತ ಕಂಗಾಲಾಗಿರುವಂಥ ಸಂದರ್ಭದಲ್ಲಿ ಅವನ ನೆರವಿಗೆ ನೀವು ಹೋಗಲಿಲ್ಲ. ರಾಜ್ಯ ಸರ್ಕಾರ ಬೊಕ್ಕಸದಿಂದ ಒಂದು ರೂಪಾಯಿ ಖರ್ಚು ಮಾಡಲಿಲ್ಲ. ಕೇಂದ್ರ ಸರ್ಕಾರ ಕೊಟ್ಟಂಥ

೧೫ ಕೋಟಿ ೩೦ ಲಕ್ಷ ರೂಪಾಯಿಗಳಲ್ಲಿ ಕೇವಲ ೧೦-೧೨ ಕೋಟಿ ಖರ್ಚು ಮಾಡಿದ್ದೀರಿ. ಆ ಭಾಗದ ಜನ ಕಣ್ಣೀರಲ್ಲಿ ಕೈತೊಳೆಯಬೇಕಾದರೆ ನೀರಾವರಿ ತೆರಿಗೆ ಜಾಸ್ತಿ ಮಾಡಿದ್ದೀರಿ. ಕೊನೆಯದಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನೀವು ಚುನಾವಣೆಯ ವರ್ಷ ಎಂದು ತೆರಿಗೆಯನ್ನು ಜಾಸ್ತಿ ಮಾಡಲಿಲ್ಲ. ಯಾವುದೇ ಸರ್ಕಾರ ಇದ್ದರೂ ಕೂಡ ಚುನಾವಣೆಗೋಸ್ಕರ ಇದನ್ನೇ ಮಾಡುತ್ತಿದ್ದರು. ನಾನು ಇದರ ಬಗ್ಗೆ ಆರೋಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಬಜೆಟ್ ತರುವುದಕ್ಕೆ ಮುಂಚೆ ಯಾರಾದರೂ ರೈತರ ಬಗ್ಗೆ ಯೋಚನೆ ಮಾಡಿದ್ದೀರಾ? ಇವೊತ್ತು ರಾಜ್ಯದ ರೈತ ತೊಂದರೆ ಪಡುತ್ತಿದ್ದರೆ ಮನಬಂದಂತೆ ನೀರಾವರಿ ತೆರಿಗೆಯನ್ನು ಜಾಸ್ತಿ ಮಾಡಿದಿರಿ. ಅದಕ್ಕೆ ತಾವು ಹೇಳಿರುವ ಉತ್ತರ ಏನು? ಅಲ್ಲಿ ಬರುವಂಥ ಲಾಭ ೪೦-೫೦ ಕೋಟಿ ಮಾತ್ರ ಎಂದು. ಈ ರಾಜ್ಯದ ರೈತ ತನ್ನ ಹೊಲದಲ್ಲಿ ಉಳುಮೆ ಮಾಡುವುದು ತನ್ನ ಹೊಟ್ಟೆಬಟ್ಟೆಗೋಸ್ಕರ ಅಲ್ಲ. ಆತನ ಹೊಲ ಒಂದು ಕಾರ್ಖಾನೆ ಇದ್ದಹಾಗೆ. ಇದರಿಂದ ಲಾಭವನ್ನು ಅಪೇಕ್ಷೆ ಮಾಡುವುದಕ್ಕೆ ಬರುವುದಿಲ್ಲ. ಅವನು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಇವತ್ತು ಅವನು ಕಣ್ಣೀರಿನಿಂದ ಕೈತೊಳೆಯುತ್ತಿದ್ದಾನೆ. ನೀರಾವರಿ ದರವನ್ನು ಒಂದಕ್ಕೆ ಹತ್ತುಪಟ್ಟು ಜಾಸ್ತಿ ಮಾಡಿ ಆತ ಕಣ್ಣೀರಲ್ಲಿ ಕೈತೊಳೆಯುವ ವ್ಯವಸ್ಥೆಯನ್ನು ಉಂಟುಮಾಡಿದ್ದೀರಿ. ನಾನು ಹತ್ತಾರುಬಾರಿ ಈ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಈ ಸರ್ಕಾರ ರೈತ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ, ಅದು ತಕ್ಕದ್ದಲ್ಲ ಎಂದು ತಮಗೆ ಗೊತ್ತಿರಬಹುದು. ಜನತಾದಳ ಆಗಿ, ನಾಳೆ ಕೇಂದ್ರ ಸರ್ಕಾರದಲ್ಲಿ ಅಧಿಕಾರಕ್ಕೆ ಬಂದರೆ, ಜನತಾ ದಳದ ಸರ್ಕಾರ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಇವನ್ನು ನಾನು ಕೇಳುತ್ತೇನೆ. ಈ ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರದಲ್ಲಿದೆ. ತಾವು ಮಾದರಿಯಾಗಿ ಈ ವಿಷಯದಲ್ಲಿ ಮುಂದೆ ಬರುತ್ತೀರಾ? ಬರಗಾಲಕ್ಕೆ ತುತ್ತಾಗಿ ಭಿಕ್ಷೆ ಬೇಡುತ್ತಿರುವ ರೈತನ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದರೆ ಆ ಘೋಷಣೆಗೆ ಒಂದು ಅರ್ಥ ಬರುತ್ತದೆ. ಜನತೆಯನ್ನು ವಂಚನೆ ಮಾಡಿ ಏನೋ ಕೆಲವು ವಿಚಾರಗಳನ್ನು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿ ಅಥವಾ ಪಕ್ಷದ ಸಿದ್ಧಾಂತಗಳು ಎಂದು ಹೇಳಿಕೊಂಡು ಹೊರಟು ಜನರಿಗೆ ಟೋಪಿ ಹಾಕಿ ಅಧಿಕಾರಕ್ಕೆ ಬಂದಮೇಲೆ ಬಡವರ ಕಣ್ಣೀರನ್ನು ಆದರೂ ಒರೆಸ ಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಬಂದರೆ ಏನು ಮಾಡುತ್ತೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಏನು ಮಾಡುತ್ತೇವೆ ಎಂದು ಜನ ಕಾದು ನೋಡುತ್ತಾರೆ. ಈಗಾಗಲೇ ಒಂದು ಸ್ಪಷ್ಟವಾದ ಮಾತನ್ನು ನಾನು ಹೇಳಿದ್ದೇನೆ. ಈವತ್ತು ದೇಶದ ಜನ ಕಾಂಗ್ರೆಸ್ಸಿಗೆ ಪರ್ಯಾಯ ಜನತಾದಳ, ಜನತಾದಳಕ್ಕೆ ಪರ್ಯಾಯ ಕಾಂಗ್ರೆಸ್ ಎನ್ನತಕ್ಕಂಥ ಸಂದರ್ಭದಲ್ಲಿ ಇವತ್ತು ಮೂರನೇ ಶಕ್ತಿಯಾಗಿ ಭಾರತೀಯ ಜನತಾ ಪಾರ್ಟಿ ಉದಯವಾಗುತ್ತಿದೆ. ಬಹುಶಃ ಬರುವ ಚುನಾವಣೆಯಲ್ಲಿ ನಾವೇನು ಕೆಲಸ ಮಾಡುತ್ತೇವೆ ಎಂದು ತಾವು ಕಣ್ಣಿಂದ ನೋಡುವವರಿದ್ದೀರಿ. ಇತ್ತೀಚಿನ ದಿವಸಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಶ್ರೀ ಬೊಮ್ಮಾಯಿಯವರು ನಮ್ಮನ್ನು ಬಹಳ ಹಗುರವಾಗಿ ನೋಡತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಇವರ ಸಹವಾಸ ಮಾಡಿ ಕೊನೆಗೆ ನೀವು ಒಬ್ಬರೇ ಉಳಿದಿರಿ. ಮೊದಲು ೧೮ ಜನ ಇದ್ದರು. ಈಗ ಔಷದಿಗೆ ಎಂದು ನೀವು ಒಬ್ಬರೇ ಉಳಿದಿದ್ದೀರಿ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಔಷಧಿಗಾಗಿಯಾದರೂ ಒಬ್ಬನೇ ಉಳಿದಿದ್ದರೂ ಸಹ ತುಂಬ ಗೌರವದಿಂದ ಮಾನ್ಯ ಕಾಂಗ್ರೆಸ್ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಈ ದೇಶದ, ಈ ರಾಜ್ಯದ ರೈತ ಭಿಕ್ಷೆ ಬೇಡತಕ್ಕಂಥ ಸ್ಥಿತಿಗೆ ಬಂದಾಗ ನಮ್ಮ ಸಂಖ್ಯೆ ಎಷ್ಟು ಎಂಬುದು ಮುಖ್ಯ ಅಲ್ಲ. ಯಾವ ರೀತಿ ಕೆಲಸ ಮಾಡುತ್ತೇವೆ ಎನ್ನುವುದು ಮುಖ್ಯವಾದುದು. ಜನ ತೀರ್ಮಾನ ಮಾಡುತ್ತಾರೆ. ಈ ರಾಜ್ಯದ ಜನ ಬಹಳ ಬುದ್ಧಿವಂತರಿದ್ದಾರೆ. ಕೇಂದ್ರದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದಮೇಲೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳದಿದ್ದಾಗ ಈ ದೇಶದ ಜನ ಮತ್ತೊಮ್ಮೆ ಬದಲಾವಣೆಯನ್ನು ತಂದರು. ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಆದರೆ ಅದೇ ಪಕ್ಷ ಅಧಿಕಾರ ದುರುಪಯೋಗ ಮಾಡಿಕೊಂಡರೆ ನಾಳೆ ಮತ್ತೆ ಜನ ತೀರ್ಮಾನ ಮಾಡುತ್ತಾರೆ. ಈಗಂತೂ ಕರ್ನಾಟಕದಲ್ಲಿ ಆ ಸ್ಥಿತಿ ಬಂದಿದೆ. ಜನತಾ ಬೇಡ, ಜನತಾ ದಳ ಬೇಡ. ಕಾಂಗ್ರೆಸ್ ಬೇಡ. ಇವತ್ತು ಈ ರಾಜ್ಯದಲ್ಲಿ ಬಿ.ಜೆ.ಪಿ. ಬೇಕು ಎನ್ನುವ ಕಾಲ ಬರುತ್ತದೆ, ತಾವು ನೋಡುತ್ತೀರಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು

ಇವತ್ತು ಅಗತ್ಯ ಇಲ್ಲದಿರುವ ಪುಸ್ತಕಗಳನ್ನು ಪ್ರಿಂಟ್ ಮಾಡಿದ್ದೀರಿ, ಇದರ ಅಗತ್ಯ ಇಲ್ಲ. ಈ ರಾಜ್ಯದ ಜನ ಇವತ್ತು ಅತಿವೃಷ್ಟಿಗೆ, ಬರಗಾಲಕ್ಕೆ ತುತ್ತಾಗಿರುವಾಗ ಯಾವುದು ಅಗತ್ಯ ಇದೆ, ಅದಕ್ಕೆ ಪೂರಕವಾಗಿ ಬೇಡಿಕೆಗಳ ಮೇಲೆ ಖರ್ಚು ಮಾಡಿದ್ದರೆ ಅದಕ್ಕೆ ಮಾನ್ಯತೆ ಉಂಟೇ ಹೊರತು ಮನಬಂದಂತೆ ಈ ರೀತಿ ಅಗತ್ಯ ಇಲ್ಲದೇ ಇರುವ ಇಂತಹ ಪುಸ್ತಕಗಳನ್ನು ಪ್ರಿಂಟ್ ಮಾಡಲು ಖರ್ಚು ಮಾಡಿದ್ದರ ಬಗ್ಗೆ ಅಲ್ಲ. ಈ ಪುಸ್ತಕ ಕನ್ನಡದಲ್ಲಿಯೂ ಇಲ್ಲ. ಕನ್ನಡದ ಬೊಬ್ಬೆ ಹಾಕುತ್ತೀರಿ. 'ಕರ್ನಾಟಕ ಶೋಸ್ ದಿ ವೇ' ಎಂದರೆ ಇವರಿಂದ ಈ ರಾಜ್ಯದ ರೈತರಿಗೆ ಏನು ಪ್ರಯೋಜನ? ಇದು ಅವನಿಗೆ ಅರ್ಥವಾಗುತ್ತಿದೆಯೆ? ಕೃಷಿ ಕಾರ್ಮಿಕನಿಗೆ ಅರ್ಥವಾಗುತ್ತದೆಯೆ? ಯಾರಿಗೋಸ್ಕರ ಇದನ್ನು ಪ್ರಿಂಟ್ ಮಾಡಿದಿರಿ? ಡೆಲ್ಲಿಯಲ್ಲಿ ಪ್ರಚಾರ ಮಾಡುವುದಕ್ಕೋಸ್ಕರ ಪ್ರಿಂಟ್ ಮಾಡಿದ್ದೀರಾ? ಈ ಪುಸ್ತಕದ ಅಗತ್ಯ ನಿಜವಾಗಿಯೂ ಇರಲಿಲ್ಲ. ಎಷ್ಟು ಪ್ರತಿಗಳನ್ನು ಪ್ರಿಂಟ್ ಮಾಡಿದ್ದೀರಿ? ಯಾರಿಗೆ ಹಂಚಿದ್ದೀರಿ? ಇಲ್ಲದಿದ್ದರೆ ಯಾರು ಇದನ್ನು ಪ್ರಿಂಟ್ ಮಾಡಿದ್ದಾರೆ ಅವರ ಜೇಬಿನಿಂದ ಖರ್ಚು ಮಾಡಿಸಿ.

ನಮಗೆ ಇಂತಹ ಪುಸ್ತಕಗಳ ಅಗತ್ಯ ಇಲ್ಲ. ದಯಮಾಡಿ, ಈ ಪೂರಕ ಬೇಡಿಕೆ ಮೇಲೆ ಅಗತ್ಯ ಇರುವಂಥ ಯಾವುದೇ ವೆಚ್ಚ ಮಾಡದೇ, ಈ ರೀತಿ ಹಣವನ್ನು ಖರ್ಚು ಮಾಡುವುದು ಸರಿಯಲ್ಲವೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್.—ಸನ್ಮಾನ್ಯ ಅಧ್ಯಕ್ಷರೇ, ಡಿಮ್ಯಾಂಡ್ ನಂ. ೧೬ ರಲ್ಲಿ ಈಗಾಗಲೇ ನಮ್ಮ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಸುಮಾರು ೨೩ ಲಕ್ಷಕ್ಕಿಂತ ಹೆಚ್ಚು ಬಿಲ್ಡಿಂಗ್ ಗ್ರಾಂಟ್ಸ್‌ಗೆ ಕೊಟ್ಟಿದ್ದಾರೆ. ಸರ್ಕಾರಿ ಸ್ಕೂಲುಗಳಿಗೆ ಕಟ್ಟಡಗಳು ಇಲ್ಲದೆ ದುಸ್ಥಿತಿಯಲ್ಲಿರುವುದು ಎಲ್ಲರಿಗೂ ಗೊತ್ತಿದೆ. ಈ ರೀತಿ ಇದ್ದರೂ ಕೂಡ ಇವುಗಳನ್ನು ಕಡೆಗಣಿಸಿ, ಖಾಸಗೀ ವಿದ್ಯಾಸಂಸ್ಥೆಗಳಿಗೆ ೨೩ ಲಕ್ಷಕ್ಕಿಂತ ಹೆಚ್ಚು ದುಡ್ಡನ್ನು ಕೊಟ್ಟಿರುವುದು ಏತಕ್ಕೋಸ್ಕರ ಕೊಟ್ಟಿದ್ದಾರೆ. ಮತ್ತು ಯಾವ ಯಾವ ಸಂಸ್ಥೆಗಳಿಗೆ ಕೊಟ್ಟಿದ್ದಾರೆ ಎಂಬುದನ್ನು ಹೇಳುವುದು ಅವಶ್ಯಕವಿದೆ. ಈ ಹಣವನ್ನು ಮತ್ತೆ ವಾಪಸ್ ಕೊಡುವ ಚೈತನ್ಯ ಅವರಿಗೆ ಇದೆಯೋ ಇಲ್ಲವೋ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಿದೆಯೋ ಇಲ್ಲವೋ ಗೊತ್ತಿಲ್ಲ. ಯಾವ ಯಾವ ಸಂಸ್ಥೆಗಳಿಗೆ ಲೋನ್ ಮನ್ನಾಮಾಡಿ, ಗ್ರಾಂಟ್ಸ್ ಆಗಿ ಕೊಟ್ಟಿದ್ದಾರೆ ಎಂಬ ಪಟ್ಟಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಡಿಮ್ಯಾಂಡ್ ನಂ. ೩೨ರಲ್ಲಿ ಮಳೆ ಬಂದು ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಸರ್ಕಾರದವರು ಕೊಡತಕ್ಕ ಪರಿಹಾರವನ್ನು ಸರಿಯಾಗಿ ಕೊಟ್ಟಿಲ್ಲ, ಅವರಲ್ಲೂ ಬೆಂಗಳೂರು ನಗರದಲ್ಲಿ ಎಷ್ಟು ಕೊಡಬೇಕೋ ಅಷ್ಟನ್ನೂ ಕೊಟ್ಟಿಲ್ಲ. ಬಹಳ ಕಡೆ ಮಳೆ ಬಂದು ನೀರು ಮನೆಗಳಿಗೆ ನುಗ್ಗಿ, ಮನೆಗಳು, ಗುಡಿಸಲುಗಳು ಬಿದ್ದುಹೋಗಿವೆ. ಬಹಳಷ್ಟು ಜನರಿಗೆ ಇದರಿಂದ ತೊಂದರೆಯಾಗಿದೆ. ಅದರಲ್ಲಿ ಕೆಲವರಿಗೆ ದುಡ್ಡು ಕೊಟ್ಟರು, ಮತ್ತೆ ಕೆಲವರಿಗೆ ಕೊಟ್ಟಿಲ್ಲ. ಕೆಲವರಿಗೆ ಆಸ್‌ಬೆಸ್ಟಾಸ್ ಶೀಟುಗಳನ್ನು ಕೊಟ್ಟರು, ಕೆಲವರಿಗೆ ಇಟ್ಟಿಗೆಗಳನ್ನು ಕೊಟ್ಟರು. ಬಹಳಷ್ಟು ಜನರಿಗೆ, ಅರ್ಧಕ್ಕರ್ಧ ಜನರಿಗೆ ಇನ್ನೂ ಕೊಟ್ಟಿಲ್ಲ. ಈ ಕೆಲಸವನ್ನು ಕಾರ್ಪೊರೇಷನ್‌ನವರಿಗೆ ವಹಿಸಿತ್ತು. ಕಾರ್ಪೊರೇಷನ್‌ನವರು ಮಾಡಬೇಕಾದರೆ, ಸರ್ಕಾರದಿಂದ ನಮಗೆ ಹಣ ಬಂದಿಲ್ಲ, ಎಷ್ಟು ಬಂದಿತ್ತು. ಅಷ್ಟಕ್ಕೆ ಕೆಲಸಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ೧೫ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡಿ ಎಂದು ಹೇಳಿದ ದುಡ್ಡನ್ನೂ ಕೊಟ್ಟಿಲ್ಲ. ಇದರಲ್ಲಿ ಕೇವಲ ೯ ಕೋಟಿ ಮಾತ್ರ ಖರ್ಚು ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ಮಾನ್ಯ ವೊಯ್ಲಿಯವರೂ ಹೇಳಿದ್ದಾರೆ, ಮಾನ್ಯ ಯಡಿಯೂರಪ್ಪನವರೂ ಹೇಳಿದ್ದಾರೆ. ಕೇಂದ್ರದವರು ೧೫ ಕೋಟಿ ಕೊಡುವಾಗ, ನಮ್ಮ ಒರಿಜಿನಲ್ ಮನಿ ೬ ಕೋಟಿ ರೂಪಾಯಿ ಏನು ಖರ್ಚು ಮಾಡಿದ್ದೇವೆ, ಅದನ್ನು ವಜಾ ಮಾಡಿಕೊಂಡು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದ ಒರಿಜಿನಲ್ ಮನಿ ಏನಿತ್ತು, ಆ ೬ ಕೋಟಿ ರೂಪಾಯಿಗಳನ್ನು ಡಿಡೆಕ್ಟ್ ಮಾಡಿದ್ದಾರೆ. ಅಂದರೆ ೧೫ ಕೋಟಿ ರೂಪಾಯಿನಲ್ಲಿ ೬ ಕೋಟಿ ಹೋದರೆ, ಇನ್ನು ೯ ಕೋಟಿ, ಅಂದರೆ ೧೫ ಕೋಟಿ ಖರ್ಚು ಮಾಡಿದ ಹಾಗೆಯೇ ಆಯಿತು.

ಶ್ರೀ ಎಂ. ಎಸ್ ನಾರಾಯಣರಾವ್.—ಸನ್ಮಾನ್ಯ ಅಧ್ಯಕ್ಷರೇ, ಏನು ಪ್ರಕೃತಿ ವಿಕೋಪಕ್ಕೆ ಜನರು ಒಳಗಾಗಿದ್ದಾರೆ ಅವರಿಗೆ ಪರಿಹಾರ ಕೊಡಬೇಕಾಗಿತ್ತು. ೨೦೦ ಕೋಟಿಗಿಂತ ಜಾಸ್ತಿ ಎಂದು ಕೊಟ್ಟಿದ್ದಾರೆ. ಇದರಲ್ಲಿ ಸ್ವಲ್ಪ ದುಡ್ಡನ್ನಾದರೂ, ಅಂದರೆ ಶೇಕಡ ೧೦ ರಷ್ಟನ್ನಾದರೂ ರಾಜ್ಯ ಸರ್ಕಾರದವರು ಖರ್ಚು ಮಾಡಿದ್ದಿದ್ದರೆ, ಖಂಡಿತವಾಗಿಯೂ ತೊಂದರೆಗೆ ಒಳಗಾದವರಿಗೆ ಸಹಾಯ

ವಾಗುತ್ತಿತ್ತು. ಬೆಂಗಳೂರು ನಗರದಲ್ಲಿ ಬಹಳಷ್ಟು ಜನ ತೊಂದರೆಗೆ ಒಳಗಾದವರು ಸ್ಲಂನಲ್ಲಿದ್ದವರು. ಇದು ಮಳೆ ಜಾಸ್ತಿ ಬಿದ್ದು ಆಗಲಿಲ್ಲ. ಮಳೆ ನೀರು ನುಗ್ಗಿ ಈ ರೀತಿಯ ತೊಂದರೆಗಳಾಗಿವೆ. ಕಾರ್ಪೊರೇಷನ್‌ನವರು ವರದಿಗಳನ್ನು ಸರಿಯಾಗಿ ಮೇಯಿಂಟೇನ್ ಮಾಡದೇ ಇರುವುದರಿಂದ ನೀರು ಮನೆಗಳಿಗೆ ನುಗ್ಗಿದೆ. ಓಕಳೀಪುರದಲ್ಲಿ ದೊಡ್ಡ ದೊಡ್ಡ ಮನೆಗಳಿಗೇ ನೀರು ನುಗ್ಗಿದೆ. ಇದೇರೀತಿ ಸ್ಲಮ್‌ಗಳಲ್ಲಿರತಕ್ಕ ಗುಡಿಸಲುಗಳಿಗೆ ನೀರು ನುಗ್ಗಿ ಜನಗಳಿಗೆ ತೊಂದರೆಯಾಗಿದೆ ಇವರಿಗೆ ಪರಿಹಾರ ಪೂರ್ತಿಯಾಗಿ ಕೊಟ್ಟಿಲ್ಲ. ಅರ್ಧಕ್ಕರ್ಧ ಮಾತ್ರ ಕೊಟ್ಟಿದ್ದಾರೆ. ಈಗಲಾದರೂ ಸರ್ಕಾರದವರು ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವರೆಲ್ಲರಿಗೂ ಸರಿಯಾಗಿ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾರ್ಪೊರೇಷನ್‌ನವರು ಏನು ಪರಿಹಾರ ಕೆಲಸಗಳನ್ನು ತೆಗೆದುಕೊಂಡರು, ಆ ಕೆಲಸಗಳನ್ನೂ ಸಹ ಅರ್ಧಕ್ಕೇ ನಿಲ್ಲಿಸಿದ್ದಾರೆ. ಮಳೆ ನೀರು ಹೋಗುವುದಕ್ಕೆ ವಾಲ್‌ಗಳನ್ನು ಕಟ್ಟಬೇಕಾಗಿತ್ತು. ದೊಡ್ಡ ದೊಡ್ಡ ಚರಂಡಿಗಳ ಎರಡು ಪಕ್ಕದಲ್ಲೂ ಎತ್ತರಕ್ಕೆ ಗೋಡೆಗಳನ್ನು ಕಟ್ಟಬೇಕು. ಈ ಗೋಡೆಗಳನ್ನು ಕಟ್ಟದೇಹೋದರೆ, ಮನೆಗಳಿಗೆ ನೀರು ನುಗ್ಗಿ ಜನರಿಗೆ ತೊಂದರೆಯಾಗುತ್ತದೆ. ಈ ಗೋಡೆಗಳ ಕೆಲಸವನ್ನೂ ಅರ್ಧಕ್ಕೆ ನಿಲ್ಲಿಸಿದ್ದಾರೆ. ಇದಕ್ಕೆ ಕಾರ್ಪೊರೇಷನ್‌ನವರನ್ನು ಕೇಳಿದರೆ, ನಮಗೆ ಸರ್ಕಾರದಿಂದ ದುಡ್ಡು ಬಂದಿಲ್ಲ ಅದಕ್ಕೋಸ್ಕರ ನಿಲ್ಲಿಸಿದ್ದೇವೆಂದು ಹೇಳುತ್ತಾರೆ. ಮಳೆಗಾಲ ಬರುತ್ತಾ ಇರುವುದರಿಂದ ಈ ಕೆಲಸಗಳನ್ನು ಈಗಲಾದರೂ ನಿಲ್ಲಿಸದೇ ಸರ್ಕಾರ ದುಡ್ಡು ಕೊಟ್ಟು, ತಕ್ಷಣ ಈ ಕೆಲಸಗಳನ್ನು ತೆಗೆದುಕೊಳ್ಳದೇ ಹೋದರೆ, ಮುಂದಿನ ಮಳೆಗಾಲದಲ್ಲೂ ಮನೆಗಳಿಗೆ ನೀರು ನುಗ್ಗುತ್ತದೆ, ಬಹಳಷ್ಟು ಜನರಿಗೆ ತೊಂದರೆಯಾಗುತ್ತದೆ. ಈಗ ಕಾರ್ಪೊರೇಷನ್‌ನವರು ಏನು ಅರ್ಧಂಬರ್ಧ ಕೆಲಸಗಳನ್ನು ಮಾಡಿದ್ದಾರೆ, ಅವುಗಳೆಲ್ಲವನ್ನೂ ಪೂರ್ತಿ ಮಾಡುವುದಕ್ಕೆ ತಕ್ಷಣ ಸರ್ಕಾರದವರು ದುಡ್ಡು ಕೊಡಬೇಕೆಂದೂ ಇಲ್ಲದೇಹೋದರೆ, ಈ ಪೂರಕ ಅಂದಾಜುಗಳಿಗೆ ಅರ್ಥ ಇಲ್ಲದಹಾಗೆ ಆಗುತ್ತದೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ. ಈ ಪೂರಕ ಅಂದಾಜಿನ ಬಗ್ಗೆ ಮಾತನಾಡುವುದಕ್ಕಿಂತ ಮೊದಲು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಸಾರ್ವಜನಿಕ ಹಿತದೃಷ್ಟಿಯಿಂದ ಅನೇಕ ಬೇಡಿಕೆಗಳನ್ನು ಈ ಸದನದಲ್ಲಿ ಮಂಡನೆ ಮಾಡಬೇಕೆಂದರೂ ಸಹಿತ, ಕೆಲವಾರು ಪ್ರಸಂಗಗಳಿಂದಾಗಿ ನಮಗೆ ಅವಕಾಶ ಸಿಗದೇ ಹೋಯಿತು. ಗವರ್ನರ್ ಭಾಷಣದ ಮೇಲೆ ಮಾತನಾಡುವಾಗಲೂ ಸಹ ನಮಗೆ ವಿಷಯ ಪ್ರಸ್ತಾವನೆ ಮಾಡುವುದಕ್ಕೆ ಆಗಲಿಲ್ಲ. ಬಜೆಟ್ ಮಂಡನೆ ಮಾಡಿದಾಗಲೂ ಸಹ ಕಡಿಮೆ ಸಮಯ ಇದ್ದುದರಿಂದ ನಾವು ವಿಷಯಗಳನ್ನು ಹೇಳುವುದಕ್ಕೆ ಆಗಲಿಲ್ಲ. ಪೂರಕ ಬಜೆಟ್ ಮೇಲೆ ಹೆಚ್ಚು ಸಮಯ ತೆಗೆದುಕೊಳ್ಳಬಾರದೆಂದು ಈಗಾಗಲೇ ಮಾನ್ಯ ಸ್ಪೀಕರ್‌ರವರು ನನ್ನ ಸ್ನೇಹಿತರಿಗೆ ಹೇಳಿದ ಈ ಮಾತು ನನಗೂ ಲಾಗು ಆಗುತ್ತದೆಂದು ತಿಳಿದುಕೊಂಡು ಕೆಲವು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಪೂರಕ ಬಜೆಟ್‌ನ್ನಾಗಲೀ, ಬಡ್ಜೆಟ್‌ನ್ನಾಗಲಿ ಇಡುವಾಗ, ಈ ಸಭೆಯ ನಾಯಕರಾಗಲೀ, ವಿರೋಧ ಪಕ್ಷದ ನಾಯಕರಾಗಲೀ, ಗಮನವಲ್ಲಿಡತಕ್ಕ ಮಾತು ಏನೆಂದರೆ, ಜನತೆಯ ಹಿತಕ್ಕಾಗಿ ನಾವು ವಿಷಯವನ್ನು ವಿಚಾರಣೆ ಮಾಡಬೇಕಾಗುತ್ತದೆ ವಿಶ್ಲೇಷಣೆ ಮಾಡಬೇಕಾಗುತ್ತದೆಯೇ ವಿನಹ ಕೇವಲ ವಿರೋಧ ಪಕ್ಷದವರು ಆಡಳಿತ ಪಕ್ಷದವರನ್ನು ವಿರೋಧ ಮಾಡುವುದಾಗಲೀ, ಆಡಳಿತ ಪಕ್ಷದವರು ವಿರೋಧ ಪಕ್ಷದವರನ್ನು ವಿರೋಧ ಮಾಡುವುದಾಗಲೀ ಸಮಂಜಸವಲ್ಲ ಎಂದು ನಾನು ಮಾನ್ಯ ಶಾಸಕರಿಗೆ ಹೇಳಿ, ನನ್ನ ಮಾತುಗಳನ್ನು ಮುಂದುವರಿಸುತ್ತೇನೆ

ಮೊಟ್ಟಮೊದಲನೆಯದಾಗಿ ಪ್ರಿಂಟಿಂಗ್ ಪ್ರೆಸ್‌ಗೆ ಹೋಗೋಣ. ಇದಕ್ಕಾಗಿ ಪೂರಕ ಬಜೆಟ್ ಮಂಡಿಸತಕ್ಕದ್ದು ವಾಸ್ತವಿಕವೇ ಎಂದು ವಿಚಾರ ಮಾಡಿದರೆ, ನಿಜವಾಗಿಯೂ ಎಲ್ಲೋ ಸೋರಿ ಹೋಗಿದೆ ಎಂಬುದು ಗೊತ್ತಾಗುತ್ತದೆ. ಪ್ರಿಂಟ್ ಆಗಿ ನಮ್ಮೆದುರಿಗೆ ಬರತಕ್ಕಂಥ ವಸ್ತುಗಳು ಬಂದಿಲ್ಲ. ಇಲ್ಲಿಯ ತನಕ ಮಾನ್ಯ ಸದನದ ನಾಯಕರಿಗೆ ಗೊತ್ತಿರುವ ಹಾಗೆ, ಅವರು ವಿರೋಧ ಪಕ್ಷದಲ್ಲಿ ಇದ್ದಾಗ, ನಾವು ಆ ಕಡೆ ಇದ್ದಾಗ, ಈ ಸದನದಲ್ಲಿ ಬರತಕ್ಕ ಪ್ರಶ್ನಾವಳಿಗಳೆಲ್ಲವನ್ನೂ ಪ್ರಿಂಟ್ ಮಾಡಿ, ಎಲ್ಲ ಸದಸ್ಯರಿಗೂ ಕೊಡುವಂತಹ ಸಂಪ್ರದಾಯ ಇತ್ತು. ನಾಳಿನ ಪ್ರಶ್ನೋತ್ತರಗಳು ಇವತ್ತೇ ಪ್ರಿಂಟ್ ಆಗತಕ್ಕಂಥ ವ್ಯವಸ್ಥೆ ಇತ್ತು. ಅಂದು ಪ್ರಿಂಟ್ ಆಗಲೇ ಬೇಕಾಗಿತ್ತು. ಪ್ರಿಂಟ್

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಗುವುದು ಒಂದು ನಿಮಿಷ ತಡವಾದರೂ ಕೇಳುತ್ತಿರಲಿಲ್ಲ. ಈಗ ಪ್ರಿಂಟ್ ಆಗಿ ಎಲ್ಲಾ ಸದಸ್ಯರಿಗೂ ಬರುವಹಾಗೇ ಇಲ್ಲ. ಸದಸ್ಯರಿಗೆ ಉತ್ತರ ಸಿಗುವ ಹಾಗೆ ಇಲ್ಲ. ಅನೇಕ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ಕಾನೂನುಗಳು ಆಗಿವೆ, ಅವೂ ಕೂಡಾ ಸಿಗುವಹಾಗೆ ಇಲ್ಲ. ಇವತ್ತು ರಾಜ್ಯದಲ್ಲಿ ಹದಿನೇಟು ಸಾವಿರ ಸಹಕಾರ ಸಂಘಗಳು ಇವೆ. ಸಹಕಾರ ಸಂಘದ ಕಾಯಿದೆಗಳನ್ನು ಎಲ್ಲಿಯವರೆಗೆ ಅಮೇಂಡ್‌ಮೆಂಟ್ ಮಾಡಿದ್ದಾರೆ ಎಂದರೆ, ಲಾ ಡಿಪಾರ್ಟ್‌ಮೆಂಟ್‌ನಲ್ಲಿರುವವರಿಗೂ ನೆನಪಿನಲ್ಲಿರಲಾರದಷ್ಟು ಅಮೆಂಡ್‌ಮೆಂಟ್ ಮಾಡಿರುತ್ತಾರೆ. ಈ ಅಮೆಂಡ್‌ಮೆಂಟ್‌ಗಳು ಎಲ್ಲಿವೆ? ಹುಡುಕಿದರೆ ಸ್ಟೇಟ್ ಲೆವೆಲ್ ಇನ್‌ಸ್ಟಿಟ್ಯೂಷನ್ಸ್‌ಗೂ ಸಿಗುವುದಿಲ್ಲ ಎಂದರೆ, ಇನ್ನು ಪ್ರಾಥಮಿಕ ಸಂಘಗಳಿಗೆ ಅವು ದೊರೆಯುವುದು ಹೇಗೆ? ಇಷ್ಟು ಅವಾಸ್ತವೀಕವಾದ ಪರಿಸ್ಥಿತಿ ಇದ್ದರೂ ಸಹ, ಪ್ರೆಸ್ ಹದಗೆಟ್ಟು ಹೋಗಿದ್ದರೂ ಸಹ, ಮತ್ತೆ ಅವರ ಪಗಾರಕ್ಕಾಗಿ ೨೫ ಲಕ್ಷ ರೂಪಾಯಿಗಳನ್ನು ಪೂರಕ ಬಜೆಟ್‌ನಲ್ಲಿ ಮಂಡನೆ ಮಾಡಿರುವುದನ್ನು ನೋಡಿದರೆ, ನಿಜವಾಗಿಯೂ ಸರಕಾರದ ದಕ್ಷತೆ ಕುಸಿದಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೂ ಸಹ ಈ ವಿಷಯದಲ್ಲಿ ನನ್ನ ಅಭಿಪ್ರಾಯಕ್ಕೆ ಒಪ್ಪುತ್ತಾರೆ ಎಂದು ಭಾವನೆ ಮಾಡುತ್ತೇನೆ.

ಎರಡನೆಯದಾಗಿ ನನ್ನ ಬಿ. ಜೆ. ಪಿ. ಸ್ನೇಹಿತರು, ರಾಯಚೂರು ಮತ್ತು ಬಾಗಲಕೋಟೆ ಮಿಲ್‌ಗಳಿಗೆ ಹಣ ಕೊಟ್ಟ ವಿಷಯ ಹೇಳಿದರು. ಈ ಸಭಾ ನಾಯಕರಿಗೂ ನಾನು ಅನೇಕ ಸಲ ಹೇಳಿದ್ದೇನೆ. ಈ ಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಕಾಗುವಂತಹ ಹಣವನ್ನು ಕೊಡಬೇಕು. ಒಬ್ಬನಿಗೆ ಇಂಜೆಕ್ಷನ್ ಕೊಡಬೇಕಾದರೆ, ಇನ್‌ಸುಲಿನ್ ಐವತ್ತು ಯೂನಿಟ್ ಆದರೆ ಬಹಳ ರೊಕ್ಕ ಆಗುತ್ತದೆ, ಐದು ಡೋಸ್ ಕೊಡೋಣ ಎಂದರೆ, ಯಾವನು ಇಂಜೆಕ್ಷನ್‌ನಿಂದ ಗುಣ ಹೊಂದುತ್ತಾನೆ? ಈ ಸಂಸ್ಥೆ ಈ ಸ್ಥಿತಿಗೆ ಬರಬೇಕಾದರೆ ಸರಕಾರದ ತಪ್ಪಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅಲ್ಲಿ ಅವ್ಯವಹಾರ ಆಗಿದೆ. ಈ ಅವ್ಯವಹಾರ ಯಾರು ಮಾಡಿದ್ದಾರೆ ಎಂದರೆ ನಿಮ್ಮ ಅಧಿಕಾರಿಗಳೇ ಮಾಡಿದ್ದಾರೆ. ಸರಕಾರದ ಅಧಿಕಾರಿಗಳನ್ನು ಹಾಕಿದ್ದೀರಿ. ಸರಕಾರಿ ಅಧಿಕಾರಿಗಳು ಹಣ ದುರುಪಯೋಗ ಮಾಡಿದ್ದಾರೆ ಎಂದು ತಮ್ಮ ಗಮನಕ್ಕೆ ತಂದರೂ ಇನ್ನೂ ತನಕ ಅವರನ್ನು ಸಸ್ಪೆಂಡ್ ಮಾಡದೇ ಹಾಗೆಯೇ ಇಟ್ಟಿದ್ದೀರಿ. ಚುನಾವಣೆಯಲ್ಲಿ ಆರಿಸಿ ಬಂದಂಥವರು ನಿಮ್ಮ ಪಕ್ಷದವರೇ ಇದರೂ ಸಹ ಅವರಿಂದ ಏನೂ ಮಾಡುವುದಕ್ಕೆ ಸಾಧ್ಯ ಇಲ್ಲ, ಹಣ ದುರ್ವಿನಿಯೋಗ ಮಾಡಿದ್ದಾನೆ ಎಂದು ಅವನ ಬಗ್ಗೆ ಹೇಳಿದರೂ ಸಹ ಅವರ ಮೇಲೆ ಕ್ರಮವಿಲ್ಲ. ಸಾಮಾನ್ಯ ಸಹಕಾರಿಗಳಿಗೆ ಹಣ ತಿನ್ನುವುದಕ್ಕೆ ಆಗುವುದಿಲ್ಲ. ಅಷ್ಟು ಕಾಯಿದೆ ಕಠಿಣವಾಗಿದೆ. ನೀವೂ ಸಹಕಾರಿಗಳು ನಿಮಗೆ ಗೊತ್ತಿರಬಹುದು. ದುರ್ದೈವದಿಂದ ಯಾರೋ ತಿಂದುದನ್ನು ಯಾರದ್ದೋ ಬಾಯಿಗೆ ಒರೆಸುವಂತಹ ದುಸ್ಥಿತಿ ಸಹಕಾರ ಚಳುವಳಿಗೆ ಬಂದಿದೆ. ಸಹಕಾರ ಚಳುವಳಿ ಎಂದರೆ ಹಣ ತಿನ್ನಲಿಕ್ಕೆ ಹುಟ್ಟಿದಂಥ ಸಂಸ್ಥೆ ಎಂದು ಹೇಳುವ ಅಭಿಪ್ರಾಯ ಬಂದಿದೆ. ಅದು ನಿವಾರಣೆ ಆಗಬೇಕು. ಬಾಗಲಕೋಟೆ ಮಿಲ್ಲಿಗೆ ೫ ಲಕ್ಷ ೬ ಲಕ್ಷ ಮಂಜೂರು ಮಾಡಿದ್ದೀರಿ, ಅದರ ಬದಲು ಎನ್.ಸಿ.ಡಿ.ಸಿ. ಯಿಂದ ಬಂದಂಥ ಹಣದಲ್ಲಿ ಅರ್ಧ ಭಾಗ ಹಣವನ್ನು ಅಲ್ಲಿಗೆ ಕೊಟ್ಟಿದ್ದರೆ ಅದು ಎಷ್ಟೋ ಸುಸೂತ್ರವಾಗಿ ನಡೆಯುತ್ತಿತ್ತು. ಅವರು ತಿಳಿದುಕೊಂಡರು ನೀವು ೬ ಲಕ್ಷ ರೂಪಾಯಿಗಳನ್ನು ನಡೆಸುವುದಕ್ಕೆ ಕೊಟ್ಟಿದ್ದೀರಿ ಎಂದು. ಆದರೆ ನೀವು ಅದನ್ನು ನಡೆಸುವುದಕ್ಕೆ ಹಣ ಕೊಡಲಿಲ್ಲ. ಅಲ್ಲಿಗೆ ಬಂದಂಥ ಕೂಲಿಕಾರರು ಧಾಳಿ ಮಾಡುತ್ತಾರ ಎಂದು ಕೂಲಿಗಾರರನ್ನು ಸಮಾಧಾನ ಮಾಡುವುದಕ್ಕೆ ಹಣ ಕೊಟ್ಟಿದ್ದೀರಿ. ಆ ಹಣದಿಂದ ಅವರು ಮಿಲ್‌ನ್ನು ನಡೆಸುವುದು ಹೇಗೆ ಎಂಬುದನ್ನು ತಾವೇ ಆಲೋಚನೆ ಮಾಡಿರಿ. ಕೇಂದ್ರ ಸರಕಾರದವರು ಸಹಾಯ ಮಾಡುವುದಿಲ್ಲ ಎಂದು ಅವರನ್ನು ಬಯ್ಯುತ್ತೀರಿ. ಆದರೆ ನಿಜವಾಗಿಯೂ ತಾವು ಆಲೋಚನೆ ಮಾಡಿರಿ. ಮಾರ್ಚ್ ತಿಂಗಳಲ್ಲಿ ಮಂಜೂರಾದಂಥ ಹಣವನ್ನು ಇನ್ನೂ ತನಕ ಬಿಡುಗಡೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಲಿಲ್ಲ. ಇದು ಯಾರ ತಪ್ಪು?

ಪೂರಕ ಬಜೆಟ್ ಯಾವುದರ ಸಲುವಾಗಿ ಇರುತ್ತದೆ ? ಬಜೆಟ್‌ನಲ್ಲಿ ಯಾವುದನ್ನು ಹಾಕಿಲ್ಲವೋ ಅದನ್ನು ಇದರಲ್ಲಿ ಸೇರಿಸಿ ಶೇಖರಣೆ ಮಾಡಿ ಪೂರಕ ಬಜೆಟ್ ಕೊಡಲಿಕ್ಕೆ ಇರುತ್ತದೆ. ಇದನ್ನು ತಾವು ಮಾಡಬೇಕು. ಅಧಿಕಾರಿಗಳು ಮಾಡಬೇಕು. ಪಗಾರ ತೆಗೆದುಕೊಳ್ಳತಕ್ಕಂಥವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅವರ ಮೇಲೆ ನಿಗಾ ವಹಿಸಿ ಕೆಲಸ ಮಾಡಿಸುವುದು ನಿಮ್ಮ ಕರ್ತವ್ಯ. ನೀವು ಸರಿಯಾಗಿ ಕೆಲಸ ಮಾಡಿದ್ದರೆ ಅದನ್ನು ಜನರ ಮುಂದೆ ತೆಗೆದುಕೊಂಡು ಹೋಗುವುದು ಜನರ ನಜರಿಗೆ ತರುವುದು ನಮ್ಮ ಕರ್ತವ್ಯ. ಇದನ್ನು ಮಾಡುವುದರಲ್ಲಿ ತಾವು ಲೋಪ ಮಾಡಿದ್ದೀರಿ. ಈ ಭಾರತ ದೇಶದಲ್ಲಿ ಅನೇಕ ಸಹಕಾರ ಸಂಘಗಳು ಬಹಳ ಉತ್ತಮ ರೀತಿಯಲ್ಲಿ ನಡೆಯುತ್ತಿವೆ. ಆ ಬಗ್ಗೆ ತಾವು ಏನು ಪ್ಲಾನ್ ಮಾಡಿದ್ದೀರಿ ? ರೈತರ ಹಿತ ಕಾಯುತ್ತೇವೆಂದು ತಾವು ಹೇಳುತ್ತೀರಿ ?

ರೈತ ಬೆಳೆದ ಮಾಲಿಗೆ ಸರಿಯಾದ ಧಾರಣೆ ಇವತ್ತು ಮಾರುಕಟ್ಟೆಯಲ್ಲಿ ಸಿಗುತ್ತಿಲ್ಲ. ನಾವು ನಿಮ್ಮನ್ನು ಕೇಳಿದರೆ ರೈತರ ಮಾಲಿಗೆ ಧಾರಣೆ ಗೊತ್ತುಮಾಡುವವರು ನಾವಲ್ಲವೆಂದು ಹೇಳಿ ನೀವು ಸುಮ್ಮನೆ ಕುಳಿತುಕೊಂಡರೆ ಆಗುತ್ತದೆಯೇ ? ರೈತರ ಮಾಲನ್ನು ನೀವು ಪರಿಷ್ಕರಣೆ ಮಾಡುವ ಸಲುವಾಗಿ ಇದರಲ್ಲಿ ಪ್ಲಾನ್ ಏನಾದರೂ ಮಾಡಿದ್ದೀರಾ ಎಂದು ನಾನು ಕೇಳಿದರೆ ಏನು ಉತ್ತರ ಹೇಳುತ್ತೀರಿ. ಇಲ್ಲಿ ಇವತ್ತು. ಟಮೋಟೋ ಬೆಲೆ ಒಂದು ಕೆ. ಜಿ. ಗೆ ೧–೨೦ ಪೈಸೆ ಆಗಿದೆ. ನಾನು ತಮಗೊಂದು ಪತ್ರ ಬರೆದೆ. ಅದಕ್ಕೆ ಉತ್ತರ ಸಹ ಬರೆದಿದ್ದೀರಿ. ನೀವು ಈ ಬಗ್ಗೆ ನಫೆಡ್‌ಗೆ ಪತ್ರ ಬರೆದಿದ್ದೇವೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ಎಂದರೆ ಆಗುವುದಿಲ್ಲ. ನೀವು ಈ ಬಗ್ಗೆ ನಿಮ್ಮ ಪ್ರಯತ್ನ ಏನು ಮಾಡಿದಿರಿ ? ರೈತನಿಗೆ ಇವತ್ತು ಒಂದು ಕೆ. ಜಿ. ಪೊಟೇಟೋಗೆ ೧–೨೦ ಪೈಸೆ ಸಿಕ್ಕಿದರೆ ಎಷ್ಟು ನಷ್ಟವಾಗುತ್ತದೆ. ಈ ನಷ್ಟವನ್ನು ಭರ್ತಿ ಮಾಡಿ ಕೊಡುವುದಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡುತ್ತದೆಯೇ ? ನಾನು ಸಹ ನನ್ನ ಪ್ರಯತ್ನವನ್ನು ಆದಷ್ಟು ಮಟ್ಟಿಗೆ ಮಾಡುತ್ತಿದ್ದೇನೆ. ನೀವು ನಿಮ್ಮ ಕಡೆಯಿಂದ ಕೇಂದ್ರ ಸರ್ಕಾರದ ಕಣ್ಣು ತೆರೆಸುವ ದಿಸೆಯಲ್ಲಿ ಯಾವ ಕೆಲಸ ಮಾಡಿದ್ದೀರಿ ? ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ? ಬರೀ ಕೇಂದ್ರ ಸರ್ಕಾರದ ಮೇಲೆ ಹೇಳಿಕೊಳ್ಳುತ್ತಾ ಹೋದರೆ ಆಗುತ್ತದೆಯೇ ? ಇದನ್ನು ನೀವೇ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ನಮ್ಮಲ್ಲಿ ಎಷ್ಟು ಸಕ್ಕರೆ ಮಿಲ್‌ಗಳು ಬಂದ್ ಆದವು ? ಇಂಡಸ್ಟ್ರಿ ಮಾಡಲು ನಮ್ಮ ರೈತರು ಹಣ ಕೊಡುತ್ತಾರೆ. ಇದರಿಂದ ಅವರಿಗೂ ಲಾಭ ಆಗುತ್ತದೆ. ಸರ್ಕಾರಕ್ಕೂ ಹಣ ಬರುತ್ತದೆ. ಜನ ಹಣ ಕೊಡಲಿಕ್ಕೆ ತಯಾರು ಇದ್ದಾರೆ. ದುರಾದೃಷ್ಟವಶಾತ್ ತಾವು ಈ ಕೆಲಸ ಮಾಡದೆ ಏನೇನೋ ಮಾಡಲು ಹೊರಟಿದ್ದೀರಿ. ಮಾನ್ಯ ಜೆ. ಹೆಚ್. ಪಟೇಲ್‌ರವರು ಅಮೇರಿಕ ಇಂಗ್ಲೇಂಡ್‌ಗೆ ಎತಕ್ಕೆ ಹೋಗಬೇಕು ? ಹಣ ಕೊಡುವ ಜನ ನಮ್ಮಲ್ಲಿ ಕಡಿಮೆ ಇದ್ದಾರೇನು ? ನಮ್ಮಲ್ಲಿ ನಿರುದ್ಯೋಗ ಇದೆ. ಆ ಮಂದಿಯನ್ನು ಕರೆದು ಇಂಡಸ್ಟ್ರಿ ಮಾಡಿ ಎಂದು ಹೇಳಿ. ಈ ಬಗ್ಗೆ ನೀವು ಈ ಪೂರಕ ಬಜೆಟ್‌ನಲ್ಲಿ ಏನನ್ನು ಹೇಳಿಲ್ಲ ಇನ್ನು ವರಲ್ಡ್ ಬ್ಯಾಂಕ್‌ನವರು ನಮ್ಮ ಕರ್ನಾಟಕ ರಾಜ್ಯಕ್ಕೆ ಎರಡು ಮಿಲ್‌ಗಳನ್ನು ಪ್ರಾರಂಭ ಮಾಡಲು ಹಣ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನು ಒಂದು ಮಿಲ್ ಪ್ರಾರಂಭ ಮಾಡುವ ಬಗ್ಗೆ ನಾವು ಒತ್ತಾಯ ಮಾಡುತ್ತಿದ್ದೇವೆ. ಅವರು ಅರ್ಧಂಬರ್ಧ ಒಪ್ಪಿಗೆ ಕೊಟ್ಟಿದ್ದಾರೆ. ಈ ಬಗ್ಗೆ ನಿಮ್ಮ ಕಾರ್ಯಕ್ರಮ ಏನು ? ನಮ್ಮ ಹಳೆಯ ಮೈಸೂರು ಭಾಗದಲ್ಲಿ ವರಲ್ಡ್ ಬ್ಯಾಂಕ್ ನೆರವಿನಿಂದ ಒಂದು ಟೆಕ್ಸ್‌ಟೈಲ್ ಮಿಲ್ ಸಹ ಮಾಡಿಲ್ಲ. ಈ ದಿಸೆಯಲ್ಲಿ ತಮ್ಮ ಪ್ರಯತ್ನ ಏನು ? ತಾವು ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕು. ಇವತ್ತು ಈ ಬಗ್ಗೆ ನಾವು ನೀವು ಕೂಡಿ ಜನ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಕೆಲಸ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಇಲ್ಲ ನಮ್ಮ ಮಾನ್ಯ ವಿರೇಣ್ಣನವರು ಸ್ಮಾಲ್‌ಸ್ಕೇಲ್ ಮಂತ್ರಿಗಳಾಗಿದ್ದರು. ಅವರು ಬರೀ ಎಂ, ಎಲ್. ಎ. ಗಳ ಪಗಾರದಲ್ಲಿ ೧೦೦ ರೂಪಾಯಿಗಳು ಹಿಡಿಯುವುದು, ಬಡವರು ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋದರೆ ಅಲ್ಲಿ ೧೦ ರೂಪಾಯಿ ಉಳಿತಾಯ ಪತ್ರ ತನ್ನಿ ಎಂದು ಹೇಳುವುದು ಇತ್ಯಾದಿ ರೀತಿಯಲ್ಲಿ ಸ್ಮಾಲ್ ಸೇವಿಂಗ್ಸ್ ಮಾಡಿದರೆ ಅದು ಸೇವಿಂಗ್ಸ್ ಆಗುತ್ತದೆಯೇ ? ಈ ಬಗ್ಗೆ ತಾವು ಏನು ಪ್ಲಾನ್ ಮಾಡಿದ್ದೀರಿ ? ತಾವು ಇಂತಹ ಸಣ್ಣ ಸಣ್ಣ ಕೆಲಸಗಳಿಗೂ ಲಕ್ಷ್ಯ ಕೊಡದಿದ್ದರೆ ಹೇಗೆ ? ನಾನು ಸ್ಟ್ಯಾಂಪ್ ಬಗ್ಗೆ ಒಂದು ಮಾತು ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ಜನರಿಗೆ ಬೇಕಾಗುವ ಸ್ಟ್ಯಾಂಪ್ ಪೇಪರ್ ಸಿಗುತ್ತಿಲ್ಲ. ಎಷ್ಟು ಹುಡಿಕಿದರೂ ಸ್ಟ್ಯಾಂಪ್ ಪೇಪರ್ ಸಿಗುತ್ತಿಲ್ಲ. ನಾನು ಸ್ಟ್ಯಾಂಪ್ ಪೇಪರ್ ತರಲು ಕಳುಹಿಸಿದ ಹುಡುಗನು ಸಿಗಲಿಲ್ಲ ಎಂದು ಬಂದು ಹೇಳಿದಾಗ ನಮ್ಮ ಹುಡುಗನನ್ನು ಬೈದು ನೀನು ಸುಳ್ಳು ಹೇಳುತ್ತಿದ್ದೀಯ ನಾನೇ ಹೋಗುತ್ತೇನೆಂದು ಕಾರು ತೆಗೆದುಕೊಂಡು ಹೋಗಿ ಎರಡು ಮೂರು ಕಡೆ ವಿಚಾರಿಸಿದೆ ಕಡೆಗೂ ೫ ರೂಪಾಯಿ ಸ್ಟ್ಯಾಂಪ್ ಪೇಪರ್ ಸಿಗಲಿಲ್ಲ. ಆತ ಹೇಳಿದ ಮಿನಿಮಮ್ ೪೦ ರೂಪಾಯಿ ಸ್ಟ್ಯಾಂಪ್ ಪೇಪರ್ ಇದೆ ಎಂದು ಬಡವ ೫ ರೂಪಾಯಿ ಕೆಲಸಕ್ಕೆ ೪೦ ರೂಪಾಯಿ ಖರ್ಚು ಮಾಡಬೇಕೇ ? ಅವರಿಗೆ ಕೊಡಬೇಕಾದ ಹಣ ಕೊಟ್ಟಿಲ್ಲ ಅದಕ್ಕೆ ಸ್ಟ್ಯಾಂಪ್ಸ್ ಸಿಗುತ್ತಿಲ್ಲವೆಂದು ಗೊತ್ತಾಯಿತು. ಇದು ಏನಾಗಿದೆ ಎಂದರೆ ಲಗ್ನ ಮಾಡುವವರೆಗೂ ಹುಚ್ಚು ಬಿಡುವುದಿಲ್ಲ ಹುಚ್ಚು ಬಿಡುವ ತನಕ ಲಗ್ನವಾಗುವಂತೆ ಇಲ್ಲವೆಂದ ಹಾಗಾಗಿದೆ. ಇದೊಂದು ಅತಿ ಸಣ್ಣ ಅಥವಾ ಕೆಲಸ. ಇದನ್ನು ನೀವು ಮಾಡಬೇಕಾಗಿಲ್ಲ. ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಅಥವಾ ಸೆಕ್ರೆಟರಿ ಅವನ ಕೆಳಗೆ ಇರತಕ್ಕಂಥ ಡೈರೆಕ್ಟರ್ ಮಾಡತಕ್ಕಂಥ ಕೆಲಸ ಈ ದೃಷ್ಟಿಯಿಂದ ಎಲ್ಲರಲ್ಲಿಯೂ ಅಂಡರ್‌ದಕ್ಷತೆ ಇರಬೇಕು. ದಕ್ಷತೆ ಎಂದರೆ ದೊಡ್ಡ ದೊಡ್ಡ ಕೆಲಸಗಳನ್ನು ಚೆನ್ನಾಗಿ ಮಾಡಬೇಕು. ಈ ಪೂರಕ ಬಜೆಟ್ ಒಳಗೆ ಮತ್ತೆ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಗೆ ರೊಕ್ಕ ಕೊಟ್ಟಿದ್ದೀರಿ. ಎತಕ್ಕೆ ಕೊಟ್ಟಿದ್ದೀರಿ ? ಇನ್ನೂ ಹಾಳು ಮಾಡಲಿಕ್ಕೆ ಹಣ ಕೊಟ್ಟಿದ್ದೀರಾ ? ಹೋದ ವರ್ಷ ಮಾನ್ಯ ಜೆ. ಹೆಚ್. ಪಟೇಲರು ಈ ಫ್ಯಾಕ್ಟರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸದನದ ಒಳಗೂ ಹೇಳಿದ್ದರೂ ಹೊರಗೂ

ಹೇಳಿದ್ದರು. ಹೋದ ವರ್ಷ ಎಷ್ಟು ಲಾಸ್ ಆಗಿತ್ತೋ ಅದರ ಡಬಲ್ ಲಾಸ್ ಈ ವರ್ಷ ಆಗಿದೆ. ಐ. ಎ. ಎಸ್. ದಕ್ಷ ಅಧಿಕಾರಿಯನ್ನು ಅಲ್ಲಿ ಹಾಕಿದ್ದೇವೆಂದು ತಾವು ಹೇಳುತ್ತೀರಿ. ಈ ಫ್ಯಾಕ್ಟರಿಗೆ ಅತ್ಯಧಿಕ ಹಾನಿ ಆಗಿರುವುದಕ್ಕೆ ಆ ಆಫೀಸರ್ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಯಾವುದಾದರೂ ಸಹಕಾರಿ ಸಂಘದಲ್ಲಿ ಲಾಸ್ ಆದರೆ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ಇಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇನ್ನೂ ಅವರುಗಳಿಗೆ ಶಹಬಾಸ್‌ಗಿರಿಯನ್ನು ಕೊಡುತ್ತೀರಿ. ಈ ಫ್ಯಾಕ್ಟರಿಗೆ ಕೊಡುವ ಹಣವನ್ನು ರಾಯಚೂರು ಮತ್ತು ಬಾಗಲಕೋಟೆಯಲ್ಲಿರುವ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಕೊಟ್ಟಿದ್ದಿದ್ದರೆ ಇನ್ನೂ ಚೆನ್ನಾಗಿ ಮಿಲ್‌ಗಳು ನಡೆಯುತ್ತಿದ್ದವು. ನಿಂತು ಹೋಗಿರುವ ಮಿಲ್‌ಗಳನ್ನು ಪ್ರಾರಂಭಿಸುವ ವಿಷಯವನ್ನು ಕ್ಯಾಬಿನೆಟ್ ಮುಂದೆ ತರುತ್ತೇವೆಂದು ನೀವು ಹೇಳಿ ಎಷ್ಟು ದಿವಸ ಆಯಿತು. ಇವತ್ತಿನ ದಿವಸ ಬಹುತೇಕ ಮಿಲ್ಲ್‌ಗಳು ಕೆಲಸ ಮಾಡದೆ ನಿಂತುಹೋಗಿವೆ. ನಾನು ಅಖಿಲ ಭಾರತ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್ ಫೆಡರೇಷನ್‌ನ ಅಧ್ಯಕ್ಷನಾಗಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಬಹುತೇಕ ಮಿಲ್‌ಗಳು ನಿಂತುಹೋಗಿರುವುದರಿಂದ ನನ್ನದು ತಲೆತಗ್ಗಿಸತಕ್ಕ ಕೆಲಸವಾಗಿದೆ. ಇದರಿಂದ ನಾನು ಅಧ್ಯಕ್ಷನಾಗುವುದು ಸರಿಯಿಲ್ಲವೆಂದು ಆ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಮಾಡಿದ್ದೆ. ಎಲ್ಲರೂ ಕೂಡಿ ನೀವು ಆ ಸ್ಥಾನದಿಂದ ಹೋಗಬಾರದೆಂದು ಹೇಳಿದ ಮೇಲೆ ಉಳಿಯುವಂತ ಪ್ರಸಂಗ ಬಂತು. ನಾವು ಏನಾದರೂ ಹೇಳಿದರೆ ವಿರೋಧ ಪಕ್ಷದವರಾಗಿರುವುದರಿಂದ ಈ ರೀತಿ ಹೇಳುತ್ತಿದ್ದಾರೆಂದು ತಾವು ತಿಳಿದುಕೊಳ್ಳುತ್ತೀರಿ. ನಾನು ಹೇಳುವ ಪ್ರಕಾರ ಯಾವ ಮಿಲ್‌ಗಳೂ ಬಂದ್ ಆಗಬಾರದು. ಮಿಲ್‌ಗಳು ಬಂದ್ ಆದರೆ ನನಗೂ ಅವಮಾನ ನಿಮಗೂ ಅವಮಾನ. ಮಿಲ್‌ಗಳ ಅಭಿವೃದ್ಧಿಗಾಗಿ ಹೋದವರ್ಷಕ್ಕಿಂತ ಈ ವರ್ಷ ಹೆಚ್ಚು ಹಣವನ್ನು ಭಾರತ ಸರ್ಕಾರದವರು ಮತ್ತು ಎನ್. ಸಿ. ಡಿ. ಸಿ. ಯವರು ಮಂಜೂರು ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದಲ್ಲಿ ಹಣಕಾಸಿನ ವಿಚಾರ ಸ್ವಲ್ಪ ಕಠಿಣವಾಗಿರುವುದರಿಂದ ಹೆಚ್ಚು ಹಣವನ್ನು ಈ ಬಾಬಿಗೆ ಇಟ್ಟಿಲ್ಲವೆಂದು ಹೇಳಿದ್ದೀರಿ. ಮಿಲ್‌ಗಳ ಅಭಿವೃದ್ಧಿಗೆ ನಿಮ್ಮ ಬಜೆಟ್‌ನಲ್ಲಿ ಯಾವ ರೀತಿಯ ಹಣವನ್ನೂ ಇಟ್ಟಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಪರಿಶೀಲನೆ ಮಾಡಿ. ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ನವರು ಮಿಲ್‌ಗಳಿಗೆ ೬ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ ಎಂದು ತಿಳಿಸಿದ್ದೀರಿ. ಫೈನಾನ್ಸ್ ಕಾರ್ಪೊರೇಷನ್‌ನವರು ಎಷ್ಟು ಇಂಡಸ್ಟ್ರೀಗಳಿಗೆ ಹಣವನ್ನು ಸಾಲವಾಗಿ ಕೊಟ್ಟಿದ್ದಾರೆಂದು ತಾವು ನೋಡಿದ್ದೀರಾ ? ಹಣ ಪಡೆದ ಮಿಲ್‌ಗಳು ಬಡ್ಡಿ ಕೊಟ್ಟಿಲ್ಲ ಎನ್ನುವ ಕಾರಣಕ್ಕಾಗಿ ಮಿಲ್‌ಗಳನ್ನು ಈ ಕಾರ್ಪೊರೇಷನ್‌ನವರು ತಮ್ಮ ವಶಕ್ಕೆ ತೆಗೆದುಕೊಂಡುಬಿಡುತ್ತಾರೆ. ಈ ರೀತಿ ನಡೆಯುತ್ತಿರುವ ಮಿಲ್‌ಗಳನ್ನು ವಶಕ್ಕೆ ತೆಗೆದುಕೊಂಡರೆ, ಕಾರ್ಪೊರೇಷನ್‌ಗೆ ಬರುವ ಬಡ್ಡಿಯೂ ಬರುವುದಿಲ್ಲ, ಸಾಲವೂ ಬರುವುದಿಲ್ಲ. ಜೊತೆಗೆ ಮಿಲ್ ಕೂಡ ಮುಚ್ಚಿ ಹೋಗುತ್ತದೆ. ಸಣ್ಣ ಸಣ್ಣ ಇಂಡಸ್ಟ್ರೀಗಳಿಗೆ ಸಾಲ ಕೊಟ್ಟು ನಂತರ ಅವುಗಳನ್ನು ವಶಕ್ಕೆ ತೆಗೆದುಕೊಳ್ಳಬಾರದು. ಇಂಡಸ್ಟ್ರೀಗಳು ಚೆನ್ನಾಗಿ ನಡೆಯುವುದಕ್ಕೆ ಹೆಚ್ಚು ಅವಕಾಶಗಳನ್ನು ಮಾಡಿಕೊಡಬೇಕು. ದೊಡ್ಡ ದೊಡ್ಡ ಇಂಡಸ್ಟ್ರಿಯವರು ೨ ಕೋಟಿ ರೂಪಾಯಿ ಇಲೆಕ್ಟ್ರಿಸಿಟಿ ಫೀಸ್ ಕೊಡುವುದಿದ್ದರೂ ಅವರುಗಳನ್ನು ಕ್ಷಮಾ ಮಾಡುತ್ತೀರಿ. ೧೫ ರೂಪಾಯಿ ೨೦ ರೂಪಾಯಿ ಬಾಕಿ ಇದ್ದವರ ಮನೆಯಲ್ಲಿ ಎಲೆಕ್ಟ್ರಿಸಿಟಿಯನ್ನು ದಿಸಕನೆಕ್ಟ್ ಮಾಡುತ್ತೀರಿ. ಮಾನ್ಯ ಜೆ. ಹೆಚ್. ಪಟೇಲರು ಇದನ್ನೆಲ್ಲಾ ಪರಿಶೀಲನೆ ಮಾಡಿ ನೋಡಲಿ. ಇವತ್ತು ಕೈಗಾರಿಕೆಗಳ ಇಲಾಖೆಯು ಮಾನ್ಯ ವೀರಣ್ಣನವರ ಕೈಯಲ್ಲಿದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ. ಮಾನ್ಯ ಸದಸ್ಯರಿಗೆ ಈ ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅವರ ಪ್ರಯೋಜನ ಸದನಕ್ಕಾಗಲಿ ಎಂದು ಇಷ್ಟನ್ನು ಮಾತ್ರ ಕೇಳುತ್ತೇನೆ. ನಾವು ನಮ್ಮ ರಾಜ್ಯದಲ್ಲಿ ಸುಮಾರು ೧೦ ಲಕ್ಷ ಬೇಲ್ ಹತ್ತಿಯನ್ನು ಬೆಳೆಯುತ್ತೇವೆ. ನಮ್ಮಲ್ಲಿರುವ ೨೪ ಮಿಲ್‌ಗಳಲ್ಲಿ ಸುಮಾರು ೧೨-೧೩ ಮಿಲ್‌ಗಳು ಬಂದ್ ಆಗಿವೆ ಅಥವಾ ಬಂದ್ ಆಗುವ ಸ್ಥಿತಿಯಲ್ಲಿವೆ. ಆದರೆ, ೧೬೦ ಮಿಲ್‌ಗಳಿರುವ ತಮಿಳುನಾಡಿನಲ್ಲಿ ನಮಗಿಂತ ಎರಡು ಲಕ್ಷ ಬೇಲ್ ಕಡಿಮೆ ಹತ್ತಿ ಬೆಳೆಯುತ್ತಿದ್ದರೂ ಅವರು ಸಕ್ಸಸ್‌ಫುಲ್ ಆಗಿ ಮಿಲ್‌ಗಳನ್ನು ನಡೆಸುತ್ತಿದ್ದಾರೆ ಅದು ಹೇಗೆ ?

ಶ್ರೀ ಕೆ. ಹೆಚ್. ಪಾಟೀಲ್. ನಮ್ಮ ಕರ್ನಾಟಕದಲ್ಲಿರುವ ಬಹುತೇಕ ಮಿಲ್‌ಗಳಲ್ಲಿ ಹಳೆ ಮಾದರಿಯ ಮಿಷನರಿಗಳು ಇವೆ. ಬಹಳ ಹಳೆಯ ಮೆಷನರಿಗಳನ್ನು ಇಟ್ಟುಕೊಂಡು ಅಪ್ ಟೂಡೇಟ್ ಮೆಷಿನರಿಯನ್ನು ಇಟ್ಟುಕೊಂಡಿರುವವರ ಜೊತೆಯಲ್ಲಿ ಕಾಂಪೀಟ್ ಮಾಡಲಿಕ್ಕಾಗುವುದಿಲ್ಲ, ನಡೆಸಿದರೆ ಲೇಬರ್ ಚಾರ್ಜ್ ಹೆಚ್ಚು ಬರುತ್ತದೆ. ಹೊಸ ಮೆಷನರಿ ಹಾಕಿರುವವರು ಮಾಡ್ರನೈಸೇಷನ್ ಫಂಡ್ ಸಹಕಾರಿ ರಂಗಕ್ಕೆ ಕ್ರಿಯೇಟ್ ಮಾಡುವುದರಿಂದ, ಇವು ಸ್ವಲ್ಪ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿವೆ. ಈ ಹಣ ಉಪಯೋಗ ಮಾಡಿ ಮೆಷನರಿಗಳನ್ನು ಹಾಕಿದರೆ ನಿಜವಾಗಿ ಬಹಳ ಉತ್ತಮವಾಗಿ ನಡೆಯುತ್ತವೆ. ಬಂದ್ ಆಗುವುದಕ್ಕೆ ಕಾರಣವೇ ಇಲ್ಲ.

ಮತ್ತು ನನ್ನ ಅಭಿಪ್ರಾಯದೊಳಗೆ ಇದರಲ್ಲಿ ಉಳಿದ ರಾಜ್ಯಗಳಿಗಿಂತಲೂ ಕರ್ನಾಟಕ ರಾಜ್ಯದವರಿಗೆ ಹೆಚ್ಚು ಲಾಭವಾಗುತ್ತದೆ. ಏಕೆಂದರೆ ಇಲ್ಲಿ ಎರಡು ತರಹದ ಹತ್ತಿಯು ಬೆಳೆಯುತ್ತದೆ. ಲಾಂಗ್ ಸ್ಟೆಪಲ್ ಮತ್ತು ಶಾರ್ಟ್ ಸ್ಟೆಪಲ್ ತರಗತಿಯ ಹತ್ತಿಯು ಇಲ್ಲಿ ಬೆಳೆಯುತ್ತದೆ. ಮಾನ್ಯ ಜೆ. ಹೆಚ್. ಪಟೇಲ್‌ರವರ ಚೆನ್ನಗಿರಿಯಲ್ಲಿಯೂ ಕೂಡ ಡಿಸಿಹೆಚ್ ೩೨ ಹತ್ತಿಯು ಉತ್ತಮವಾದಂಥ ರೀತಿಯಲ್ಲಿ ಬೆಳೆಯುತ್ತದೆ. ಈ ಜಾತಿಯ ಹತ್ತಿಯು ಬೇರೆಕಡೆಗಳಲ್ಲಿ ಸಿಗುವುದಿಲ್ಲ. ಹೀಗಿರುವಾಗ ಅಲ್ಲಿ ಒಂದು ಮಿಲ್‌ನ್ನು ಮಾಡಿದರೆ ಅದು ಬಹಳ ಚೆನ್ನಾಗಿ ನಡೆಯುತ್ತದೆ. ಚೆನ್ನಗಿರಿಯಲ್ಲಿ ನಿಮ್ಮ ಆಶೀರ್ವಾದದಿಂದ ಮತ್ತು ಜನರ ಪ್ರಯತ್ನದಿಂದ ಒಂದು ಮಿಲ್ ಆಗಬೇಕೆಂದು ನಾನು ಆಶಿಸುತ್ತೇನೆ. ಇದನ್ನು ನಮ್ಮ ಪಕ್ಷದವರು ಇರುವಂಥ ಸ್ಥಳದಲ್ಲಿ ಕೊಡದಿದ್ದರೂ ಅಡ್ಡಿ ಇಲ್ಲ, ನಿಮ್ಮ ಪಕ್ಷದವರೇ ಇರುವ ಕೋಲಾರ ದಲ್ಲಿ ಒಂದು ಪೊಟೆಟೋ ಸ್ಟಾರ್ಚ್ ಕಾರ್ಖಾನೆಯನ್ನು ಹಾಕೋಣ. ಅದರಿಂದ ಅಲ್ಲಿಯ ಜನರಿಗೆ ಟೊಮೊಟೋ ಕೆ.ಜಿ. ಒಂದಕ್ಕೆ ೧-೨೦ ಸಿಗುತ್ತಿದ್ದು ಅದು ಕೆ.ಜಿ. ಗೆ ೮ ರೂಪಾಯಿಗಳ ತನಕ ದೊರಕುತ್ತದೆ. ಹಾಗಾದರೂ ಒಂದು ಕೆಲಸವನ್ನು ಮಾಡಿ. ಹಾಸನದಲ್ಲಿನ ನಿಮ್ಮ ಕೋಲ್ಡ್ ಸ್ಟೋರೇಜ್ ಕಾರ್ಖಾನೆಯು ಕೆಲಸವಿಲ್ಲದೆ ಒಂದು ಕ್ರೀಡಾಂಗಣವಾಗಿದೆ. ಈಗ ಅಲ್ಲಿ ಪೊಟಾಟೋ ಸ್ಟೋರೇಜ್ ಮಾಡಲಿಕ್ಕೆ ಪ್ರಾರಂಭ ಮಾಡಿ ಅದನ್ನು ಪ್ರೊಸೆಸಿಂಗ್ ಮಾಡುವಂಥ ಒಂದು ಕೆಲಸವನ್ನು ಮಾನ್ಯ ಮಂತ್ರಿಯವರಾದ ವೀರಣ್ಣನವರು ಮಾಡಲಿ. ಅದರ ಮೂಲಕ ಅವರು ಶಹಬಾಸ್‌ಗಿರಿಯನ್ನು ಪಡೆದುಕೊಳ್ಳಲಿ. ಹಿಂದೆ ಅವರು ಉತ್ತಮವಾದಂಥ ಕೆಲಸವನ್ನು ಸ್ಮಾಲ್ ಸೇವಿಂಗ್ಸ್‌ನಲ್ಲಿ ಮಾಡಿ ಪಡೆದ ಸರ್ಟಿಫಿಕೇಟ್‌ನ್ನು ಕಾಯಂಗೊಳಿಸಬೇಕಾದರೆ ಅವರು ಈ ಖಾತೆ ಯಲ್ಲಿಯೂ ಕೂಡ ಅದೇ ರೀತಿಯ ಕೆಲಸವನ್ನು ಮಾಡಬೇಕಾಗುತ್ತದೆ. ಹಿಂದೆ ಇದ್ದ ಸರ್ಟಿಫಿಕೇಟ್‌ನ್ನು ಖಾಯಂಗೊಳಿಸಿಕೊಳ್ಳಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ನಿರೀಕ್ಷೆ ಮಾಡುತ್ತೇನೆ.

ಇಡೀ ಭಾರತದೇಶದೊಳಗೆ, ಅನೇಕ ದೇಶಗಳಲ್ಲಿ ಬೇರೆ ಬೇರೆ ರೀತಿಯಿಂದ ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಂದ ಸಹಾಯವನ್ನು ಪಡೆದು ಜನರ ಸೇವೆ ಯನ್ನು ಸಹ ತೆಗೆದುಕೊಂಡು ಉತ್ತಮವಾದಂಥ ಇಂಡಸ್ಟ್ರೀಗಳನ್ನು ಸಹಕಾರರಂಗದಲ್ಲಿ ಬೆಳೆಸುತ್ತಾ ಇದ್ದಾರೆ. ಅದು ಇಲ್ಲಿಯೂ ಆಗಬೇಕಾಗಿದೆ. ಇವೊತ್ತು ಸುದೈವದಿಂದ ನಮ್ಮ ಸಹಕಾರಿ ನಿಗಮಕ್ಕೆ ನಮ್ಮಲ್ಲಿಯವರೇ ಆದ ಮಾನ್ಯ ಆರೋರಾರವರು ಎಂ. ಡಿ. ಯವರಾಗಿದ್ದಾರೆ. ಅವರಿಗೆ ಕರ್ನಾಟಕ ರಾಜ್ಯದ ಸಂಪೂರ್ಣವಾದಂಥ ಪರಿಚಯವಿದೆ. ಇಂಥವರ ಉಪಯೋಗ ಮಾಡಿಕೊಳ್ಳುವುದನ್ನು ಬಿಟ್ಟು ರಾಯಚೂರಿನಲ್ಲಿದುದ್ದು ಕಟ್ ಆಗಿದೆ, ಅದನ್ನು ಯಾರಿಗಾದರೂ ಮಾರಾಟ ಮಾಡೋಣ ವಿಜಾಪುರದಲ್ಲಿ ಇರುವುದನ್ನು ಯಾರಾದರೂ ತೆಗೆದುಕೊಳ್ಳುವವರಿದ್ದರೆ ಮಾರಾಟ ಮಾಡಿ ಎಂದು ಹೇಳುವುದು ನಂತರ ವಿರೋಧಪಕ್ಷದವರು ಬೈದುಕೊಳ್ಳುತ್ತಾರೆ ಎಂದು ಹೇಳುವುದು ಒಳ್ಳೆಯದಲ್ಲ ಇವೊತ್ತು ಸೋಶಿಯಲಿಸ್ಟ್ ಡೆಮಾಕ್ರಸಿ ಈ ದೇಶದೊಳಗೆ ಸರ್‌ವೈವ್ ಆಗಬೇಕೆಂದು ಯಾರಿಗಾದರೂ ಇಚ್ಛೆ ಇದ್ದರೆ, ಅದು ಸಹಕಾರಿ ರಂಗದೊಳಗೆ ಆಗುತ್ತದೆ. ತಾವು ಒಂದು ಸಹಕಾರಿ ನಿಗಮವನ್ನು ಮಾಡಿ, ಯಾವ ಯಾವ ಮಿಲ್‌ಗಳನ್ನು ಬಂದ್ ಮಾಡುತ್ತಾರೆ ಅವರಿಂದ ಮಿಲ್ಲ್‌ಗಳನ್ನು ತೆಗೆದುಕೊಂಡು ನಡೆಸಬೇಕು ಅಲ್ಲಿ ಬೇಕಾದರೆ ನಿಮ್ಮ ಪಕ್ಷದವರನ್ನೇ ಹಾಕಿ, ಅದಕ್ಕೆ ಒಂದು ಮಂಡಳವನ್ನು ಮಾಡಿ ಕೊಳ್ಳಿ. ಆದರ ಅಧಿಕಾರವನ್ನು ಅವರ ಕೈಗೆ ಕೊಡಿ. ಹೀಗೆ ಮಾಡಿದರೆ ಅದು ಏಕೆ ನಡೆಯುವುದಿಲ್ಲ ಎಂದು ನೋಡಿ ? ಈಗ ನಮ್ಮಲ್ಲಿ ಹಲ್ಲು ಇದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲು ಇಲ್ಲ ಎಂಬಂತಾಗಿದೆ ಇಂಥ ಒಂದು ದುಸ್ಥಿತಿ ನಮ್ಮ ರಾಜ್ಯಕ್ಕೆ ಬರಬಾರದಿತ್ತು.

ನಮ್ಮ ಕೆ.ಎಸ್.ಎಫ್.ಸಿ. ಯವರ ದುಸ್ಥಿತಿಯ ಬಗ್ಗೆ ಆಗಲೇ ಹೇಳಿದ್ದೇನೆ. ಇವರಿಗೆ ಕೊಡ ಬೇಕಾದ ಸಣ್ಣ ಸಣ್ಣ ಕಂತುಗಳನ್ನು ಕಟ್ಟದಿದ್ದರೂ ಕೂಡ ಕದ ಹಾಕಿ ಬಿಡುವ ಹಂತಕ್ಕೆ ಬಂದಿದ್ದಾರೆ. ಇದಕ್ಕೆ ತಮ್ಮ ಆದೇಶ ಇದೆಯೋ ಎಂ. ಡಿ, ಯವರ ಆದೇಶದ ಇದೆಯೋ ಎನ್ನುವುದು ಗೊತ್ತಾಗುವುದಿಲ್ಲ. ಮೊನ್ನೆ ಒಬ್ಬ ನನ್ನ ಹತ್ತಿರ ಬಂದು ಎಲ್ಲಾ ಕಂತುಗಳನ್ನು ಕಟ್ಟುತ್ತಾ ಬಂದಿದ್ದೇನೆ ೪-೫ ಕಂತುಗಳನ್ನು ಕಟ್ಟಬೇಕಾಗಿದೆ, ಆದರೆ ನಿಗಮದವರು ಬಂದು ಕದ ಹಾಕಿದ್ದಾರೆ ಎಂದು ಹೇಳಿದ. ಹೀಗೆ ಕದವನ್ನು ಹಾಕಿ ನೀವು ಏನು ಸಾಧಿಸು ವುದಕ್ಕೆ ಸಾಧ್ಯ ? ಅಂತಹವುಗಳನ್ನು ಏನ ಮಾಡುತ್ತೀರಿ ? ಇಂಡಸ್ಟ್ರೀಗಳಿಗೆ ಹೀಗೆ ಕದ ಹಾಕಿದರೆ ಅವರಿಗೂ ಇಲ್ಲ, ನಿಮಗೂ ಇಲ್ಲ ಎಂದು ಆಗುತ್ತದೆ. ಇಂಡಸ್ಟ್ರೀ ಮಂತ್ರಿಯವರಿಗೆ ರೂಲ್ಸ್‌ಗಿಂತಲೂ ಕಾಮನ್‌ಸೆನ್ಸ್ ಹೆಚ್ಚಿಗೆ ಬೇಕು, ವ್ಯವಹಾರ ಜ್ಞಾನಬೇಕು. ಅಂತೆಯೇ ಅಧಿಕಾರಿಗಳಿಗೂ ಕೂಡ. ಆ ಅರ್ಹತೆಯನ್ನು ಹೊಂದಿದ ಅಧಿಕಾರಿಗಳಿಗೆ ಅಲ್ಲಿ ನೇಮಿಸಿ, ಅವರನ್ನು ಚುರುಕುಗೊಳಿಸಿ, ದಕ್ಷತನವನ್ನು ಪ್ರದರ್ಶಿಸುವಂತೆ ಮಾಡಬೇಕು. ಹೀಗೆ ಮಾಡದಿದ್ದರೆ ಇಂಡಸ್ಟ್ರೀ ಬೆಳೆಯಬಾರದು.

ಹಿಂದೆ ಇಂಡಸ್ಟ್ರೀ ಬೆಳೆಯಬೇಕೆಂದು ಹೇಳಿ ಇಂಡಸ್ಟ್ರೀ ಲೋನ್ ಕೊಟ್ಟರು. ಯಾರಿಗೆ ಇಂಡಸ್ಟ್ರಿ ಫ್ರೀ ಲೋನ್ ಕೊಟ್ಟಿದ್ದೀರಿ ? ಎಂ. ಎಂ. ಸಿ. ಯವರಿಗೆ ೨-೩ ಕೋಟಿ ರೂಪಾಯಿಗಳನ್ನು ಬಡ್ಡಿ ರಹಿತವಾಗಿ ಕೊಟ್ಟಿದ್ದೀರಿ, ಅವನು ಲೋನ್ ಸಿಗುವ ತನಕ ಇಲ್ಲಿದ್ದು, ಸಿಕ್ಕಮೇಲೆ ಕಲ್ಕತ್ತಾಕ್ಕೆ ಓಡಿ ಹೋಗಿದ್ದಾನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಉಪಸಭಾಪತಿಗಳೇ, ನಮ್ಮ ಜೆ. ಹೆಚ್, ಪಟೇಲರು ಒಂದು ಪ್ರಶ್ನೆ ಕೇಳಿ ಕರ್ನಾಟಕದಲ್ಲಿ ಸಹಕಾರ ರಂಗದ ಸ್ಪಿನ್ನಿಂಗ್ ಮಿಲ್‌ಗಳು ಈ ದುಸ್ಥಿತಿಗೆ ಬರುವುದಕ್ಕೆ ಏನು ಕಾರಣ ? ಪಕ್ಕದ ತಮಿಳುನಾಡಿನಲ್ಲಿ ಭಿನ್ನವಾದ ಸ್ಥಿತಿಯಿದೆಯಲ್ಲ ಇದಕ್ಕೆ ಕಾರಣಗಳೇನಿರ ಬಹುದು ಎಂದು ಕೇಳಿದರು. ಪಾಟೀಲರು ಅದರ ಬಗ್ಗೆ ಸಂಪೂರ್ಣವಾಗಿ ಹೇಳುತ್ತಾರೆಂದು ನಾವು ತಿಳಿದಿದ್ದೆವು. ಆದರೆ ಹೊಸ ಮೆಷನರಿಗಳು ಬೇಕು ಎಂದು ಒಂದೇ ಒಂದು ಕಾರಣ ಕೊಟ್ಟರು. ಬೇರೆ ಏನಾದರೂ ಕಾರಣಗಳಿದ್ದರೆ ಅವನ್ನೂ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಉಪಸಭಾಪತಿಗಳೇ, ಅದರಲ್ಲಿ ಮುಚ್ಚುಮರೆ ಇಲ್ಲ ಉದಾಹರಣೆಗೆ ನಿಮ್ಮ ರಾಯಚೂರು ಜಿಲ್ಲೆ ತೆಗೆದುಕೊಳ್ಳಿ. ಅಲ್ಲಿ ಹೊಸ ಮಿಲ್ ಹಾಕ್ತೀವಿ ಎಂದು ಹೇಳಿ ಹಳೇ ಮೆಷಿನರಿ ಗಳನ್ನು ಇನ್‌ಸ್ಟಾಲ್ ಮಾಡಿ ಹಣ ತಗೊಂಡರು. ಅದರ ಬದಲಿಗೆ ಇವತ್ತು ನಿಮ್ಮಂಥ ಟ್ಯಾಲೆಂಟೆಡ್ ಯೂಥ್ಸ್ ಈ ಫೀಲ್ಡಿಗೆ ಬಂದು ನಿಮ್ಮ ಮನೆ ಕೆಲಸ ಹೇಗೆ ಮಾಡುತ್ತೀರೋ ಅಷ್ಟು ಶ್ರದ್ಧೆಯಿಂದ ಇದನ್ನು ಮಾಡಿದರೆ ಫಾಯಿದೆಯಾಗುತ್ತದೆ. ಹುಲಕೋಟಿಯಂಥಾ ಊರಿನಲ್ಲಿ ಎರಡು ಮೂರು ಮಿಲ್‌ಗಳು ಹೇಗೆ ಚೆನ್ನಾಗಿ ನಡೆಯುತ್ತಿವೆ, ಹೇಳಿ ? ರಾಯಚೂರು ಜಿಲ್ಲೆಯಲ್ಲಿ ಎಂಥಾ ಉತ್ತಮವಾದ ಬಿಲ್ಡಿಂಗ್ ಇದೆ, ಹವೆ ಇದೆ, ಹತ್ತಿ ಬೆಳೆಗಾರರು ಇದ್ದಾರೆ, ಅಂಥಾ ಕಡೆ ಮಾಡಿ ಸಕ್ಸಸ್ ಮಾಡಲು ಡೆಡಿಕೇಟೆಡ್ ವರ್ಕರ್ಸ್ ಬೇಕು ಅಷ್ಟೆ. ನಾನು ಒಮ್ಮೆ ಹೇಳಿದೆ, ಬಿಜಾಪುರವನ್ನು ಶ್ರೀ ಬಾಗಲಕೋಟೆ ಯವರಿಗೆ ಬಿಡಿ. ಬೇಕಾದರೆ ಬೆಳಗಾವಿಯನ್ನು ನನಗೆ ಬಿಡಿ, ಯಾವ ಮಿಲ್ಲೂ ಲುಕ್ಸಾನಾಗದಂತೆ ಹೇಗೆ ನಡೆಸುತ್ತೀವಿ ಎಂದು ನೋಡಿ ಎಂದು. ಆದರೆ ಇವತ್ತಿನವರೆಗೂ ಸರ್ಕಾರ ಇದರ ಬಗ್ಗೆ ಬಾಯಿ ಬಿಡಲಿಲ್ಲ, ಏನು ಮಾಡಲಿ ? ಉಳಿದದ್ದು ಏನೂ ಇಲ್ಲ, ತತ್ವಜ್ಞಾನ ಇಲ್ಲ. ಹತ್ತಿ ನಮ್ಮ ಹತ್ತಿರ ಸಿಗುತ್ತದೆ, ಎಲೆಕ್ಟ್ರಿಸಿಟಿ ಎಲ್ಲಾ ಕಡೆ ಸಿಗುತ್ತದೆ, ಆದರ ಧಾರಣೆ ಜಾಸ್ತಿ ಎಂದು ಹೇಳುತ್ತಾರೆ, ಅದಕ್ಕೆ ಬದಲಾಗಿ ಉಳಿದ ರಾಜ್ಯಗಳಲ್ಲಿ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಕನ್‌ಸೆಷನ್ ರೇಟಿನಲ್ಲಿ ಕೊಡುವ ಹಾಗೆ ಇಲ್ಲೂ ಕೊಡಬೇಕು. ಮೂರನೆಯದು ಮೆಷಿನರಿಗಳು, ಅವುಗಳಲ್ಲೆಲ್ಲ ಬಹಳ ಲೋಪದೋಷಗಳಿರುವುದರಿಂದ ಲೇಬರ್ ಲೀಡರ್ಸ್ ಬಂದು ಅದನ್ನು ತೆಗೆಯಿರಿ, ಇದು ಮಾಡಿ ಎಂದು ಒತ್ತಾಯ ಹಾಕುತ್ತಾರೆ. ಒಳ್ಳೆಯ ಮೆಷಿನರಿ ಹಾಕಿದರೆ ಅವರು ಕೂಡ ಒಪ್ಪುತ್ತಾರೆ. ಇದೇ ಮೂರು ಮಾತು. ಟೆಕ್ಸ್‌ಟೈಲ್ ಮಿಲ್ಸನ್ನು ಇನ್ಯಾವ ಪಂಡಿತರು ಬಂದು ನಡೆಸಬೇಕಾಗಿಲ್ಲ. ಅನ್ವರಿಯವರೇ ನೀವು ರಾಯಚೂರು ನಡೆಸಬಲ್ಲಿರಿ, ಬಾಗಲಕೋಟೆಯವರು ಬಿಜಾಪುರ ನಡೆಸುತ್ತಾರೆ ಶ್ರೀ ಬಾಗಲಕೋಟೆಯವರು ಉತ್ತಮ ವಾದ ಬೆಳೆ ತೆಗೆದವರು ಎಂದು ಸರ್ಟಿಫಿಕೇಟ್ ಕೊಟ್ಟಿದ್ದೇವೆ. ಒಳ್ಳೆಯ ಕ್ವಾಲಿಟಿ ಯಾರ್ನ್ ತೆಗೆದಿದ್ದಾರೆ ಅವರು. ಇದನ್ನೆಲ್ಲಾ ಬಿಟ್ಟು ಮಂತ್ರಿ ಪದವಿಗೆ ಅಂಟಿಕೊಂಡರೆ ಆಗುವುದಿಲ್ಲ. ಮಂತ್ರಿ ಪದವಿ ಆಸೆ ಬಿಡಬೇಕು, ಆಗ ಎಲ್ಲಾ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿ ಪದವಿ ಬಿಟ್ಟರೂ, ಈ ಫೀಲ್ಡ್‌ಗೆ ಕೈಗಾರಿಕಾ ವಿಷಯ ತಿಳಿದವರು ಬರಬೇಕಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಎರಡು ಮಾತು ಹೇಳಿ ಮುಗಿಸುತ್ತೇನೆ. ಒಂದನೆಯದು ನಾನು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ಟ್ರೆಜರಿಯಲ್ಲಿ ಹೋದ ವರ್ಷ ಮಾರ್ಚಿಯಲ್ಲಿ ಕೊಟ್ಟಂಥ ಬಿಲ್‌ಗಳು ಇವತ್ತಿಗೂ ಎನ್‌ಕ್ಯಾಷ್ ಆಗಿಲ್ಲ. ಆದರೆ ಮಂತ್ರಿಗಳು ಪದೇ ಪದೇ ಹೇಳುತ್ತಾರೆ, ಯಾವ ಚೆಕ್ಕೂ ವಾಪಸಾಗುವುದಿಲ್ಲ, ಪೆಂಡಿಂಗಿಲ್ಲ ಎಂದು. ನನ್ನ ಅರಿವಿನ ಪ್ರಕಾರ ೨೦೦ ಚೆಕ್‌ಗಳು ಪೆಂಡಿಂಗ್ ಲಿಸ್ಟಿನಲ್ಲಿವೆ. ಇದನ್ನು ನಮ್ಮ ಸರ್ಕಾರವನ್ನು ದೂರುವುದಕ್ಕೆ ಪ್ರಯತ್ನ ಪಡುವುದಿಲ್ಲ. ಎಷ್ಟೆಷ್ಟು ಬಿಲ್‌ಗಳು ಎಲ್ಲೆಲ್ಲಿ ಪೆಂಡಿಂಗಿವೆ ಎಂದು ಗಮನಹರಿಸಿ. ಕೆ.ಹೆಚ್.ಡಿ.ಸಿ. ಯನ್ನು ಬಡವರ ಸಲುವಾಗಿ ಅವರ ರಕ್ಷಣೆ ಮಾಡುವ ಸಲುವಾಗಿ ಮಾಡಿದ್ದೀರಿ. ಜನತಾ ಬಟ್ಟೆಗಳನ್ನು ಕೊಡುತ್ತಿದ್ದೀರಿ. ಅವರು ನಮ್ಮ ಮಿಲ್‌ಗಳಿಂದ ಯಾರ್ನ್ ತೆಗೆದುಕೊಳ್ಳುತ್ತಾರೆ, ರೊಕ್ಕ ಕೊಡುವುದಿಲ್ಲ. ರೊಕ್ಕ ಎಲ್ಲಿ ಎಂದು ನಾವು ಕೇಳಿದರೆ ಗವರ್ನ್‌ಮೆಂಟಿಂದ ಇನ್ನೂ ಬಂದಿಲ್ಲ ಎನ್ನುತ್ತಾರೆ. ಇದರ ಕಡೆ ಇಂಡಸ್ಟ್ರೀಸ್ ಅಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಿನಿಸ್ಟರ್ಸ್ ಲಕ್ಷ್ಯ ಕೊಡಬೇಕು. I am not interested to liquidate your government, I am intrested to improve it.

Sri M. S. Krishnan.—Hon, Member Sri K. H. Patil is saying, "I don't want to liquidate my government"

ಶ್ರೀ ಕೆ. ಹೆಚ್. ಪಾಟೀಲ್.—ಯುವರ್ ಗವರ್ನಮೆಂಟ್ ಎಂದೇ ನಾನು ಹೇಳಿದ್ದುದು ಕಮ್ಯೂನಿಸ್ಟರು ಯಾವಾಗಲೂ ಬೈದು ರೂಢಿ ಮಾಡಿಕೊಂಡಿದ್ದಾರೆ.

ಶ್ರೀ ಯು. ಭೂಪತಿ.—ನಾವು ಯಾವಾಗಲೂ ಗವರ್ನಮೆಂಟನ್ನು ಬೈಯುತ್ತಿರುತ್ತೇವೆ. ನೀವು ಚೆನ್ನಾಗಿ ಹೊಗಳುತ್ತಿರುತ್ತೀರಿ. ಹೊಗಳಿ.

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತಿಗೂ ಸಹ ಅನೇಕ ಬಿಲ್‌ಗಳು ಪೆಂಡಿಂಗ್ ಇದೆ. ಕೇಂದ್ರ ಸರಕಾರ ನಮಗೆ ಸಹಾಯ ಮಾಡುವುದಿಲ್ಲವೆಂದು ಹೇಳುತ್ತೀರಿ. ಅವರು ಕೊಟ್ಟಂತಹ ಸಬ್ಸಿಡಿಯನ್ನು ಜನರಿಗೆ ಮುಟ್ಟಿಸಿಲ್ಲ. ಇಲ್ಲಿಯವರೆಗೂ ೧೫ ಪರ್ಸೆಂಟ್ ಅನ್ನು ಕೈಗಾರಿಕೆಗಳಿಗೆ ಕೊಟ್ಟಿಲ್ಲ. ೩೧ ಮಾರ್ಚ್‌ಗೆ ಖರ್ಚು ಹಾಕಿ ಜಮಾ ತೆಗೆದುಕೊಂಡು ಬಿಡುತ್ತೀರಿ. ಮತ್ತೆ ಅಪರ ತಪರ ಆಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಕಾನೂನು ಮಂತ್ರಿಗಳಾಗಿದ್ದು ನೀತಿ ನಡತೆಯನ್ನು ಅನುಸರಿಸಿ ಮಾಡುವಂತಹವರು ಅವರು ಇದು ನಿಜವಾಗಿಯೂ ತಪ್ಪೋ, ಸರಿಯೋ ಎಂದು ನೋಡಬೇಕು, ಇದರ ಬಗ್ಗೆ ಅವರು ಲಕ್ಷ್ಯ ಕೊಡಬೇಕು. ನನಗೆ ಒಂದು ವ್ಯಸನವಾಗುತ್ತದೆ ಯಾರನ್ನು ಬೈಯುತ್ತಾರೋ ಯಾರ ಕಡೆಯಿಂದ ಹಣ ತೆಗೆದುಕೊಳ್ಳುತ್ತಾರೋ ಅದನ್ನು ಸದ್‌ವಿನಿಯೋಗ ಮಾಡದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ಅವನ್ನು ಸದ್ವಿನಿಯೋಗಮಾಡದಿದ್ದರೆ ದುರಾಡಳಿತದ ಅನುಭವ ಸ್ಪಷ್ಟವಾಗಿ ಕಾಣುತ್ತದೆ. ಇದನ್ನು ತಪ್ಪಿಸಬೇಕಾದರೆ ದಕ್ಷತೆ ಹೆಚ್ಚಬೇಕು. ದಕ್ಷತೆ ಹೆಚ್ಚಾಗಬೇಕಾದರೆ ಅಧಿಕಾರಿಗಳಲ್ಲಿ ದಕ್ಷತೆ ಹೆಚ್ಚಾಗಬೇಕು ಮತ್ತು ಅವರು ಹೆಚ್ಚು ಕೆಲಸವನ್ನು ಮಾಡುವಂತಹ ಮನೋವೃತ್ತಿಯು ಅವರಲ್ಲಿ ಬೆಳೆಯಬೇಕು. ಇಷ್ಟು ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಉಪಾಧ್ಯಕ್ಷರೇ, ಈ ಪೂರಕ ಬೇಡಿಕೆ ಬಗ್ಗೆ ನಾನು ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಕರ್ನಾಟಕಕ್ಕೆ ದೇವರ ಅನುಗ್ರಹ ಇದೆ ನೆಲವು ಎಷ್ಟು ಇದೆಯೋ ಅಷ್ಟೇ ಜಲವೂ ಸಿಕ್ಕಿದೆ. ೨೫೦ ಮೈಲಿ ಕರಾವಳಿ ಪ್ರದೇಶ ಈ ಕರ್ನಾಟಕಕ್ಕೆ ಸಿಕ್ಕಿದ್ದು ಕರ್ನಾಟಕದ ಸೌಭಾಗ್ಯವೆಂದು ಹೇಳಬೇಕು. ೪೦ ಕೋಟಿಗೂ ಮಿಕ್ಕಿದಂತಹ ಆದಾಯ ಆ ಭಾಗದಿಂದ ಬರುತ್ತದೆ. ಇಂತಹ ಸಂದರ್ಭ ಇರುವಾಗ ಈ ಪೂರಕ ಬೇಡಿಕೆಯಲ್ಲಾದರೂ ಕೂಡ ಮೀನುಗಾರರ ಬಗ್ಗೆ ಆ ಜನರ ಕಷ್ಟದ ಬಗ್ಗೆ ಕೆಲವು ಪರಿಹಾರ ಇರಬಹುದೆಂದು ನಾವು ಹಿಂದೆ ಭಾವಿಸಿದ್ದೆವು ಆದರೆ ಅದು ಈಗ ನಮಗೆ ಕಾಣುತ್ತಿಲ್ಲ. ಮಾನ್ಯ ಮೊಯಿಲಿಯವರೂ ಕೂಡ ಹೇಳಿದ್ದಾರೆ, ಹೂಳನ್ನು ಎತ್ತಬೇಕೆಂದು ಸುಮಾರು ೫ ವರ್ಷದಿಂದ ನಾವು ಹೇಳುತ್ತಿದ್ದೇವೆ ಈ ವರ್ಷ ಬರುವ ವರ್ಷ ಮಾಡುತ್ತೇವೆಂದು ಹೇಳುತ್ತಾ ಕಾಲಹರಣವಾಗಿದೆ. ಈ ವರ್ಷದಲ್ಲಿ ೧೪ ಜನರು ಸತ್ತಿದ್ದಾರೆ ಸುಮಾರು ೧೫-೨೦ ಬೋಟುಗಳು ಲಾಂಚ್‌ಗಳು ಮುಳುಗಿವೆ ಇದರಿಂದಾಗಿ ಅಪಾರವಾದಂತಹ ನಷ್ಟ ಸಂಭವಿಸಿದೆ. ಅಲ್ಲಿ ಮೀನುಗಾರರು ತಮ್ಮ ದಿನನಿತ್ಯದ ವ್ಯವಹಾರಗಳನ್ನು ಮಾಡಲಿಕ್ಕೆ ತೊಂದರೆಯಾಗುತ್ತಿದೆ. ತಡೆ ಗೋಡೆ ಕಟ್ಟುವ ಬಗ್ಗೆ ೩-೪ ವರ್ಷಗಳಿಂದ ನಾವು ಹೇಳುತ್ತಿದ್ದೇವೆ. ಅದು ಹೌದೇ ಅಲ್ಲವೇ ಎಂಬುದರ ಬಗ್ಗೆ ವಿಚಾರ ಮಾಡಲು ಇಲ್ಲಿಂದ ಜನರನ್ನು ಕಳಿಸಿದರು ಅವರು ಹೌದು ಎಂದು ಹೇಳಿದರು. ಉಳ್ಳಾಲದಿಂದ ಬೈಂದೂರಿನವರೆಗೆ ಕರಾವಳಿಯಲ್ಲಿ ತಡೆ ಗೋಡೆ ಕಟ್ಟದೇ ಇದ್ದುದರಿಂದಾಗಿ ಮನೆಗಳು ಮತ್ತು ಎಷ್ಟೋ ತೆಂಗಿನ ಮರಗಳು ಮತ್ತು ಇನ್ನಿತರ ಷೆಡ್‌ಗಳು ನಾಶವಾಗಿ ಹೋಗಿದೆ. ಅಲ್ಲಿ ಅವರು ಕಾಳಿತು ಕೊಳ್ಳುವುದೇ ಕಷ್ಟವಾಗಿದೆ. ತಡೆ ಗೋಡೆ ಬೇಕೇ ಬೇಕು ಎಂದು ಹೇಳಿದ್ದೆವು. ಆದರೆ ಸರಕಾರ ಟೆಂಡರ್ ಕೂಡ ಕರೆಯಲಿಲ್ಲ. ಕೇಂದ್ರದಿಂದ ಹಣ ಬರಬೇಕೆಂದು ನಮ್ಮ ಸರಕಾರದವರು ಕೇಳುತ್ತಿದ್ದಾರೆ. ಆದರೂ ಕೂಡ ಈ ಕಡೆಗೆ ಹೆಚ್ಚಿನ ಗಮನ ಹರಿದಿಲ್ಲ ಅದು ಕರಾವಳಿ ಪ್ರದೇಶ ತೀರವೆಂದು ಹೇಳತಕ್ಕಂತಹ ಭಾವನೆ ಸರಕಾರಕ್ಕೆ ಇರಬಹುದು. ಕರ್ನಾಟಕದ ಮುಕುಟಕ್ಕೆ ತುರಾಯಿ ಇದ್ದ ಹಾಗೆ ಕರಾವಳಿ ಇದೆ. ಅಲ್ಲಿ ಬಂದರು ಕೂಡ ಇದೆ. ಹೂಳನ್ನು ಎತ್ತುವ ಬಗ್ಗೆ ಚೀಫ್ ಇಂಜಿನಿಯರ್‌ರವರು ಭರವಸೆ ಕೊಟ್ಟರು ಇಷ್ಟಲ್ಲದೆ ಅಲ್ಲಿ ಹತ್ತು ದಿವಸದ ಧರಣಿ ಮುಷ್ಕರ ಕೂಡ ಮಾಡಿದರು. ಆದರೂ ಕೂಡ ಇವತ್ತಿನವರೆಗೂ ಕೆಲಸವಾಗಲಿಲ್ಲ. ಈ ಪೂರಕ ಬೇಡಿಕೆಯಲ್ಲಾದರೂ ಕೂಡ ಮಾನ್ಯ ಬೊಮ್ಮಾಯಿಯವರು ಮೀನುಗಾರರ ತೊಂದರೆ ಬಗ್ಗೆ ಹಾಗೂ ತಡೆಗೋಡೆ ಕಟ್ಟುವ ಬಗ್ಗೆ ವಿಚಾರ ಮಾಡಿದರೆ ಲಕ್ಷೋಪಲಕ್ಷ ಮೀನುಗಾರರಿಗೆ ಉಪಕಾರವಾಗುತ್ತದೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇನ್ನು ಕಲೆ ಮತ್ತು ಸಂಸ್ಕೃತಿ ಬಗ್ಗೆ ಹೇಳುವುದಾದರೆ ಇದು ನಮ್ಮ ಕರ್ನಾಟಕದಲ್ಲಿ ಶಾಶ್ವತವಾಗಿ ಉಳಿಯಬೇಕಾದರೆ ಕನ್ನಡ ಸಾಹಿತ್ಯಕ್ಕೆ, ಕನ್ನಡ ಕಲಾಭಿಮಾನಿಗಳಿಗೆ, ಕನ್ನಡ ಸಾಹಿತಿಗಳಿಗೆ ವಿಶೇಷವಾದಂತಹ ಪ್ರೋತ್ಸಾಹ ಕೊಡಬೇಕು. ಅಂತಹ ನೀತಿ ಇಲ್ಲಿ ಎಲ್ಲೂ ಕಾಣುವುದಿಲ್ಲ. ದೊಡ್ಡ ದೊಡ್ಡ ಸಾಹಿತಿಗಳ ಪುಸ್ತಕಗಳನ್ನು ಪ್ರಕಟ ಮಾಡುವಂಥಾದ್ದು ಮಾಡಬೇಕು. ಕನ್ನಡ ಸಾಹಿತ್ಯದ ಬಗ್ಗೆ ಕರ್ನಾಟಕದ ಜನರಿಗೆ ಪೂರ್ಣವಾದಂತಹ ತಿಳಿವು ಮೂಡತಕ್ಕಂತಹ ವ್ಯವಸ್ಥೆ ಇಲ್ಲ. ಉದಾಹರಣೆಗೆ ಹೇಳುವುದಾದರೆ ರಾಷ್ಟ್ರಕವಿ ಕುವೆಂಪು ಅವರ ರಾಮಾಯಣ ದರ್ಶನಂಗೆ ಪಂಪ ಪ್ರಶಸ್ತಿ ದೊರಕಿತಗೆ ಅವರಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ ಇದು ಬಹಳ ಒಳ್ಳೆಯ ಕೆಲಸ. ೩-೪ ರೂಪಾಯಿಗೆ ರಾಮಾಯಣ ದರ್ಶನವನ್ನು ಪ್ರಕಟ ಮಾಡಿದರೆ ಇಡೀ ಕನ್ನಡನಾಡಿನ ಜನರು ಅದನ್ನು ಕೊಂಡು ಓದುತ್ತಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ದಾ. ರಾ. ಬೇಂದ್ರೆ, ಶಿವರಾಮ ಕಾರಂತರವರು ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿದ್ದಾರೆ. ಇಂತಹವರ ಕೃತಿಗಳನ್ನು ಕಡಿಮೆ ಬೆಲೆಗೆ ಅಗ್ಗದ ದರದಲ್ಲಿ ಮಾರಾಟ ಮಾಡಿದರೆ ಒಳ್ಳೆಯದು. ಇಂತಹ ಉತ್ತಮ ಕವಿಗಳ ಕಾವ್ಯಗಳು, ಸಾಹಿತ್ಯಗಳನ್ನು ನಮ್ಮ ಜನರು ಓದುವಂತೆ ಮಾಡಬೇಕು. ಹಿಂದೆ ಒಮ್ಮೆ ಹನುಮಂತಯ್ಯನವರು ರಾಮಾಯಣಕೆ. ಸಂಬಂಧಪಟ್ಟ ಪುಸ್ತಕವನ್ನು ಪ್ರಿಂಟ್ ಮಾಡಿಸಿ ಎರಡು ರೂಪಾಯಿಯಂತೆ ಮಾರಾಟ ಮಾಡಿದರ್ರು ಪ್ರತಿಯೊಂದು ಮನೆಯಲ್ಲಿ ಕೂಡ ಅದನ್ನು ಓದಿದರು. ಅದೇ ರೀತಿಯಾಗಿ ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಂತಹವರ ಕೃತಿಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡಬೇಕು. ಕರ್ನಾಟಕ ಉಳಿಯಲಿಕ್ಕೆ, ಕನ್ನಡ ಉಳಿಯಲಿಕ್ಕೆ, ಕನ್ನಡ ಸಾಹಿತ್ಯ ಉಳಿಯಲಿಕ್ಕೆ ಕನ್ನಡನಾಡಿನ ಕನ್ನಡಿಗರಿಗೆ ಸಂತೋಷವಾಗಲಿಕ್ಕೆ ಈ ಕಾರ್ಯವನ್ನು ತಾವು ಮಾಡಬೇಕು. ಇದನ್ನು ಪೂರಕ ಬೇಡಿಕೆಯಲ್ಲಿ ಕಾಣಿಸಿಲ್ಲ. ಇದರ ಬಗ್ಗೆ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನೆನಪು ಮಾಡುತ್ತಿದ್ದೇನೆ, ಅವರಿಗೆ ಗೊತ್ತಿದ್ದರೂ ಕೂಡಾ ಇದನ್ನು ನಾವು ನೆನಪು ಮಾಡಬೇಕಾದ್ದು ನಮ್ಮ ಧರ್ಮ. ಇನ್ನು ಪೋಲೀಸರ ಬಗ್ಗೆ ಅವರಿಗೆ ಸಮವಸ್ತ್ರ ಕೊಟ್ಟಿಲ್ಲ. ೨೪ ಗಂಟೆಗಳ ಕಾಲ ಹಗಲೂ ಇರುಳೂ ಕೆಲಸ ಮಾಡತಕ್ಕಂಥವರು. ಅವರುಗಳಲ್ಲಿ ಒಳ್ಳೆಯವರು ಇದ್ದಾರೆ, ಕೆಟ್ಟವರೂ ಇದ್ದಾರೆ. ಅವರಿಗೆ ಸಮವಸ್ತ್ರವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಪೋಲೀಸರಿಗೆ ವಸತಿ ಸಮಸ್ಯೆಯು ಬಹಳಷ್ಟು ಅವರನ್ನು ಕಾಡುತ್ತಿದೆ. ಕೊನೆಗೆ ಬಾಡಿಗೆಯ ಮನೆಯು ಕೂಡಾ ಸಿಗದೇ ಅವರುಗಳು ಒದ್ದಾಡುವುದನ್ನು ನಾವು ಕಂಡಿದ್ದೇವೆ. ಉದಾಹರಣೆಗೆ ನಮ್ಮ ಉಳ್ಳಾಲದಲ್ಲಿ ಪೋಲೀಸರ ವಸತಿಗಾಗಿಯೇ ಎರಡೂವರೆ ಎಕರೆ ಜಮೀನನ್ನು ತೆಗೆದುಕೊಂಡು ಐದು ವರ್ಷವಾಯಿತು, ಇವತ್ತಿನವರೆಗೂ ವಸತಿಯನ್ನು ಮಾಡಿಕೊಡಲಿಕ್ಕೆ ಆಗಲಿಲ್ಲ. ಪೋಲೀಸರುಗಳು ದೂರ ದೂರ ಎಂಟು ಮೈಲಿ ದೂರ ಹೋಗಿ ಬಾಡಿಗೆ ಮನೆಯನ್ನು ಹಿಡಿದು ಅವರು ಕಷ್ಟಪಡುತ್ತಿದ್ದಾರೆ. ಈ ಪೋಲೀಸರಿಗೆ ವಸತಿಯನ್ನು ಮಾಡಿಕೊಡುವ ವಿಚಾರದಲ್ಲಿ ಕೂಡಾ ಸರ್ಕಾರದವರು ಗಮನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅವರಿಗೆ ಬೇಕಾದಂಥ ಎಲ್ಲಾ ವ್ಯವಸ್ಥೆಗಳನ್ನೂ ಕೂಡಾ ಸರ್ಕಾರದವರು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅವರಿಗೆ ಸಮವಸ್ತ್ರವೂ ಬೇಕು ಮತ್ತೆ ಅವರು ಉಳಿಯುವುದಕ್ಕೂ ಒಂದು ಸೂರು ಆದರೂ ಬೇಕಲ್ಲ. ಇನ್ನು ಶಾಲಾ ಕಟ್ಟಡದ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರ ಹಣವನ್ನು ಕೂಡಿಸಿ ಮಾಡಬೇಕು ಎಂದು ಹೇಳುತ್ತೀರಿ, ಇವತ್ತು ಶಾಲಾ ಕಟ್ಟಡಗಳು ಇಲ್ಲದೇ ಬಹಳ ಕಡೆ ಹುಡುಗರು ಕಷ್ಟಪಡುತ್ತಿದ್ದಾರೆ. ಶಾಂತಿನಿಕೇತನದಲ್ಲಿ ಶಾಲೆಯನ್ನು ನಡೆಸುವ ಹಾಗೆ ನಡೆಸಲಿಕ್ಕೆ ಆಗುವುದಿಲ್ಲ. ಮರದ ಬುಡದಲ್ಲಿ ಪಾಠ ಹೇಳುವುದಕ್ಕೆ ಈಗ ಆಗುವುದಿಲ್ಲ. ಮಳೆ ಉಂಟು, ಚಳಿ ಉಂಟು, ಗಾಳಿ ಉಂಟು ಈ ಮೂರು ಋತುಗಳು ಇರುವುದರಿಂದ ಶಾಂತಿನಿಕೇತನದ ರೀತಿಯಲ್ಲಿ ಶಾಲೆಯನ್ನು ನಡೆಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಶಾಲಾ ಕಟ್ಟಡದ ಬಗ್ಗೆ ಗಮನ ಹರಿಸಬೇಕು ಎಂದು ಹೇಳುತ್ತೇನೆ. ಇನ್ನು ದಕ್ಷಿಣ ಕನ್ನಡದಲ್ಲಿ ಶಾಲಾ ಕಟ್ಟಡಗಳು ಬಹಳ ಕಡಿಮೆ ಇದೆ, ಅಲ್ಲಿ ಅಧ್ಯಾಪಕರು ಕೂಡಾ ಬಹಳ ಕಡಿಮೆ ಇದ್ದಾರೆ, ಇದರ ಕಡೆಗೂ ಕೂಡಾ ಸರ್ಕಾರದವರು ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಇವುಗಳು ಯಾವುವು ಪೂರಕ ಬೇಡಿಕೆಯಲ್ಲಿ ಕಾಣದೇ ಇರುವುದರಿಂದ ನಮಗೆಲ್ಲಾ ನಿರಾಶೆಯಾಗಿದೆ, ಆ ನಿರಾಶೆಯನ್ನು ತಪ್ಪಿಸಬೇಕು ಎಂದು ಹೇಳಿ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಠ್ಕಲ್) —ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕಾಲಾವಕಾಶವನ್ನು ಹೆಚ್ಚಿಗೆ ತೆಗೆದುಕೊಳ್ಳದೇ ಕೇವಲ ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಮೊದಲನೆಯದಾಗಿ ಪೇಜ್ ೧೧ರಲ್ಲಿ ಡಿಮ್ಯಾಂಡ್

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಂಬರ್ ೧೨ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಐಟಂ ಸಂ. ೧೨ ಏನು ಇದೆ, ''Regarding compensation towards landacquired for Gulbarga University'' Here, ಸುಮಾರು ೧೯ ಲಕ್ಷ ರೂಪಾಯಿಯನ್ನು ಇದರಲ್ಲಿ ಜಾಸ್ತಿ ಕೊಟ್ಟಿದ್ದಾರೆ. ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಅನೇಕ ಡಿಪಾರ್ಟ್‌ಮೆಂಟ್‌ಗಳು ಏನು ಇವೆ ಅದನ್ನು ಡೆವಲಪ್ ಮಾಡುವುದಕ್ಕೆ ಇವತ್ತು ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಿ ಹಣವನ್ನು ಕೊಡುತ್ತಿಲ್ಲ. ಅಲ್ಲಿ ಫಿಸಿಕ್ಸ್ ಡಿಪಾರ್ಟ್‌ಮೆಂಟ್ ಇರಬಹುದು, ಕೆಮಿಸ್ಟ್ರಿ ಡಿಪಾರ್ಟ್‌ಮೆಂಟ್ ಇರಬಹುದು, ಹಾಸ್ಟೆಲ್ ಇರಬಹುದು, ಇದಕ್ಕಾಗಿ ಅನೇಕ ಸಲ ಈ ಡೆವಲಪ್‌ಮೆಂಟ್ ಬಗ್ಗೆ ಗುಲ್ಬರ್ಗ ಯೂನಿವರ್ಸಿಟಿಯಿಂದ ವೈಸ್‌ಚಾನ್ಸಲರ್‌ರವರು ಬಂದು ರೆಪ್ರೆಸೆಂಟ್ ಮಾಡಿದರೆ ಅವರಿಗೆ ಹೆಚ್ಚಿನ ಹಣ ಇವತ್ತಿನವರೆಗೂ ಸಿಕ್ಕಿಲ್ಲ. ೧೯೮೩ ರವರೆಗೆ ಹಣವನ್ನು ಸರ್ಕಾರದವರು ಒದಗಿಸಿಕೊಟ್ಟರು. ಅಷ್ಟು ಮಾತ್ರ ಬಿಟ್ಟರೆ ಈಗ ಹೆಚ್ಚು ಕಡಿಮೆ ಮೆಯಿನ್‌ಟೇನೆನ್ಸ್‌ಗೆ ಮಾತ್ರ ಕೊಡುತ್ತಿದ್ದಾರೆಯೇ ಹೊರತು ಡೆವೆಲಪ್‌ಮೆಂಟ್ ಬಗ್ಗೆ ಕಂಪ್ಲೀಟ್ ಆಗಿ ನೆಗ್ಲೆಕ್ಟ್ ಮಾಡುತ್ತಿದ್ದಾರೆ. ಬೇರೆ ಯೂನಿವರ್ಸಿಟಿಗೆ ಹೋಲಿಸಿದರೆ ಗುಲ್ಬರ್ಗ ಯೂನಿವರ್ಸಿಟಿ ಹೊಸದಾಗಿ ಸ್ಥಾಪನೆಯಾದಂಥ ಒಂದು ಯೂನಿವರ್ಸಿಟಿ. ಈ ಯೂನಿವರ್ಸಿಟಿಗೆ ಹೆಚ್ಚಿನ ಹಣಕಾಸನ್ನು ಕೊಡತಕ್ಕಂಥದ್ದು ಮತ್ತು ಅದನ್ನು ಸಂಪೂರ್ಣವಾಗಿ ಬೆಳೆಸತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲಿದೆ. ಅದೂ ಅಲ್ಲದೇ ಈ ಯೂನಿವರ್ಸಿಟಿ ಹಿಂದುಳಿದ ಭಾಗದಲ್ಲಿದೆ. ಈ ಯೂನಿವರ್ಸಿಟಿಯ ಬಗ್ಗೆ ಸರ್ಕಾರದವರು ಏತಕ್ಕೆ ನಿರ್ಲಕ್ಷ್ಯ ಮಾಡುತ್ತಿದ್ದಾರೋ ಗೊತ್ತಿಲ್ಲ. ಅನೇಕ ಸಲ ಯೂನಿವರ್ಸಿಟಿಯ ವೈಸ್‌ಚಾನ್ಸಲರ್‌ರವರನ್ನು ಕಂಡಾಗ ಅವರು ಏನು ಹೇಳುತ್ತಾರೆ ಎಂದರೆ ಏನು ಮಾಡುವುದು, ಎಕಾನಮಿ ಆರ್ಡರ್ ಎಂದು ಹೇಳಿ ನಮಗೆ ಅನೇಕ ಸಲ ಸಿಗತಕ್ಕಂಥ ಹಣ ಕೂಡಾ ಸಿಗುತ್ತಿಲ್ಲ, ಇದಕ್ಕೆ ಪ್ರಯತ್ನ ಪಟ್ಟು ತಾವು ಕೂಡಾ ಸ್ವಲ್ಪ ಸಹಾಯ ಮಾಡಬೇಕು ಎಂದು ನೀವು ಹೇಳಬೇಕು ಎಂದು ಹೇಳುತ್ತಿದ್ದಾರೆ. ನಾನು ಕಳಕಳಿಯಿಂದ ಸರ್ಕಾರದವರಲ್ಲಿ ಕೇಳಿಕೊಳ್ಳುವುದೇನೆಂದರೆ ಗುಲ್ಬರ್ಗಾ, ರಾಯಚೂರು, ಬೀದರ್, ಬಳ್ಳಾರಿ ಈ ನಾಲ್ಕು ಜಿಲ್ಲೆಗೆ ಸಂಬಂಧಪಟ್ಟ ಯೂನಿವರ್ಸಿಟಿ ಇದು. ಉತ್ತಮವಾದ ಎಜುಕೇಷನ್ ಅಲ್ಲಿನ ವಿದ್ಯಾರ್ಥಿಗಳಿಗೆ ಸಿಕ್ಕಬೇಕಾದರೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳೂ ಬಹಳ ವ್ಯವಸ್ಥಿತವಾಗಿ ಮುಂದೆ ಬಂದಾಗ ಮಾತ್ರ. ಅವು ಬೆಳೆದಾಗ ಮಾತ್ರ ಸಾಧ್ಯ. ಇಲ್ಲದಿದ್ದರೆ ಎಜುಕೇಷನಲ್ ಸ್ಟ್ಯಾಂಡರ್ಡ್ ಅಲ್ಲಿ ಬರುವುದಕ್ಕೆ ಸಾಧ್ಯ ಇಲ್ಲ. ದಯವಿಟ್ಟು ಆ ಕಡೆ ಗಮನ ಕೊಡುತ್ತಾರೆಂದು ನಾನು ತಿಳಿದಿದ್ದೇನೆ. ಎರಡನೆಯದಾಗಿ ಲ್ಯಾಂಡ್ ಅಕ್ವಿಸಿಷನ್ ಕಾಸ್ಟ್ ಪ್ರೈಸಸ್ ಅನೇಕ ಪ್ರಾಜೆಕ್ಟ್‌ಗಳಲ್ಲಿ ಹೆಚ್ಚು ಆಗುತ್ತಿದೆ. ಗವರ್ನಮೆಂಟ್ ಅಡ್ವೋಕೇಟ್ಸ್ ಇಲ್ಲಿ ಲಕ್ಷ್ಯ ಕೊಡುವುದಿಲ್ಲ. ಪ್ರೈವೇಟ್ ಪಾರ್ಟಿಯವರು ಸ್ವಲ್ಪ ಆಸಕ್ತಿ ವಹಿಸಿ ಅವರು ಆ ಕಡೆಯಿಂದ ಅಡ್ವೋಕೇಟ್ ಇಟ್ಟು ಪ್ರಯತ್ನ ಪಟ್ಟು ಈಗ ವ್ಯಾಲುವೇಷನ್ ಜಾಸ್ತಿ ಮಾಡಿಸಿ ಕೇಳುತ್ತಾರೆ. ಆದರೆ ನಮ್ಮ ಗವರ್ನಮೆಂಟ್ ಅಡ್ವೋಕೇಟ್ ಈ ರೀತಿ ಪ್ರಯತ್ನ ಪಡುವುದಿಲ್ಲ. ಅವರು ಕೇಳತಕ್ಕ ದಾಖಲೆಗಳನ್ನು ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಅಥವಾ ಅಗ್ರಿಕಲ್ಚರಲ್ ಆಫೀಸರ್ಸ್ ಆಗಲಿ ಕೊಡುವುದಿಲ್ಲ. ಇದಕ್ಕಾಗಿ ಇವೊತ್ತಿನ ದಿನ ಪ್ರಾಜೆಕ್ಟ್‌ನಲ್ಲಿ ಒಂದು ಕೋಟಿ ರೂಪಾಯಿ ಇಟ್ಟರೂ ಲ್ಯಾಂಡ್ ಕಾಂಪನ್ಸೇಷನ್‌ನಲ್ಲಿ ಅದು ೫ ಕೋಟಿ ರೂಪಾಯಿಗೆ ಹೋಗಿದೆ. ಈಗ ಒಂದು ಉದಾಹರಣೆ ಹೇಳಬೇಕಾದರೆ ಯು.ಕೆ.ಪಿ. ತೆಗೆದುಕೊಳ್ಳಿ. ತಮ್ಮ ಗಮನಕ್ಕೂ ಇದು ಬಂದಿರಬಹುದು. ಒಬ್ಬ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಎರಡು ಸಾವಿರ ಮೂರು ಸಾವಿರ ಪರ್ ಎಕರೆ ವ್ಯಾಲ್ಯೂ ಇದ್ದರೆ ಅದನ್ನು ಅಲ್ಲಿ ೨೦ ಸಾವಿರ, ೨೫ ಸಾವಿರ ರೂಪಾಯಿ ಮಾಡಿಕೊಟ್ಟಿದ್ದಾರೆ. ಆಶ್ಚರ್ಯ ಏನು ಅಂದರೆ ಕೆಲವು ಕಡೆ ಮುನ್ಸೀಫ್‌ಗಳೂ ಕೊಲ್ಯೂಡ್ ಆಗಿ ಅಡ್ವೋಕೇಟ್ಸ್‌ಗಳು ಕೇಳಿ ದಷ್ಟು ಕೊಟ್ಟಿದ್ದಾರೆ. ಬಾಗಲ್‌ಕೋಟೆಯಲ್ಲಿ ಈ ವಿಚಾರದಲ್ಲಿ ಮುನ್ಸೀಫ್‌ಗಳು ಸಸ್ಪೆಂಡ್ ಆಗಿದ್ದಾರೆಂದು ನಾನು ಕೇಳಿದ್ದೇನೆ. ಈ ರೀತಿ ನೀವು ಕೊಟ್ಟುಕೊಳ್ಳುತ್ತಾ ಹೋದರೆ ಯಾವ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರಿ ಯೋಜನೆ ಏನು ಇರುತ್ತದೆ, ಯೋಜನೆ ಕೆಳಗಡೆ ಏನು ಭೂಮಿ ಇರುತ್ತದೆ ಅದನ್ನು ಅಕ್ವೈರ್ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ನಿಮ್ಮ ಸರ್ಕಾರಿ ವಕೀಲರಿಗೆ ಗವರ್ನಮೆಂಟ್ ಪ್ಲೀಡರ್ಸ್‌ಗೆ ಸ್ಟ್ರಿಕ್ಟಾಗಿ ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಯಾವುದೇ ಗವರ್ನಮೆಂಟ್ ಸ್ಕೀಮ್‌ನಲ್ಲಿ ಭೂಮಿಯನ್ನು ನಾವು ಸ್ವಾಧೀನ ಪಡಿಸಿಕೊಳ್ಳತಕ್ಕ ಕಡೆ ಗಮನ ಹರಿಸಬೇಕು ಇಲ್ಲದಿದ್ದರೆ ಯಾವುದೇ ಪ್ರಾಜೆಕ್ಟ್‌ಗೆ ಅಗಲಿ ಇಟ್ಟ ದುಡ್ಡು ಸಂಪೂರ್ಣವಾಗಿ ಲ್ಯಾಂಡ್ ಅಕ್ವಿಸಿಷನ್‌ಗೆ ಹೋಗುತ್ತದೆ ಇದರಿಂದ ಮುಂದೆ ಯಾವ ಸ್ಕೀಮ್ ಬರುವುದಿಲ್ಲ. ಇವೊತ್ತು ಡೆವಲಪ್‌ಮೆಂಟ್ ವರ್ಕ್‌ಗೆ ಗುಲ್ಬರ್ಗಾ ಯೂನಿವರ್ಸಿಟಿಯವರು ಒಂದು ಕೋಟಿ ರೂಪಾಯಿ ಅಥವಾ ಒಂದೂವರೆ ಕೋಟಿ ರೂಪಾಯಿ ಕೇಳುತ್ತಾರೆ, ಆ ಹಣ ಅವರಿಗೆ ಸಿಗುವುದಿಲ್ಲ. ಕೋರ್ಟ್ ಡಿಕ್ರೀ ಬಂದಾಗ ೧೯ ಸಾವಿರ ೨೦ ಸಾವಿರ ಬಿಡುಗಡೆ ಮಾಡುತ್ತಾ ಇದ್ದೀರಿ. ದಯವಿಟ್ಟು ಇದರ ಬಗ್ಗೆ ಲಕ್ಷ್ಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಗುಲ್ಬರ್ಗಾದಲ್ಲಿ ಕ್ಯಾನ್ಸರ್ ಹಾಸ್ಪಿಟಲ್ ಪ್ರಾರಂಭ ಮಾಡಬೇಕು ಎಂದು ಡೆಪ್ಯುಟಿ ಕಮೀಷನರ್ ಮತ್ತು

ಅನೇಕ ಆಫೀಸರ್‌ಗಳು ಆಸಕ್ತಿ ವಹಿಸಿ ಇವೊತ್ತಿನದಿನ ಪ್ರಯತ್ನ ಪಟ್ಟು ಪ್ರೈವೇಟ್ ಪಾರ್ಟಿ ಹತ್ತಿರ ಹಣ ಕಲೆಕ್ಟ್ ಮಾಡಿ ಪ್ರಾರಂಭ ಮಾಡಿದ್ದಾರೆ. ಅದಕ್ಕೆ ತಾವು ೧೨ ಲಕ್ಷ ರೂಪಾಯಿಗಳನ್ನು ಗ್ರಾಂಟ್ ಇನ್ ಏಡ್ ಸ್ಕೀಮ್‌ನಲ್ಲಿ ಒದಗಿಸಿಕೊಟ್ಟಿದ್ದೀರಿ, ಇದು ಒಳ್ಳೆಯದು. ಆದರೆ ನಾನು ಕೇಳುತ್ತೇನೆ. ಇವೊತ್ತು ಪೇಜ್ ನಂ-೨೬ರಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜ್, ಹಾಸ್ಪಿಟಲ್, ಮಣಿಪಾಲ್ ಅವರಿಗೆ ಕೂಡ ೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾನು ಕೊಡಬಾರದೆಂದು ಹೇಳಲಿಲ್ಲ. ಯಾವ ಇನ್‌ಸ್ಟಿಟ್ಯೂಷನ್ ಡಿಸರ್ವಿಂಗ್ ಇದೆ ಅಂಥಾದ್ದಕ್ಕೆ ಕೊಡಿ. ಆದರೆ ಕಸ್ತೂರಬಾ ಮೆಡಿಕಲ್ ಕಾಲೇಜು ನವರ ಹತ್ತಿರ ಕೋಟಿಗಟ್ಟಲೆ ಹಣ ಇದೆ.........

ಡಾ|| ಎಚ್.ಎಲ್. ತಿಮ್ಮೇಗೌಡ.—ನೆಕ್ಸ್ಟ್ ಪೇಜ್‌ನಲ್ಲಿ ಗವರ್ನಮೆಂಟ್ ಆಫ್ ಇಂಡಿಯಾದಿಂದ ಸ್ಯಾಂಕ್ಷನ್ ಮಾಡಿಸಿಕೊಂಡು ಬಂದಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಇನ್‌ಸ್ಟಿಟ್ಯೂಷನ್ ಡಿಸರ್ವಿಂಗ್ ಇದೆ ಅಂಥಾದ್ದಕ್ಕೆ ನೀವು ಎನ್‌ಕರೇಜ್ ಮಾಡಬೇಕು. ಆರ್ಥಿಕವಾಗಿ ದುರ್ಬಲವಾಗಿರತಕ್ಕವುಗಳಿಗೆ ಗ್ರಾಂಟ್ ಇನ್ ಏಡ್ ಸ್ಕೀಂನಲ್ಲಿರತಕ್ಕಂಥದ್ದಕ್ಕೆ ತಾವು ಕೊಡಬೇಕು. ಯಾವುದೇ ಇನ್‌ಸ್ಟಿಟ್ಯೂಷನಲ್ಲಿ ಆರ್ಥಿಕವಾಗಿ ಬಿಕ್ಕಟ್ಟು ಇದ್ದರೆ, ತಾಪತ್ರಯ ಇದ್ದರೆ ಅವರ ಮಟ್ಟಿಗೆ ಪ್ರಯತ್ನ ಪಟ್ಟು ಹಣವನ್ನು ಕಲೆಕ್ಟ್ ಮಾಡಿದರೆ ಅಂಥದ್ದಕ್ಕೆ ಕೊಡಬೇಕು. ಇವೊತ್ತು ಗುಲ್ಬರ್ಗಾದಲ್ಲಿ ಏನು ಮಾಡಿದ್ದಾರೆ. ಡೆಪ್ಯುಟಿ ಕಮೀಷನರ್, ಡಿವಿಜನಲ್ ಕಮೀಷನರ್ ಅನೇಕ ಅಧಿಕಾರಿಗಳು ಮತ್ತು ಪ್ರೈವೇಟ್ ಫಿಲಾನ್‌ಥ್ರೋಪಿಸ್ಟ್ ಅವರುಗಳು ಆಸಕ್ತಿ ವಹಿಸಿ ಫಂಡ್ ರೈಸ್ ಮಾಡಿದ್ದಾರೆ. ಕಸ್ತೂರ್‌ಬಾ ಮೆಡಿಕಲ್ ಕಾಲೇಜು, ಕೇವಲ ಕೆಲವೇ ಜನರು ಇರತಕ್ಕ ಸಂಸ್ಥೆ. ಅಲ್ಲಿ ಎಲ್ಲಿಯವರೆಗೆ ಹೋಗಿದೆ ಅಂದರೆ ನಾಳೆ ನೀವು ಇಂಟರ್‌ಫಿಯರ್ ಮಾಡುವ ಹಾಗೆ ಇಲ್ಲ. ಲಿಂಗಿಸ್ಟಿಕ್ ಮೈನಾರಿಟೀಸ್ ಎಂದು ಹೇಳಿ ಅವರು ಇವೊತ್ತಿನ ದಿನ ಸ್ಟೇಟಸ್ ಪಡೆದುಕೊಂಡು, ತಮಗೋಸ್ಕರವೇ ಮಾಡಿಕೊಳ್ಳುವಂತಹ ಒಂದು ಸಂಸ್ಥೆಯಾಗಿದೆ. ಇಂಥಾದ್ದಕ್ಕೆ ಸರ್ಕಾರದವರು ಎನ್‌ಕರೇಜ್ ಮಾಡಿದರೆ ಹೇಗೆ ? ಬೇರೆ ಕಡೆ ಆಸ್ಪತ್ರೆಗಳಲ್ಲಿ ಔಷಧಿಗಳು. ಮೆಡಿಷಿನ್ ಗಳನ್ನು ತರಬೇಕಾದರೆ ದುಡ್ಡು ಇಲ್ಲ. ಆದರೆ ನೀವು ಅವರಿಗೆ ೧೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಗುಲ್ಬರ್ಗಾದವರಿಗೆ ಅದೇ ರೀತಿ ಮಾಡಿದ್ದೀರಿ. ಕಸ್ತೂರ್‌ಬಾ ಮೆಡಿಕಲ್ ಕಾಲೇಜ್‌ಗೂ ಹಾಗೂ ಗುಲ್ಬರ್ಗಾಕ್ಕೂ ಒಂದೇ ಟ್ರೀಟ್‌ಮೆಂಟ್, ಈ ರೀತಿಯೇ? ಈ ರೀತಿಯಾಗಿ ತಾವು ಹಣವನ್ನು ಬಿಡುಗಡೆ ಮಾಡಬಾರದು ಮತ್ತು ಈ ವಿಚಾರದಲ್ಲಿ ಯೋಚನೆ ಮಾಡಬೇಕು ಎಂದು ನಾನು ಕೇಳುತ್ತೇನೆ. ಹಿಂದುಳಿದಂತಹ ಭಾಗದಲ್ಲಿ ಯಾರಾದರೂ ಮುಂದೆ ಬಂದರೆ ಅವರಿಗೆ ಎನ್‌ಕರೇಜ್ ಮಾಡಿ. ಎಲ್ಲಿ ಕೋಟ್ಯಾಧೀಶರು ಇದ್ದಾರೋ ಅಲ್ಲಿ ಗ್ರಾಂಟ್ ಇನ್ ಏಯ್ಡ್ ಕೊಟ್ಟರೆ ತಪ್ಪಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತಾ ಇದ್ದೇನೆ.

ಎರಡನೆಯದಾಗಿ, ಪೇಜ್ ನಂ. ೩೧ರಲ್ಲಿ ಇರಿಗೇಷನ್ ಇದೆ.

"Item No. 2 and 3.–In order to carry drought Relief Works taken up in the previous year a sum of Rs. 7.10 crores is required during the year. This expenditure constitutes New Service. As the amount to this extent could be found by reapropriation of savings, only taken sums are included in the Demand." ಇದಕ್ಕೂ ಕೂಡ ಏನು ಮಾಡಿದ್ದೀರಿ ಅಂದರೆ ಡ್ರಾಟ್ ರಿಲೀಫ್ ವರ್ಕ್ಸ್‌ನ ಅಡಿಯಲ್ಲಿಕೆ ಲವು ಭಾಗಕ್ಕೆ ತಾವು ಹಣವನ್ನು ಬಿಡುಗಡೆ ಮಾಡಿದ್ದೀರಿ, ಕಬಿನಿ ಪ್ರಾಜೆಕ್ಟ್ಸ್, ಮಲಪ್ರಭ ಪ್ರಾಜೆಕ್ಟ್‌ಗೆ ಮಾಡಿದ್ದೀರಿ, ಸಂತೋಷ. ಹೋದವರ್ಷ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲೂ ಕೂಡ ಕೆನಾಲ್ ವರ್ಕ್‌ಗೆ ಎಂದು ಸ್ಕೇರ್ಸಿಟಿಯಲ್ಲಿ ೧೦ ಕೋಟಿ ಬಿಡುಗಡೆ ಮಾಡಿದ್ದೀರಿ. ಇದರ ಬಗ್ಗೆ ನಾನು ಕೇಳಿದೆ, ತಾವು ಉತ್ತರ ಹೇಳಲಿಲ್ಲ. ವೇರಿಯಸ್ ಇರಿಗೇಷನ್ ಪ್ರಾಜೆಕ್ಟ್‌ಗೆ ಖರ್ಚು ಮಾಡಿದಂಥ ಹಣ ಎಷ್ಟಿದೆ ಅದರ ಬಗ್ಗೆ ಒಂದು ವೈಟ್ ಪೇಪರ್ ಪಬ್ಲಿಷ್ ಮಾಡಿ, ನಿಮ್ಮ ಟಾರ್ಗೆಟ್ ಏನು, ಅಚೀವ್‌ಮೆಂಟ್ ಏನು, ಕಾಡಾದಲ್ಲಿ ಎಷ್ಟು ಮಾಡಿದ್ದೀರಿ, ಡ್ಯಾಂ, ಕೆನಾಲ್‌ಗೆ ಎಷ್ಟು ಖರ್ಚು ಮಾಡಿದ್ದೀರಿ, ಸ್ಕೇರ್ಸಿಟಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಎಷ್ಟು ಹಣ ಬಿಡುಗಡೆಯಾಗಿದೆ. ಎಷ್ಟರಮಟ್ಟಿಗೆ ಕೆಲಸವಾಗಿದೆ ಎನ್ನುವುದು ವೈಟ್‌ಪೇಪರ್ ಪಬ್ಲಿಷ್ ಮಾಡಿ. ಶಹಾಪುರ ಬ್ರಾಂಚ್ ಕೆನಾಲ್‌ಗೆ ೨ ಕೋಟಿ ಬಿಡುಗಡೆ

ಮಾಡಿದರೆ ೩೫ ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಎಂದು ಎಂ.ಎಲ್.ಎ. ಅವರು ಕೇಳಿಕೊಂಡರು ಅದನ್ನು ಬಿಡುಗಡೆ ಮಾಡಲಿಲ್ಲ. ಸ್ಕೇರ್ಸಿಟಿಯಲ್ಲಿ ೧೦ ಕೋಟಿ ಬಿಡುಗಡೆ ಮಾಡಿದಿರಿ. ಅದರ ಬಗ್ಗೆ ತನಿಖೆಯಾಗಲಿ ಎಂದು ನಾನು ಕೇಳಿದೆ ನಿಮಗೆ ಯಾರು ಬೇಕು, ಅಥವಾ ಎಲ್ಲಿ ಒತ್ತಡ ಬರುತ್ತದೆ ಅಂತಹ ಕಡೆ ಹಣ ಬಿಡುಗಡೆ ಮಾಡುವುದು, ಎಲ್ಲಿ ಅವಶ್ಯಕತೆ ಇದೆ, ಜರೂರು ಇದ್ದ ಕಡೆ ಹಣಬಿಡುಗಡೆ ಮಾಡದೆ ತಾರತಮ್ಯ ಮಾಡುವುದು ಸರಿಯೇ ? ಸ್ಕೇರ್ಸಿಟಿ ರಿಲೀಫ್ ವರ್ಕ್ಸ್ ಹೆಸರಿನಲ್ಲಿ ಹತ್ತಾರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾ ಹೋದಿರಿ, ಕೆಲಸ ಕೂಡ ಸರಿಯಾಗಿ ಆಗಿಲ್ಲ. ಈ ೧೧ ಕೋಟಿಯಲ್ಲಿ ಎಷ್ಟು ಕೆಲಸ ಮಾಡಿದ್ದೀರಿ, ಎನ್ನುವ ಮ್ಯಾನಡೇಸ್ ನನಗೆ ಬೇಕು. ಕಂಟ್ರಾಕ್ಟರ್ ಮಿಷಿನರಿ ಹಚ್ಚಿ ಕೆಲಸ ಮಾಡಿದ್ದರೆ ಅದಲ್ಲ. ಸ್ಕೇರ್ಸಿಟಿಯಲ್ಲಿ ಜನರಿಗೆ ಕೆಲಸ ಒದಗಿಸಬೇಕು ಎನ್ನತಕ್ಕ ದೃಷ್ಟಿಯಿಂದ ತಾವು ಮಾಡಿದ್ದುದು. ಇದರ ಬಗ್ಗೆ ವೈಟ್ ಪೇಪರ್ ಪಬ್ಲಿಷ್ ಮಾಡುತ್ತೀರೋ ಏನೋ ಎನ್ನತಕ್ಕ ಬಗ್ಗೆ ಕೂಡ ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಬೇಕು.

ನಾಲ್ಕನೆಯದಾಗಿ, ಪೇಜ್ ೩೭ರಲ್ಲಿ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ಗೆ ಹಣವನ್ನು ಕೇಳಿದ್ದೀರಿ. ಹಿಂದೆ ಕೂಡ ತಾವು ರೆವಿನ್ಯೂ ಮಂತ್ರಿಗಳಾಗಿದ್ದಾಗ ಸದನದಲ್ಲಿ ನಾನು ಕೇಳಿದ್ದೆ. ಏನೆಂದರೆ, ಉತ್ತರ ಕರ್ನಾಟಕದಲ್ಲಿ ಅನೇಕ ಜಿಲ್ಲೆಗಳು ಜಿಯಾಗ್ರಫಿಕಲಿ ಬಹಳ ದೊಡ್ಡದಿದೆ. ಅಡ್ಮಿನಿಸ್ಟ್ರೇಷನ್ ದೃಷ್ಟಿಯಲ್ಲಾಗಲಿ, ಡೆವಲಪ್‌ಮೆಂಟ್ ದೃಷ್ಟಿಯಲ್ಲಾಗಲಿ ಅಷ್ಟು ದೊಡ್ಡ ಜಿಲ್ಲೆಗಳು ಇರತಕ್ಕಂಥಾದ್ದು ಸರಿಯಲ್ಲ. ಹುಂಡೇಕರ್ ಕಮಿಷನ್‌ನವರು ಮತ್ತು ವಾಸುದೇವರಾವ್ ಕಮಿಟಿ ಮತ್ತು ಗುಡಿಗೌಡ ಸಮಿತಿಯವರು ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಬಿಜಾಪುರ ಜಿಲ್ಲೆಯನ್ನು ಇಬ್ಭಾಗ ಮಾಡಬೇಕು, ಧಾರವಾಡ ಜಿಲ್ಲೆಯನ್ನು ಇಬ್ಭಾಗ ಮಾಡಬೇಕು, ಗುಲ್ಬರ್ಗ ಮೈಸೂರು ಜಿಲ್ಲೆಯನ್ನು ಇಭ್ಭಾಗ ಮಾಡಬೇಕು, ಸೌತ್ ಕೆನರಾ ಇಬ್ಭಾಗ ಮಾಡಬಹುದು ಎಂದು ಹೇಳಿದ್ದಾರೆ. ೫ ಹೊಸ ಜಿಲ್ಲೆಗಳನ್ನು ತಯಾರು ಮಾಡಬೇಕು, ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಇದನ್ನು ಮಾಡಿದರೆ ಜನರ ಗ್ರಿವೆನ್ಸಸ್ ಕಡಿಮೆಯಾಗುತ್ತದೆ. ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ತಾವು ಬಡ್ಜೆಟ್ ಭಾಷದಲ್ಲಿ ಏನು ಹೇಳಿದಿರಿ ? ಕನಿಷ್ಟಪಕ್ಷ ಈ ಸಪ್ಲಮೆಂಟರಿ ಎಸ್ಟಿಮೇಟ್ಸ್‌ನಲ್ಲಾದರೂ ಏನೂ ಪ್ರಿಲಿಮಿನರಿ ಸ್ಟೆಪ್ಸ್ ತೆಗೆದುಕೊಂಡಿದ್ದೀರಿ ಅಂದರೆ ಅದರ ಬಗ್ಗೆ ಏನೂ ಇಲ್ಲ. ಬರೀ ನಾಡ ಕಛೇರಿಗಳನ್ನು ಮಾತ್ರ ಕೆಲವು ಕಡೆ ತಾವು ಪ್ರಾರಂಭ ಮಾಡಿದಿರಿ. ಅದು ನಮ್ಮ ಕಾಲದಲ್ಲಿ ಪ್ರಾರಂಭವಾಗಿತ್ತು. ಅದನ್ನು ತಾವು ಮುಂದುವರಿಸಿದಿರಿ. ನಾಡ ಕಛೇರಿಯಲ್ಲ, ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ರೀ ಆರ್ಗನೈಸೇಷನ್ ಆಗತಕ್ಕದ್ದು ಬಹಳ ಅವಶ್ಯವಿದೆ. ತಾವು ಇದರ ಬಗ್ಗೆ ಚಿಂತನೆ ಮಾಡಬೇಕು. ತಮಗೆ ಗೊತ್ತಿದೆ, ಧಾರವಾಡ ಜಿಲ್ಲೆ ಎಷ್ಟು ವಿಶಾಲ ಇದೆ, ಬಿಜಾಪುರ, ಮೈಸೂರು ಎಷ್ಟು ವಿಶಾಲ ಇದೆ ಅದು ತಮಗೆ ಗೊತ್ತಿದೆ. ಇವೊತ್ತು ನಮ್ಮ ಗುಲ್ಬರ್ಗ ಜಿಲ್ಲೆಯ ನಾರಾಯಣಪುರದಿಂದ ಒಬ್ಬ ಸಾಧಾರಣ ಮನುಷ್ಯ ಜಿಲ್ಲೆಗೆ ಬರಬೇಕಾದರೆ ಮಿನಿಮಮ್ ೨೦೦ ಕಿಲೋಮೀಟರ್ ಟ್ರಾವೆಲ್ ಮಾಡಬೇಕು. ಇಲ್ಲಿ ಹಾಸನ, ಚಿಕ್ಕಮಗಳೂರು, ಮಂಡ್ಯ, ಚಿತ್ರದುರ್ಗ ಇವುಗಳನ್ನೇ ತೆಗೆದುಕೊಳ್ಳಿ. ಜಿಯಾಗ್ರಫಿಕಲಿ ಬಹಳ ಚಿಕ್ಕದಾಗಿರತಕ್ಕ ಜಿಲ್ಲೆ ಇದೆ. ಪಾಪ್ಯುಲೇಷನ್‌ವೈಸ್ ತೆಗೆದುಕೊಳ್ಳಿ. ತಾವು ಇದರ ಬಗ್ಗೆ ಬೋಲ್ಡ್ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಮಾಡುವಾಗ ತಮಗೆ ತೊಂದರೆ ಬರಬಹುದು, ಕೆಲವರು ಪ್ರೊಟೆಸ್ಟ್ ಮಾಡಬಹುದು. ಜನರಿಗೆ ಒಳ್ಳೆಯದು ಆಗುತ್ತದೆ, ಸಹಾಯವಾಗುತ್ತದೆ, ಅನುಕೂಲವಾಗುತ್ತದೆ, ಕಲ್ಯಾಣವಾಗುತ್ತದೆ ? ಅಂದರೆ ತಾವು ಈ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈ ರಿಪೋರ್ಟ್‌ನ್ನು ಮುಂದೆ ಇಂಪ್ಲಿಮೆಂಟ್ ಮಾಡುತ್ತಾರೋ ಇಲ್ಲವೋ ಹೇಳಲಿಕ್ಕೆ ಆಗುವುದಿಲ್ಲ. ಆದ್ದರಿಂದ, ತಾವು ಈ ಕಡೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೋಡ್ಸ್ ಅಂಡ್ ಬ್ರಿಡ್ಜಸ್ ಬಗ್ಗೆ ಹೆಚ್ಚಿನ ಹಣವನ್ನು ಕೇಳಿದ್ದಾರೆ. ಪುಟ ೪೩ರಲ್ಲಿ ಏನು ಕೇಳಿದ್ದಾರೆ ಅಂಡರ್ ಗುಲ್ಬರ್ಗಕ್ಕೂ ಕೂಡ ಏರ್‌ಪೋರ್ಟ್ ಆಗಬೇಕೆಂದು ಒಂದು ಪ್ರಪೋಸಲ್ ಇಟ್ಟಿದ್ದಾರೆ. ಅಲ್ಲಿ ಲ್ಯಾಂಡ್ ಕೂಡ ಅಕ್ವೈರ್ ಮಾಡಿದ್ದಾರೆ. ಸುಮಾರು ಈಗಾಗಲೇ ಅಲ್ಲಿ ೭೫ಲಕ್ಷ ರೂಪಾಯಿಯಷ್ಟು ಖರ್ಚು ಆಗಿದೆ. ಆದರೆ ಅದರ ಡೆವಲಪ್‌ಮೆಂಟ್ ಬಗ್ಗೆ ಯೋಚನೆ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜಿಲ್ಲೆಗೆ ಸುಮಾರು ೧೫ಲಕ್ಷ ರೂಪಾಯಿ ಏರಪೋರ್ಟ್‌ಗೆ ಬೇಕೆಂದು ಹೇಳಿದ್ದಾರೆ. ಅದು ಹುಬ್ಬಳ್ಳಿಯಲ್ಲಿ ಆಗಬೇಕೆಂದು ಹೇಳಿದ್ದಾರೆ.

"Item No. 3 (PAGE 41).—A sum of Rs. 15.00 lakhs was released from Contingency Fund for extension of Hubli Airport for providing landing and take off facilities for Boeing Aircrafts. The estimated cost of the extension work is Rs. 150.00 lakhs. An equal sum is required for repayment to the fund"

೧೫ ಲಕ್ಷ ರೂಪಾಯಿ ತಾವು ಪ್ರಾವಿಸೋ ಮಾಡಿದ್ದೀರಿ. ಅದೇ ರೀತಿಯಾಗಿ ಅತೀ ಹಿಂದುಳಿದ ಭಾಗ ಲ್ಯಾಂಡ್ ಅಕ್ವಿಸಿಷನ್ ಆಗಿದೆ, ಅಲ್ಲಿ ಯಾವ ಆಸಕ್ತಿ ವಹಿಸುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹುಬ್ಬಳ್ಳಿಗೆ ಆಕ್ತಿ ವಹಿಸಿ, ಏರ್‌ಪೋರ್ಟ್‌ಗೆ ಅಡೀಷನಲ್ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ೧೫ ಲಕ್ಷ ರೂಪಾಯಿ ಕೇಳುತ್ತಿದ್ದಾರೆ. ಅದೇ ಆಸಕ್ತಿ ವಹಿಸಿ ಗುಲ್ಬರ್ಗಕ್ಕೆ ಏತಕ್ಕೆ ಕೇಳಲಿಲ್ಲ. ಅಲ್ಲಿ ಲ್ಯಾಂಡ್ ಅಕ್ವಿಸಿಷನ್ ಆಗಿದೆ. ಇನ್ನು ರಸ್ತೆ ಬಗ್ಗೆ ಹೇಳಬೇಕೆಂದರೆ ನಮಗೆ ನ್ಯಾಷನಲ್ ಹೈವೇ ಇಲ್ಲ. ತಮಗೆ ನ್ಯಾಷನಲ್ ಹೈವೇ ಇದೆ. ಬೀದರ್ ಟು ಬೆಂಗಳೂರು ನ್ಯಾಷನಲ್ ಹೈವೇ ಮಾಡಿಕೊಡಿ. ಸಾಮಾನ್ಯ ಜನರು ಕ್ಯಾಪಿಟಲ್‌ಗೆ ಬರಬೇಕಾದರೆ ತೊಂದರೆ ಇರುತ್ತದೆಂದು ಕೇಳಿಕೊಂಡಿದ್ದಾಗ ಮಾನ್ಯ ದೇವೇಗೌಡರು ಮಾಡಿಕೊಡುತ್ತೇವೆಂದು ಹೇಳಿದ್ದರು. ನ್ಯಾಷನಲ್ ಹೈವೇಗೆ ರೆಕಮಂಡ್ ಮಾಡಿದ್ದೇನೆಂದು ಹೇಳಿದ್ದರು, ಅದರ ಗತಿ ಏನಾಗಿದೆಯೋ ಗೊತ್ತಿಲ್ಲ. ಸ್ಟೇಟ್ ಹೈವೇ ಆದರೂ ಇಂಪ್ರೂವ್‌ಮೆಂಟ್ ಮಾಡುತ್ತಿಲ್ಲ. ಪರ್ಟಿಕ್ಯುಲರ್‌ಲಿ ಸಿಂಧನೂರು, ಲಿಂಗಸೂರು, ಶಿರಗುಪ್ಪ, ರೋಡ್ಸ್ ಎಷ್ಟು ಕೆಟ್ಟಿದೆ ಅಂದರೆ ಯಾರೂ ಕೂಡ, ಅಂದರೆ ನಿಮ್ಮ ಮಂತ್ರಿಗಳು, ನಿಮ್ಮ ಸೆಕ್ರೆಟರಿಗಳು ಯಾರೂ ಆ ರಸ್ತೆಯಲ್ಲಿ ಹೋಗುವುದಿಲ್ಲ. ಅವರೇನಾದರೂ ಹೋಗಬೇಕಾದರೆ ಟ್ರೈನ್‌ನಲ್ಲಿ ಹೋಗುತ್ತಾರೆ ಇಲ್ಲದಿದ್ದರೆ ಬಹಳ ಕಷ್ಟಪಟ್ಟುಕೊಂಡು ಹೈದರಾಬಾದ್‌ಗೆ ಫ್ಲೈಟ್‌ನಲ್ಲಿ ಹೋಗಿ ಅಲ್ಲಿಂದ ಕಾರು ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲಿನಿಂದ ಬಂದ ಮಾಮೂಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಹೈದರಾಬಾದ್ ಸ್ಟೇಟ್‌ನಲ್ಲಿ ಇದ್ದೆವು. ನಾನು ಏನೂ ಮಾಡಿಲ್ಲ ಎಂದು ಹೇಳುತ್ತಿಲ್ಲ. ನಮ್ಮ ಕಾಲಕ್ಕೆ ಪ್ರಮಾಣ ಕಡಿಮೆ ಆಗಿರಬಹುದು. ಈಗ ನ್ಯಾಷನಲ್ ಹೈವೇನಲ್ಲಿ ಏತಕ್ಕೆ ಇನ್‌ಕ್ಲೂಡ್ ಮಾಡಬಾರದು. ಬಿಸಿನೆಸ್ ದೃಷ್ಟಿಯಿಂದ, ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ದೃಷ್ಟಿಯಿಂದ ಜನರು, ಕ್ಯಾಪಿಟಲ್‌ಗೆ ಬರುವಂಥ ದೃಷ್ಟಿಯಿಂದ ನ್ಯಾಷನಲ್ ಹೈವೇ ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ, ಈ ಕೆಲವು ರಸ್ತೆಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಗಮನ ಕೊಟ್ಟು ಇನ್‌ಕ್ಲೂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೨–೩೦ ಪಿ.ಎಂ.

ಇನ್ನು ಕೊನೆಯದಾಗಿ ರಿಲೀಫ್ ಬಗ್ಗೆ ಹೇಳುವುದಾದರೆ, ಗುಲ್ಬರ್ಗಾದಲ್ಲಿ ಹೆಚ್ಚಿನ ಮಳೆ ಪ್ರಾರಂಭದಲ್ಲಿ ಆದರೆ ಈಗ ಮಳೆಯೇ ಇಲ್ಲದೆ ಜನರು ಮತ್ತು ಜಾನುವಾರುಗಳು ಬಹಳ ತೊಂದರೆಯಲ್ಲಿದ್ದಾರೆ. ಜನರಿಗೆ ಆಹಾರವಿಲ್ಲ, ಜಾನುವಾರುಗಳಿಗೆ ಮೇವಿಲ್ಲ. ನಾವು ಇವತ್ತು ಯಾವುದೇ ಊರಿಗೆ ಹೋದರೂ ಕೂಡ ಜನರು ತಮ್ಮ ದನಗಳಿಗೆ ಮೇವನ್ನು ಒದಗಿಸಿಕೊಡಿ ಎಂದು ಕೇಳುತ್ತಿದ್ದಾರೆ. ಇದರ ಬಗ್ಗೆ ನಾನು ತಮಗೆ ಒಂದು ಗಮನ ಸೆಳೆಯುವ ಸೂಚನೆಯನ್ನೂ ಕೂಡ ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ತಾವು ಗಮನ ಕೊಡಬೇಕು. ಜಾನುವಾರುಗಳ ಮೇವಿನ ಬಗ್ಗೆ ಗಮನ ಹರಿಸುವ ಮಟ್ಟದಲ್ಲಿ ನಿಮ್ಮ ಸರ್ಕಾರಿ ಆಡಳಿತ ಯಂತ್ರ ಇಲ್ಲ. ದನಗಳ ಮೇವನ್ನು ಬೇರೆ ಕಡೆಯಿಂದಲಾದರೂ ತರಿಸಿಕೊಡಿ ಎಂದರೆ ಅದರ ಟ್ರ್ಯಾನ್ಸ್‌ಪೋರ್ಟೇಷನ್‌ಗೆ ನಮ್ಮಲ್ಲಿ ಹಣ ಇಲ್ಲವೆಂದು ನಿಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಜಾನುವಾರುಗಳ ಮೇವಿನ ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ. ನಂತರ ಯಾರಾದರೂ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುವುದಿದ್ದರೆ ಅವರಿಗೆ ಅವಕಾಶವನ್ನು ಮಾಡಿಕೊಡುತ್ತೇನೆ.

SRI S. R. BOMMAI (Chief Minister).—ಮಾನ್ಯ ಉಪಾಧ್ಯಕ್ಷರೆ, ಪೂರಕ ಅಂದಾಜುಗಳ ಬಗ್ಗೆ ಇದುವರೆಗೆ ವಿಫಲವಾದ ಚರ್ಚೆಯಾಗಿದ್ದು ಅನೇಕ ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಸಪ್ಲಿಮೆಂಟರಿ ಬಜೆಟ್ ಬಗ್ಗೆ ಹಿಂದೆ ಏನಾಗಿದೆ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ಹೇಳಬಯಸುತ್ತೇನೆ.

The total amount for which Supplimentary Estimates are sought now amounts to Rs. 95,48 Crores. Out of this amount, a sum of Rs. 44·85 Crores is Covered by Central Assistance and Rs. 0.66 crores by contra-receipts. The net out-go of cash will be only Rs. 49,97 Crores.

2. The First Instalment of Supplementary Estimates passed in October 1988 was for Rs 20.43 Crores. Thus the total amount for which Supplementary Estimates are sought for in 1988-89 is Rs. 15·91 Crores, which works out to only 2.39% of the original Budget Estimates for the year, In absolute terms, this is the lowest amount since 1980. for which Supplementary Estimate is presented. In terms or percentage of the original Budget, this is the lowest in the last 25 years.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಯಾವಾಗಲೂ ೨೦ ವರ್ಷಗಳ ಹಿಂದಿನ ಕಂಪ್ಯಾರಿಸನ್‌ನ್ನು ಕೊಡುತ್ತಿದ್ದವರು ಈಗ ೧೯೮೦ ರಿಂದ ಕೊಡುತ್ತಿದ್ದೀರಿ ಕಾರಣ ಏನು ?

SRI K. H. PATIL.—Because there were no activities.........

SRI S, R. BOMMAI.—Out of the total amount of Rs. 95.48 Crores, provision for Plan Schemes is Rs. 57.41 Crores and non-plan Schemes total Rs. 38.07 Crores. Even out of the Plan Schemes. most of them carry assistance from Central Government, NCDC etc., The total assistance will be Rs, 37.26 Crores out of the total Rs. 57.41 Crores,

4, The main items of Non-Plan expenditure are as follows :

(i) Payment to KS & DL as Ways and Means advance Rs. 2.00 Crores

(ii) Provision for payment of Grants and Salaries to Primary & Secondary Schools Rs. 17.00 Crores

(iii) Expenditure on Flood relief Rs. 9.38 Crores

ಮಾನ್ಯ ಅಧ್ಯಕ್ಷರೇ ಸಪ್ಲಿಮೆಂಟರಿ ಬಜೆಟ್ ಮೇಲೆ ಮಾತನಾಡುವಾಗ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಅವರಲ್ಲಿ ಪ್ರಮುಖವಾದ ವಿಚಾರಗಳ ಬಗ್ಗೆ ಉತ್ತರವನ್ನು ಹೇಳುತ್ತೇನೆ. ಮಾನ್ಯ ಮೊಯಿಲಿಯವರು ಉತ್ತರ ಕರಾವಳಿಗಳಲ್ಲಿ ಊಳು ತೆಗೆಯತಕ್ಕಂಥ ವಿಚಾರದ ಬಗ್ಗೆ ಬಹಳ ಪ್ರಮುಖವಾಗಿ ಹೇಳಿದ್ದಾರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಮೀನುಗಾರರಿಗೆ ಬಹಳ ತೊಂದರೆಯಾಗುತ್ತಿದೆ. ಅವರು ಚಳುವಳಿಯನ್ನೂ ಕೂಡ ಮಾಡಿದ್ದಾರೆ. ಅದರ ಬಗ್ಗೆ ಹಣದ ಕೊರತೆ ಇಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಇಲ್ಲದಿದ್ದರೂ ಅದಕ್ಕೆ ಬೇಕಾದಂಥ ಹಣವನ್ನು ಕೊಡಲು

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವಕಾಶವಿದೆ ಅದನ್ನು ಆಲ್ ಇಂಡಿಯಾ ಏಜೆನ್ಸಿಗೆ ಕೊಟ್ಟಿದ್ದೇನೆ ಊಳು ತೆಗೆಯುತಕ್ಕಂಥ ಟೆಕ್ನಿಕಲ್ ಏಜೆನ್ಸಿ ಯಾರು ಇದ್ದಾರೆ ಅವರು ಅಕ್ಟೋಬರ್ ತಿಂಗಳಿಂದ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಸರ್ವೆಯನ್ನು ಕೂಡ ಮಾಡಿದ್ದಾರೆ. ಅವರ ಜೊತೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಮೀನುಗಾರರ ಸಂಘದ ಅಧ್ಯಕ್ಷರು ಬಂದಿದ್ದರು ನಿಮ್ಮ ಜಿಲ್ಲೆಯ ಶಾಸಕರು ಕೂಡ ಇದ್ದರು. ನಾವು ಈಗಾಗಲೇ ಸಭೆಮಾಡಿ ತೀರ್ಮಾನವನ್ನು ತೆಗೆದು ಕೊಂಡಿದ್ದೇವೆ. ಇದಕ್ಕಾಗಿ ಎಷ್ಟು ಹಣ ಬೇಕಾಗಿದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ. ಬಹಳ ಅವಶ್ಯಕವಾಗಿ ಅನೇಕ ಜನರು ಅಲ್ಲಿ ಸತ್ತಿದ್ದಾರೆ. ಪ್ರತಿನಿತ್ಯ ಅಲ್ಲಿ ತೊಂದರೆಯಾಗುತ್ತದೆ. ಇದನ್ನು ಒಂದು ಏಜನ್ಸಿಗೆ ಎಂಟರೆಸ್ಟ್ ಮಾಡಿದ್ದೇವೆ. ಅದರಿಗೆ ಇದುವರೆಗೆ ೧೫ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೇವೆ. ಗೌವರ್ನಮೆಂಟ್ ಆಫ್ ಇಂಡಿಯಾ ಕಾರ್ಪೋರೇಷನ್ ಅವರು ಅಕ್ಟೋಬರ್ ೧೯೮೯ ರಿಂದ ಕೆಲಸ ಪ್ರಾರಂಭ ಮಾಡುತ್ತಾರೆ. ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡುತ್ತೇವೆ. ಅದರ ಬಗ್ಗೆ ಏನೂ ತೊಂದರೆ ಇಲ್ಲ. ಮಾನ್ಯ ಮೊಯಿಲಿಯವರು ಬಹಳ ಚುರುಕಾಗಿ ಮಾತನಾಡುತ್ತಾರೆ

ಆದರೆ ಅವರದು ಹರಿತವಾದ ನಾಲಿಗೆ ಇದ್ದುದನ್ನು ವಿಪರ್ಯಾಸವಾಗಿ ಹೇಳುವುದರಲ್ಲಿ ಬಹಳ ಪರಿಣತರಾಗಿದ್ದಾರೆ, ಏತಕ್ಕೆಂದರೆ ಅವರು ಅಂಕಿಅಂಶಗಳಲ್ಲಿ ಬಹಳ ಪರಿಣತರಿದ್ದಾರೆ ಅರ್ಥಮಂತ್ರಿಗಳಾಗಿದ್ದವರು. ಫ್ಲಡ್ ರಿಲೀಫ್‌ಗಾಗಿ ಕೇಂದ್ರ ಸರ್ಕಾರದಿಂದ ೧೫ ಕೋಟಿ ರೂಪಾಯಿಗಳು ಬಂದಿದೆ. ನಾವು ೯ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದೇವೆ. ಮಾರ್ಜಿನಲ್ ಮನಿ ೬ ಕೋಟಿ ರೂಪಾಯಿಗಳಿಗೂ ಮೊದಲೇ ಖರ್ಚು ಮಾಡಿದ್ದೇವೆಂದು ಹೇಳಿದ್ದೇವೆ. ಅದಕ್ಕೆ ರಾಜ್ಯ ಸರ್ಕಾರಕ್ಕೆ ಆ ಒಂದು ಅಧಿಕಾರ ಇದೆ. ೧೫ ಕೋಟಿ ಸೀಲಿಂಗ್ ಫಿಕ್ಸ್ ಮಾಡಿರುವುದರಲ್ಲಿ ಈ ೬ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ ಅದನ್ನು ವಜಾ ಮಾಡಿ ೯ ಕೋಟಿ ಫಿಕ್ಸ್ ಮಾಡಿರುತ್ತಾರೆ. ಇದರಲ್ಲಿ ಯಾವುದೇ ಉಳಿತಾಯವನ್ನು ಮಾಡಿಲ್ಲ. ಕೇಂದ್ರ ನಮಗೆ ಬಿಡುಗಡೆ ಮಾಡಿದ ಹಣವೇ ಬಹಳ ಕಡಿಮೆಯಾಗಿರುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದವರು ಏನು ಬಿಡುಗಡೆ ಮಾಡಿರುತ್ತಾರೆ, ಏನು ಅಸಿಸ್ಟೆನ್ಸ್ ಕೊಟ್ಟಿರುತ್ತಾರೆ. ಅದನ್ನು ಖರ್ಚುಮಾಡಿದ್ದೇವೆ. ಅದರ ಜೊತೆಗೆ ಬೆಂಗಳೂರು ನಗರ ಕಾರ್ಪೊರೇಷನ್‌ರವರು ೧೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಕ್ಕೆ ಮನೆಕಟ್ಟಿರತಕ್ಕದ್ದು ರಸ್ತೆ ಮಾಡತಕ್ಕಂಥದ್ದು. ಇನ್ನು ಬೇರೆ ಬೇರೆ ಇಲಾಖೆಯಿಂದ ಖರ್ಚುಮಾಡಿದ್ದಾರೆ. ಅದು ಈ ಹೆಡ್‌ನಲ್ಲಿ ಬರುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲ ಖರ್ಚುಮಾಡಿದ್ದಾರೆ. ಅದರ ಮೊತ್ತ ನನ್ನಲ್ಲಿ ಇಲ್ಲ. ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ಮತ್ತು ಮಾನ್ಯ ಕೆ. ಎಚ್. ಪಾಟೀಲ್‌ರವರು ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಹೇಳಿದರು ಇಲ್ಲಿಯ ಈ ಕೈಗಾರಿಕಾ ಸಂಸ್ಥೆಗಳನು ಮುಚ್ಚುವ ಬಗ್ಗೆ ಹೇಳಿದ್ದಾರೆ. ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾರನ್ನು ದೂರ ಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಇವತ್ತು ಸಹಕಾರಿ ಸಕ್ಕರೆ ಕಾರ್ಖಾನೆ ಇರಬಹುದು ಹತ್ತಿ ಗಿರಣಿಗಳು ಇರಬಹುದು ಹುಲಕೋಟಿಯಲಿ ೨-೩ ಮಿಲ್ಲುಗಳು ನಡೆಯುತ್ತಿವೆ ಬೇರೆ ಕಡೆ ಆ ರೀತಿ ಏಕೆ ನಡೆಯು ತ್ತಿಲ್ಲವೆಂದು ಕೇಳಿದರು. ಅದಕ್ಕೆ ಉತ್ತರ ಅವರ ಕಡೆಯಲ್ಲಿಯೇ ಇದೆ. ಎಲ್ಲರೂ ಮಾನ್ಯ ಕೆ. ಎಚ್. ಪಾಟೀಲರವರಂತೆ ನಡೆಸಿದ್ದರೆ ಎಲ್ಲಾ ಸರಿಯಾಗಿ ನಡೆಯುತ್ತಿದೆ ಸರ್ಕಾರಿ ಅಧಿಕಾರಿಗಳು ತಪ್ಪುಮಾಡಿ ಲ್ಲವೆಂದು ಹೇಳುವುದಿಲ್ಲ ಆದರೆ ಅದಕ್ಕೂ ಮೊದಲು ಈ ಸಹಕಾರಿಗಳ ಹತ್ತಿರ ಇದ್ದವು ಅವುಗಳಲ್ಲಿ ರೈತರ ಮ್ಯಾನೇಜ್‌ಮೆಂಟ್ ಇರುತ್ತದೆ. ನಾನು ಅವುಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಸಂಕೇಶ್ವರದ ಮಾನ್ಯ ಬಸಣ್ಣಗೌಡರು ಹೇಗೆ ನಡೆಸಿದರೋ ಹಾಗೆ ನಡೆಸಿದರೆ ತೊಂದರೆಯೇ ಆಗುವುದಿಲ್ಲ ಸರ್ಕಾರದಿಂದ ಹಣವನ್ನು ಕೊಡುತ್ತೇವೆ. ಕೊಟ್ಟಿರುವ ಹಣವನ್ನು ಸರಿಯಾಗಿ ಉಪಯೋಗ ಮಾಡಿ ಕೊಳ್ಳತಕ್ಕಂಥ ಸಂಸ್ಥೆಗಳು ಅದರ ಮೇಲೆ ಬಹಳಷ್ಟು ಜವಾಬ್ದಾರಿ ಇರುತ್ತದೆ. ಅವರ ಮ್ಯಾನೇಜರ್ ಅಲ್ಲಿರುತ್ತಾರೆ. ಅದಕ್ಕೆ ಒಂದು ವ್ಯವಸ್ಥೆ ಮಾಡಬೇಕು ಎನ್ನುವ ಉದ್ದೇಶದಿಂದ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡುವ ವಿಚಾರ ಹೇಳಿದ್ದೀರಿ, ಅದು ತಡವಾಗಿದೆ, ಆದರೆ ಸರ್ಕಾರ ವಿಚಾರ ವನ್ನು ಕೈಬಿಟ್ಟಿಲ್ಲ. ಎನ್‌ಸಿಡಿಸಿ. ಕೂಡ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸಂಸ್ಥೆಗಳಲ್ಲಿರತಕ್ಕ ಅವ್ಯವಸ್ಥೆ ಏನಿದೆ ಅದು ಯಾವ ಮಟ್ಟಕ್ಕೆ ಬಂದಿದೆ ಎಂದರೆ ಬಾಗಲಕೋಟೆ ಅಥವಾ ಬಿಜಾಪುರದ ಸ್ಪಿನ್ನಿಂಗ್ ಮಿಲ್ ಬಗ್ಗೆ ವಿಚಾರ ಮಾಡಿದರೆ ಗೊತ್ತಾಗು ತ್ತದೆ. ಅದರ ಬಗ್ಗೆ ತಾವು ಒಪ್ಪಿದರೆ ಒಳ್ಳೆಯ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ ಆಗಿ ಮಾಡಬಹುದು. All co-operative textile mills will be handed over to you as a President of All India Textile Federation with all liabilities ಆಮೇಲೆ ದಾವಣಗೆರೆ ವಿಚಾರ ನಿಮಗೆ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಎಂ. ಇ. ಐ ಗೆ ಒಂದು ಪೈಸೆಯನ್ನೂ ಕೊಟ್ಟಿಲ್ಲ,

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಬೇಕಾದಷ್ಟು ಹಣ ಕೊಟ್ಟಿದ್ದೇವೆ. ಸರ್ಕಾರಕ್ಕೆ ಅದು ಒಂದೇ ಸಂಸ್ಥೆ ಅಲ್ಲ. ಬೇರೆ ಬೇರೆ ಸಂಸ್ಥೆಗಳೂ ಇವೆ. ಅವೆಲ್ಲಕ್ಕೂ ಕೂಡ ಸರ್ಕಾರ ಹಣ ಕೊಡಬೇಕು,

ಶ್ರೀ ಎಂ. ಎಸ್. ಕೃಷ್ಣನ್.—ಸರಿ ಮಾಡಲಿಕ್ಕೆ ಸೂಚನೆ ಕೊಟ್ಟಿದ್ದೇವೆ. ಚರ್ಚೆ ಮಾಡ ಬೇಕೆಂದು ಹೇಳಿದ್ದೇವೆ. ಇದುವರೆಗೆ ಚರ್ಚೆ ನಡೆದಿಲ್ಲ ಹಾಗೆಯೇ ಹೋಗುತ್ತಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರದ ನೀತಿ ಏನಿದೆ ಅದನ್ನು ಕೆ. ಹೆಚ್. ಪಾಟೀಲರು ಹೇಳಿದರು. ಅವು ಜೀವಂತವಾಗಿ ಉಳಿಯುವುದಾದರೆ ಸಂಜೀವಿನಿಯಂತೆ ಚುಚ್ಚೋಣ. ಇಲ್ಲದಿದ್ದರೆ. ಡಿಸ್‌ಪೋಸ್ ಆಫ್ ಮಾಡಬೇಕಾಗುತ್ತದೆ. ನಾನು ಪಬ್ಲಿಕ್ ಸೆಕ್ಟರ್ ಬಗ್ಗೆ ಸ್ಪಷ್ಟವಾಗಿ

ಹೇಳಿದ್ದೇನೆ. ಅಂದಮಾತ್ರಕ್ಕೆ ನಾನು ಅವುಗಳ ವಿರೋಧಿ ಎಂದು ಅಲ್ಲ. ನಾನು ಪಬ್ಲಿಕ್ ಸೆಕ್ಟಾರ್ ಪರವಾಗಿ ಇರತಕ್ಕವನೆ. ಸಹಕಾರಿ ಮತ್ತು ಖಾಸಗೀ ಸಂಸ್ಥೆಗಳು ಏನಿವೆ ಇವುಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಏನು ಪ್ರಯೋಜನ ?

ಶ್ರೀ ಬಿ. ಬಸವಲಿಂಗಪ್ಪ.—ಪಬ್ಲಿಕ್ ಬ್ಯೂರೋ ಆಫ್ ಎಂಟರ್‌ಪ್ರೈಸಸ್ ರಿಪೋರ್ಟ್ ಓದಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ. ಓದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ —ಅದರಲ್ಲಿ ಏನು ಹೇಳಿದ್ದಾರೆ ? ಅವುಗಳನ್ನು ಸರಿಯಾಗಿ ನಡೆಸುವುದಕ್ಕ ಏಕೆ ಸಾಧ್ಯವಾಗುವುದಿಲ್ಲ. ಏತಕ್ಕೆ ಮುಚ್ಚುವುದಕ್ಕ ಹೋಗುತ್ತೀರಿ ? ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಬಗ್ಗೆಯೂ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ೨ ಕೋಟಿ ರೂಪಾಯಿಗಳನ್ನು ಪುನ: ಕೊಡುವುದಕ್ಕೆ ಹೋಗುತ್ತೀರಲ್ಲ ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ,—ಸಹಕಾರಿ ಸಂಸ್ಥೆಗಳಿಗೆ ಕೊಡತಕ್ಕ ಅವಶ್ಯಕತೆ ಇದೆ ಅವುಗಳನ್ನು ಪುನರುಜ್ಜೀವನ ಮಾಡಬೇಕಾಗುತ್ತದೆ,

ಶ್ರೀ ಎಂ. ಎಸ್. ನಾರಾಯಣರಾವ್.—ನಾನು ಎರಡು ಮೆಮೋರ್ಯಾಂಡಂಗಳನ್ನು ತಮಗೆ ಕೊಟ್ಟೆ. ಅಂಡರ್‌ಟೇಕಿಂಗ್ಸ್‌ನಲ್ಲಿ ಏನೇನು ಅವ್ಯವಹಾರ ನಡೆಯುತ್ತಿದೆ, ಯಾರ್ಯಾರು ಏನೇನು ಮಾಡಿದ್ದಾರೆಂಬುದನ್ನೆಲ್ಲ ಅದರಲ್ಲಿ ಹೇಳಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಎರಡು ಕೋಟಿ ರೂಪಾಯಿಗಳನ್ನು ಏತಕ್ಕೆ ಕೊಟ್ಟಿರಿ ಎಂದರೆ ಅದು ಸಹಕಾರಿ ಸಂಸ್ಥೆ; ಅದಕ್ಕೆ ಹಣ ಕೊಡದಿದ್ದರೆ ಅದು ಉಳಿಯಬೇಡವೆ ? ನಾಳೆ ದಿವಸ ನೀವೇ ಅದನ್ನು ಹಣ ಕೊಟ್ಟು ಉಳಿಸಬೇಕಿತ್ತು ಅನ್ನುತ್ತೀರಿ. ಅವರ ಹತ್ತಿರ ೧೦–೧೨ ಕೋಟಿ ರೂಪಾಯಗಳ ಸ್ಟಾಕ್ ಇತ್ತು. ಆ ೧೨ ಕೋಟಿ ರೂಪಾಯಿ ಸ್ಟಾಕನ್ನು ರಿಲೀಸ್ ಮಾಡುವುದಕ್ಕೆ ಕಟ್ಟಡಬೇಕಾದ ಎಕ್ಸೈಜ್ ಡ್ಯೂಟಿ ಏನಿತ್ತು ಅದನ್ನು ಕೊಡದೆ ರಿಲೀಸ್ ಮಾಡುವ ಹಾಗೆ ಇರಲಿಲ್ಲ. ಅದಕ್ಕೆ ಸರ್ಕಾರ ಹಣ ಕೊಟ್ಟಿತು.

ಶ್ರೀ ಎಂ. ಎಸ್ ಕೃಷ್ಣನ್,—ಮುಖ್ಯ ಮಂತ್ರಿಗಳಿಗೆ ಹಣ ಕೊಡಬೇಡಿ ಎಂದು ಹೇಳಲಿಲ್ಲ; ಕೊಡಿ ಜೊತೆಯಲ್ಲೇ ಮ್ಯಾನೇಜ್‌ಮೆಂಟ್ ಎಫಿಷಿಯನ್ಸಿಯನ್ನು ನೋಡಬೇಕೆಂದು ಹೇಳುತ್ತೇನೆ. ಮ್ಯಾನೇಜ್‌ಮೆಂಟ್ ಸರಿಯಾಗಿದ್ದರೆ ವರ್ಕರ್ಸ್ ಸಹಕಾರವನ್ನು ತೆಗೆದುಕೊಳ್ಳುತ್ತಾರೆ. ಇದು ಬಹಳ ಮುಖ್ಯ, ಇದರ ಬಗ್ಗೆ ಸರ್ಕಾರ ಗಮನಹರಿಸುವುದಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಅದರ ಬಗ್ಗೆಯೂ ಗಮನ ಹರಿಸಿದ್ದೇವೆ. ಮತ್ತು ಬೇಕಾದಷ್ಟು ಸಹಾಯವನ್ನು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮಟ್ಟದಲ್ಲಿ ಮೀಟಿಂಗ್ ಕರೆಯಿರಿ, ಅದಾದರೂ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಎಂ.ಇ.ಐ. ಬಗ್ಗೆ ವಿವರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ವಿವರ ತಮಗೆ ಗೊತ್ತಿರುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಹಾಳು ಮಾಡಬೇಕೆಂದು ಅಲ್ಲ, ಮೀಟಿಂಗ್ ಕರೆಯಿರಿ.

ಶ್ರೀ ಎಸ್. ಆರ್ ಬೊಮ್ಮಾಯಿ.—ಇನ್ನೂ ಕೆಲವು ತಪ್ಪುಗಳನ್ನು ನಾವು ಮಾಡುತ್ತಿದ್ದೇವೆ. ಖಾಸಗೀ ಕಂಪನಿಯನ್ನು ಸರ್ಕಾರ ತೆಗೆದುಕೊಳ್ಳತಕ್ಕದ್ದು ಇವೆಲ್ಲ ಮಾಡುತ್ತಿದ್ದೇವೆ. ಎಂ.ಇ.ಐ. ಏನಿದೆ ಇದು ಖಾಸಗಿ ಕಂಪನಿ. ಆ ಮೂಲಕ ಹೋದರೆ ಬೇಕಾದಷ್ಟು ವಿಚಾರಗಳು ಇವೆ. ಆ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ, Private limited company has been taken area by the Government. In my opinion there was no necessity, are they had taken over, ಅದರ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ, ಕೆಲವು ವಿಚಾರಗಳನ್ನು ಮಾತ್ರ ನಾನು ಇಲ್ಲಿ ಹೇಳಬೇಕಾಗುತ್ತದೆ. ಪ್ರಿಂಟಿಂಗ್ ಪ್ರೆಸ್ ಮತ್ತು ಪ್ರಿಂಟಿಂಗ್ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ವಿವರಣೆ ಕೊಟ್ಟಿದ್ದೇನೆ ಸಂಬಳ ಹೆಚ್ಚಾಗಿದೆ ಚೆಕ್ ಬುಕ್ ಪ್ರಿಂಟ್ ಮಾಡುವುದಕ್ಕೆ ಹೆಚ್ಚಾಗಿದೆ ಎಂದು ಹೇಳಿದ್ದಾರೆ, ಇದೊಂದು ಪುಸ್ತಕವನ್ನು ಪ್ರಿಂಟ್

ಮಾಡಿದ ಬಗ್ಗೆ ಯಡಿಯೂರಪ್ಪನವರು ಹೇಳಿದ್ದಾರೆ. ಅದರಲ್ಲಿ ನಮ್ಮ ಸರ್ಕಾರದ ನೀತಿ ಏನಿದೆ, ಅಧಿಕಾರ ವಿಕೇಂದ್ರಿಕರಣ ಯೋಜನೆಯ ವಿಕೇಂದ್ರೀಕರಣ "Karnataka Shows the way "Decentralistion of Planning " ಇವತ್ತು ಇಡೀ ರಾಷ್ಟ್ರಕ್ಕೆ ನಮ್ಮ ಪ್ರಯೋಗ ಗೊತ್ತಾಗಬೇಕು, ಅರ್ಥವಾಗಬೇಕು ಎಂಬ ದೃಷ್ಟಿಯಿಂದ ಇಂಗ್ಲೀಷಿನಲ್ಲಿ ಇದನ್ನು ಪ್ರಿಂಟ್ ಮಾಡಿ ಹಂಚಿದ್ದೇವೆ. ತಮಗೆ ಹೇಳುವುದಾದರೆ ಪ್ರಧಾನಿಯವರೇ ಇದನ್ನು ಮೆಚ್ಚಿಕೊಂಡಿದ್ದಾರೆ. ಲೋಕಸಭಾ ಸದಸ್ಯರಿಗೆ, ರಾಜ್ಯಸಭಾ ಸದಸ್ಯರಿಗೆ ಪ್ರಮುಖವಾಗಿ ವಿಚಾರವಂತರಿಗೆ ಇದನ್ನು ಹಂಚಿದ್ದೇವೆ. ಸಮಗ್ರವಾದ ಬದಲಾವಣೆಯನ್ನು ತರಲು ಏನು ಪ್ರಯತ್ನ ಮಾಡಿದ್ದೇವೆ ಇದನ್ನು ಪ್ರಧಾನಿಯವರೇ ಒಪ್ಪಿಕೊಂಡಿದ್ದಾರೆ. ಆ ರೀತಿ ಜಾರಿಗೆ ತರತಕ್ಕ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಜುಲೈನಲ್ಲಿ ಇದು ಪ್ರಿಂಟಾಗಿದೆ. ಆದರೆ ಇದು ಶಾಸಕರಿಗೇ ತಲುಪಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ,—ಶಾಸಕರಿಗೆ ಕನ್ನಡದಲ್ಲಿ ಕಳುಹಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದು ಅವರ ಬೈಬಲ್. ಅದಕ್ಕೇ ನಿಮಗೆ ಕೊಟ್ಟಿಲ್ಲ, ಅವರೇ ಇಟ್ಟುಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಪ್ರಯೋಗವನ್ನು ಒಪ್ಪಿಕೊಂಡು ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡುವುದಕ್ಕೆ ಏಪ್ರಿಲ್ ೨೦ನೇ ತಾರೀಖು ನಾಲ್ಕು ರಾಜ್ಯಗಳ ಸಮ್ಮೇಳನ ಆಗುತ್ತಿದೆ. ಆಂಧ್ರ, ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಸಮ್ಮೇಳನವನ್ನು ನಾವೇ ಕರೆದಿದ್ದೇವೆ. ಪ್ರಧಾನಿಯವರು ಅದನ್ನು ಉದ್ಘಾಟನೆ ಮಾಡುತ್ತಿದ್ದಾರೆ. ಕೇಂದ್ರದ ಮಂತ್ರಿಗಳು ಮತ್ತು ಅಧಿಕಾರಿಗಳು ಅಧ್ಯಯನ / ಮಾಡುವುದಕ್ಕೆ ಬರುತ್ತಿದ್ದಾರೆ. ಈ ಪ್ರಯೋಗವನ್ನು ಅರ್ಥ ಮಾಡಿಕೊಳ್ಳಬೇಕು.........

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ವಿಷಯದಲ್ಲಿ ಎಲ್ಲಾ ಕಡೆ ಮಾಡುತ್ತಿದ್ದಾರೆ. ದಕ್ಷಿಣಕ್ಕೆ ಸಂಬಂಧಪಟ್ಟ ಹಾಗೆ ಇಲ್ಲಿ ಮಾಡುತ್ತಿದ್ದಾರೆ. ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಕಡೆ ಚರ್ಚೆ ಆದುದ್ದಕ್ಕೆ ಕರ್ನಾಟಕ ಮಾಡಲ್. ನಾವೆಲ್ಲ ಹೆಮ್ಮೆಪಟ್ಟುಕೊಳ್ಳಬೇಕು. ಈ ಮನೆಯಲ್ಲಿ ಪಾಸಾದಂಥ ಕಾನೂನು ಅದು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವೂ ಈ ವಿಚಾರ ತಿಳಿದುಕೊಂಡಿದ್ದೇವೆ. ಸ್ಟೇಟ್ ಲೆವಲ್ ಮತ್ತು ಡಿಸ್ಟ್ರಿಕ್ಟ್ ಲೆವೆಲ್ ಕಾನ್‌ಫರೆನ್ಸ್ ಮಾಡಿದ್ದೇವೆ. What is thinking of the Government of India ಅದು ನಮಗೂ ಕೂಡ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮದೆಲ್ಲಾ ಸರಿ ಎಂದು ನಾನು ಹೇಳುತ್ತಿಲ್ಲ. ಲೂಪ್ ಹೋಲ್ಸ್ ಇದ್ದರೆ ತಿದ್ದೋಣ. ಆದರೆ ಈ ಪ್ರಯೋಗ ಪ್ರಾರಂಭವಾದದ್ದು ನಮ್ಮಿಂದ fundamentals of demacratic functioning of the Government ಮೂಲಭೂತವಾದಂಥ ವಿಚಾರ ಇದು. ಈ ರಾಷ್ಟ್ರದಲ್ಲಿ ನಲವತ್ತು ವರ್ಷಗಳ ನಂತರ ರಾಜ್ಯಾಂಗದಲ್ಲಿ ಮಾರ್ಪಾಡು ಮಾಡಬೇಕು ಎಂಬ ಚಿಂತನೆ ಬಂದಿದೆ. It is a new Chapster in Soviet the Prime Minister appointed a Committee *i. e.* Dr. Sangvi Committee. ಇದರ ಬಗ್ಗೆ ಅಧ್ಯಯನ ಮಾಡಲಿಕ್ಕೆ ಅವರೇ ಕಮಿಟಿಯನ್ನು ನೇಮಿಸಿದ್ದರು. ಆ ಕಮಿಟಿಯ ವರದಿ ಬಂದಿದೆ. ಅದರಲ್ಲಿ ಕೂಡ ಅವರು ಹೇಳಿದಂಥ ವಿಚಾರಗಳು ಮತ್ತು ರೆಕಮೆಂಡೇಷನ್ಸ್ ನೋಡಿದ್ದೇನೆ. ನಾನೂ ಕೂಡ ಆ ಸಭೆಗೆ ಹೋಗಿದ್ದೆ. ಬೇರೆ ಬೇರೆ ರಾಜ್ಯದ ಮಂತ್ರಿಗಳೂ ಬಂದಿದ್ದರು. ಆ ಕಮಿಟಿಯವರು ಏನು ರೆಕಮೆಂಡ್ ಮಾಡಿದ್ದಾರೆ ಅದೆಲ್ಲಾ ನಾವು ಆಚರಣೆಗೆ ತಂದಿದ್ದೇವೆ. ಇದು ಬರೀ ಪಕ್ಷದ ವಿಚಾರವಲ್ಲ. ಜನತಂತ್ರದಲ್ಲಿ ಜನರ ಕೈಯಲ್ಲಿ ಅಧಿಕಾರ ಹೋಗಬೇಕು ಎನ್ನುವ ದೃಷ್ಟಿಯಿಂದ ಏನು ಮಾಡುತ್ತೇವೆ ಎಂಬುದು ಬಹಳ ಮುಖ್ಯವಾದುದು, ಈ ಒಂದು ಮಹತ್ವದ ಐತಿಹಾಸಿಕ ಪ್ರಯೋಗ ನಮ್ಮ ರಾಜ್ಯದಲ್ಲಿ ಆಗಿದೆ. ಇದು ದೇಶದ ಜನತೆಗೂ ಗೊತ್ತಾಗಬೇಕು. ಅಮೆರಿಕಾದಿಂದ ಸೆನೆಟರ್‌

ಬಂದಿದ್ದರು. ಅವರು how you are planing at the grass root level ಎಂದು ಕೇಳುತ್ತಿದ್ದಾರೆ. ಗ್ರಾಮ ಸಭೆಗಳೆಂದರೆ ಏನು, ಹೇಗೆ ಚರ್ಚೆಯಾಗುತ್ತದೆ ಎಂದು ಕೇಳುತ್ತಿದ್ದಾರೆ. Another team is coming to study the working of the panchayat raj system in Karnataka ಮತ್ತೆ ಟ್ರೈನಿಂಗ್ ಸಲುವಾಗಿ Ford Foundation ದುಡ್ಡು ಕೊಡಲಿಕ್ಕೆ ಮುಂದೆ ಬಂದಿದ್ದಾರೆ. ಈ ಪ್ರಯೋಗ ಯಶಸ್ವಿಯಾಗಬೇಕೆಂಬ ದೃಷ್ಟಿಯಿಂದ ಹಣ ಕೂಡ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ದೇಶ ವಿದೇಶಗಳಲ್ಲಿ ಇದು ಗೊತ್ತಾಗಬೇಕೆಂಬ ದೃಷ್ಟಿಯಿಂದ ಇದನ್ನು ಇಂಗ್ಲೀಷಿನಲ್ಲಿ ಪ್ರಿಂಟ್ ಮಾಡಿದ್ದೇವೆ. ಇನ್ನೂ ಅನೇಕ ವಿಚಾರಗಳನ್ನು ಎತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.– ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.–ರೈತರ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ಉತ್ತರ ಕೊಡುತ್ತೇನೆ. ಎಲ್ಲಾ ಸದಸ್ಯರ ಗಮನವನ್ನೂ ಆ ಬಗ್ಗೆ ಸೆಳೆಯಬೇಕಾಗಿದೆ. ನಾವು ಒಂದು ನೀತಿಯನ್ನು ೧೯೮೦ರಲ್ಲಿ ಅಳವಡಿಸಿಕೊಂಡಿದ್ದೇವೆ. ಯಾರು ಸಮಯಕ್ಕೆ ಸರಿಯಾಗಿ ಸಾಲನ್ನು ಮರುಪಾವತಿ ಮಾಡುತ್ತಾರೋ ಅವರಿಂದ ೭ ಪರ್ಸೆಂಟ್ ಮಾತ್ರ ಬಡ್ಡಿಯನ್ನು ತೆಗೆದುಕೊಳ್ಳಬೇಕು. ಇನ್ನುಳಿದ ೫ ಪರ್ಸೆಂಟ್ ಬಡ್ಡಿಯನ್ನು ಸರ್ಕಾರ ತುಂಬಿ ಕೊಡಬೇಕು ಎಂದು. ಆ ನೀತಿಯನ್ನು ಕಳೆದ ೫ ವರ್ಷಗಳಿಂದಲೂ ನಡೆಸಿಕೊಂಡು ಬಂದಿದ್ದೇವೆ. ಕಷ್ಟಕಾಲ ಇದ್ದಾಗ ರೈತರು ಅಸಲನ್ನು ಕೊಟ್ಟರೆ, ಬಡ್ಡಿ, ಸುಸ್ತಿ ಬಡ್ಡಿ ಮಾಫಿ ಮಾಡಬೇಕೆಂದು ಕೂಡ ಮಾಡಿದ್ದೇವೆ. ಹೋದ ವರ್ಷ ಈ ಬಾಬಿನಿಂದ ೮೦ ಕೋಟಿ ರೂಪಾಯಿಗಳಷ್ಟು ಹಣ ಸೂಟಿ ಬಿಟ್ಟಿದ್ದೇವೆ. ೬ ತಿಂಗಳ ಹಿಂದೆ ನಬಾರ್ಡಿನಿಂದ ನಮಗೆ ಒಂದು ಆದೇಶ ಬಂತು. ಅದೇನೆಂದರೆ, ನೀವು ರೈತರಿಗೆ ಸಾಕಷ್ಟು ರಿಯಾಯಿತಿಯನ್ನು ಕೊಡುತ್ತಿದ್ದೀರಿ. ರೈತರಿಗೆ ಸಬ್ಸಿಡಿಯನ್ನೇ ಕೊಡುವುದಿಲ್ಲವೆಂದು ಸ್ಪಷ್ಟವಾಗಿದೆ ರೈಟಿಂಗ್‌ನಲ್ಲಿ ನಮ್ಮ ಜೊತೆ ಅಗ್ರಿಮೆಂಟ್ ಮಾಡಿಕೊಳ್ಳದಿದ್ದರೆ ಅಪೆಕ್ಸ್ ಬ್ಯಾಂಕಿಗೆ ಹಾಗೂ ಭೂ ಅಭಿವೃದ್ಧಿ ಬ್ಯಾಂಕಿಗೆ ಸಾಲವನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ. ಆಗ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜ್ಜಿಬಾಳ ಹೆಗಡೆಯವರು ನನ್ನ ಹತ್ತಿರ ಓಡಿ ಬಂದರು. ನಾನು ಕೂಡಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದೆ. ಅದಕ್ಕವರು ಇಲ್ಲ, ಇಲ್ಲ, ಆ ರೀತಿಯ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ಹೇಳಿದರು. ೭ ಪರ್ಸೆಂಟ್ ಬಡ್ಡಿಯನ್ನು ರೈತರಿಂದ ತೆಗೆದುಕೊಳ್ಳುವುದು, ಇನ್ನುಳಿದ ೫ ಪರ್ಸೆಂಟ್ ಬಡ್ಡಿಯನ್ನು ಸರ್ಕಾರ ತುಂಬಿ ಕೊಡುವುದು ಅಂತ, ಅಗ್ರಿಮೆಂಟ್ ಮಾಡಿದ್ದೇವೆ. ಆದರೆ, ನಮಗೆ ನೀವು ೫ ಪರ್ಸೆಂಟ್ ಬಡ್ಡಿ ರಿಯಾಯಿತಿಯನ್ನು ಕೊಡುತ್ತಿರುವುದನ್ನು ಕಂಟಿನ್ಯೂ ಮಾಡುತ್ತಿದ್ದೀರಿ, ಇದರಿಂದಾಗಿ ನಿಮಗೆ ಕಡ್ಡಾಯವಾಗಿ ಹಣವನ್ನು ಕೊಡುವುದನ್ನೇ ನಿಲ್ಲಿಸಿಬಿಟ್ಟಿದ್ದೇವೆಂದು ಹೇಳಿದ್ದಾರೆ. ಅಂದರೆ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕಿಗೆ ರೀ—ಫೈನಾನ್ಸ್‌ಗೆ ಹಣವೇ ಇರುವುದಿಲ್ಲ. ನಾನು ಪುನಃ ನಬಾರ್ಡ್‌ನವರ ಜೊತೆ ಮಾತನಾಡಿದೆ. ಅಲ್ಲಿ ನಮ್ಮವರೇ ಶ್ರೀ ಆರ್. ನಾಯಕ್ ಎನ್ನುವವರು ಇದ್ದಾರೆ. ಅವರ ಹತ್ತಿರ ಮಾತನಾಡಿದ್ದೇನೆ. ಅದಕ್ಕವರು ಇಲ್ಲ, ಇಲ್ಲ. ಎಲ್ಲಾ ರಾಜ್ಯಗಳಲ್ಲೂ ಆ ರೀತಿಯ ಕನ್‌ಸೆಷನ್ಸ್ ಇಲ್ಲ, ಇದೇ ರೀತಿ ಎಲ್ಲ ರಾಜ್ಯಗಳಿಗೂ ತಿಳಿಸಿದ್ದೇವೆ. ಆ ನೀತಿಯನ್ನು ಬಿಟ್ಟು ಹೋದರೆ ನಾವು ಒಪ್ಪುವುದಿಲ್ಲ. Unless you give the undertaking in writing to the NABARD, we will not refinance. ಈ ರೀತಿಯಾಗಿ ನಬಾರ್ಡ್‌ನ ನೀತಿ ಏನು ಇದೆ, ಆ ನೀತಿಗನುಗುಣವಾಗಿ ನಾವು ಅವರಿಗೆ ಅಂಡರ್‌ಟೇಕಿಂಗ್ ಬರೆದುಕೊಡದಿದ್ದರೆ ನಮಗೆ ರೀ—ಫೈನಾನ್ಸಿಂಗ್‌ಗೇ ಹಣವೇ ಇಲ್ಲದಾಗಿದೆ, ಈ ಕಷ್ಟಕಾಲದಲ್ಲಿ ನಬಾರ್ಡ್‌ನಿಂದ ಹಣ ಬರದಿದ್ದರೆ, ೧೫೦—೩೦೦ ಕೋಟಿ ರೂಪಾಯಿಗಳವರೆಗೆ ಹಣ ಬರದಿದ್ದರೆ ನಮ್ಮ ರೈತರಿಗೆ ಸಾಲವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತು ಬೆಳಿಗ್ಗೆ ಆ ರೀತಿಯ ಅಂಡರ್‌ಟೇಕಿಂಗ್ ಬರೆದುಕೊಡಿ ಎಂದು ಹೇಳಿದ್ದೇನೆ. ಆದರೆ ಇದನ್ನು ಇಲ್ಲಿಗೇ ಬಿಡುವುದಿಲ್ಲ. ಈ ವಿಚಾರದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಹೇಳಿದ್ದೇನೆ. ಹಣಕಾಸಿನ ಮಂತ್ರಿಗಳಿಗೆ ಹೇಳಿದ್ದೇನೆ. ಪುನಃ ಅವರ ಹತ್ತಿರ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ರಿಯಾಯಿತಿಯನ್ನು ಕೊಡಿ ಎಂಬುದಾಗಿ ಒತ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪೋಲೀಸ್ ಹೌಸಿಂಗ್ ಕಾರ್ಪೊರೇಷನ್‌ಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಈ ವರ್ಷ ಹೆಚ್ಚು ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕಲೆ ಮತ್ತು ಸಾಹಿತ್ಯದ ಬಗ್ಗೆ ಹೇಳಿದ್ದಾರೆ. ರಾಷ್ಟ್ರಕವಿ ಕುವೆಂಪುರವರು ಬರೆದಿರುವಂತಹ ರಾಮಾಯಣ ದರ್ಶನವನ್ನು ಜನಸಾಮಾನ್ಯರಿಗೆ ಸುಲಭ ಬೆಲೆಗೆ ಸಿಕ್ಕುವ ರೀತಿಯಲ್ಲಿ ಪ್ರಿಂಟ್ ಮಾಡಿ ಎಂದು ಹೇಳಿದ್ದೇನೆ. ಅದನ್ನು ಮಾಡುತ್ತೇವೆ. ಬೇರೆ ಸಾಹಿತ್ಯಗಳ ಬಗ್ಗೆಯೂ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಗುಲ್ಬರ್ಗ ವಿಶ್ವವಿದ್ಯಾನಿಲಯದ ಬಗ್ಗೆ ಬೇರೆ ಬೇರೆ ವಿಚಾರಗಳನ್ನು ಮಾನ್ಯ ಖರ್ಗೆಯವರು ಹೇಳಿದ್ದಾರೆ. ಕ್ಯಾನ್ಸರ್ ಆಸ್ಪತ್ರೆಗೆ ಕಿದ್ವಾಯಿ ಇನ್ಸಿಟಿಟ್ಯೂಟ್‌ನಂತೆ ಪ್ರಾರಂಭ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದಕ್ಕಾಗಿ ೧೨ ಲಕ್ಷ ರೂಪಾಯಿಗಳನ್ನೂ ಬಿಡುಗಡೆ ಮಾಡಿದ್ದೇವೆ. ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದು. ಶ್ರೀ ಮೋತಿಲಾಲ್ ವೊರಾ ರವರು ಅಧ್ಯಕ್ಷರಾಗಿದ್ದಾರೆ. ಅವರ ಅಧ್ಯಕ್ಷತೆಯಲ್ಲೇ ಒಂದು ಸಭೆಯನ್ನೂ ಕೂಡ ಮಾಡಿದ್ದೇವೆ. ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾಗಿದೆ ಗುಲ್ಬರ್ಗದಲ್ಲಿ ಅದೊಂದು ಇಂಡಿಪೆಂಡೆಂಟ್ ಕ್ಯಾನ್ಸರ್ ಯೂನಿಟ್ ಆಗಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ. ಆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೂ ಕೂಡ ತಮ್ಮ ಕಾಂಟ್ರಿಬ್ಯೂಷನ್ ೨೦-೨೨ ಲಕ್ಷ ಕಲೆಕ್ಟ್ ಮಾಡಿದ್ದಾರೆ, ಸರ್ಕಾರದಿಂದ ೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅದೇ ಆಧಾರದ ಮೇಲೆ ಮಣಿಪಾಲ್‌ದಲ್ಲಿರುವ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನವರಿಗೂ ಕೊಟ್ಟಿದ್ದೀರಿ. ಅವರಿಗೆ ಕೊಡುವ ಬದಲು ಬೇರೆಯವರಿಗೆ ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಕಡೆ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ಗಳು ಆಗಬೇಕು. ಹುಬ್ಬಳ್ಳಿಯಲ್ಲಿ ಒಂದು ಇದೆ. ಗುಲ್ಬರ್ಗದಲ್ಲಿ ಮಾಡುತ್ತಿದ್ದೇವೆ. ಮಂಗಳೂರಿನವರೂ ಈ ರೀತಿಯ ಯೂನಿಟ್‌ಗಳನ್ನು ಮಾಡುವುದಕ್ಕೆ ಮುಂದೆ ಬಂದಾಗ ಅಂತಹವರಿಗೆ ಸಹಾಯ ಮಾಡಬೇಕಾಗುತ್ತದೆ. ಸಹಾಯ ಮಾಡಿದ್ದೇವೆ. ಅವರು ಶ್ರೀಮಂತರಿದ್ದು ಆ ಹಣವನ್ನು ಗುಲ್ಬರ್ಗಕ್ಕೆ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹಾಗೆ ಹೇಳಲಿಲ್ಲ. ನೀವು ಗುಲ್ಬರ್ಗಕ್ಕೆ ಕೊಡುವುದನ್ನು ಕೊಡಲೇ ಬೇಕು. ಆ ಸಂಸ್ಥೆಯವರು they are sufficiently rich. They can do themselves. For them you are giving grant-in-aid. ಅಂತಹವರಿಗೆ ಗ್ರಾಂಟ್ ಇನ್ ಏಡ್ ಏಕೆ ಕೊಡಬೇಕು, ಬೇರೆ ಕಡೆ ಕೊಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಡಿಸೌಜ.—ಮಂಗಳೂರಿನಲ್ಲಿ ಯಾವ ಕ್ಯಾನ್ಸರ್ ಇನ್‌ಸ್ಟ್ಯೂಟ್ ಕೂಡಾ ಬರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ನೀರಾವರಿ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ತಾವು ಸ್ವಲ್ಪ ಅರ್ಥ ಮಾಡಿಕೊಂಡಹಾಗೆ ಇಲ್ಲ. ಡ್ರಾಟ್ ರಿಲೀಫ್ ಬಗ್ಗೆ ಕೇಂದ್ರ ಸರ್ಕಾರದವರು ಏನು ಮಾಡಿದ್ದಾರೆಂದರೆ, ಈ ಹಣ ಖಾಯಂ ಆಗಿ ಸೌಕರ್ಯ ಸಿಗತಕ್ಕ ಬಗ್ಗೆ ಹೇಳಿದ್ದಾರೆ. ಯಾವುದೇ ಒಂದು ಜಿಲ್ಲೆಯಲ್ಲಿ ಮಾಡಬೇಕಾದರೆ permenent solution to a drought problem If ಆ ದೃಷ್ಟಿಯಿಂದ I remember correct ೨೫ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ೨೫ ಕೋಟಿ ಬಿಡುಗಡೆ ಮಾಡುವಾಗ ಯೋಜನೆಯಲ್ಲಿ ಏನು ಹಣ ಒದಗಿಸಲಾಗಿರುತ್ತದೋ ಆದರಲ್ಲಿ ೮೦ ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕು. ಪ್ರಾಜೆಕ್ಟ್‌ನ್ನು ಅವರೇ ಸೆಲೆಕ್ಟ್ ಮಾಡುತ್ತಾರೆ. ಕೆಲವು ಏರಿಯಾವನ್ನು ಡ್ರಾಟ್ ಪ್ರಾನ್ ಏರಿಯಾದಲ್ಲಿ ನಾವು ಸೆಲೆಕ್ಟ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಕಬಿನಿ ಅಥವಾ ಮಲಪ್ರಭಾ ಎಂದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಡ್ಜೆಟ್‌ನಲ್ಲಿ ಇರುವುದು ಅಲ್ಲ ಅದು. ಆದರೆ ತಾವೇ ಪ್ರಾವಿಷನ್ ಮಾಡಿ ೧೦ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ೧೦ ಕೋಟಿ ರೂಪಾಯಿ ಕೆಲಸ ಆಗಿದೆ. ಹಣವನ್ನು ಈಗ ನೀವು ಕೊಟ್ಟಿದ್ದೀರಿ. ಅದೇ ೨ ಕೋಟಿ ರೂಪಾಯಿಗಳನ್ನು Shahapur Branchಗೆ ಕೊಟ್ಟಿದ್ದರೆ ಅಲ್ಲಿ ೩೫ ಸಾವಿರ ಎಕರೆ ನೀರಾವರಿಯಾಗುತ್ತಿತ್ತು. ಬರೀ ಮಣ್ಣಿನ ಕೆಲಸಕ್ಕೆ ೧೦ ಕೋಟಿ ರೂಪಾಯಿ ಖರ್ಚು ಮಾಡಿ ೬ ತಿಂಗಳಲ್ಲಿ ಮುಗಿಸಿದ್ದೀರಿ. ಇದು ಏಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಹಣವನ್ನು ಅವರು ಸ್ಪೆಸಿಫಿಕ್ ಪ್ರಾಜೆಕ್ಟ್‌ಗೆ ಕೊಟ್ಟಿದ್ದಾರೆ. ಆ ಹಣವನ್ನು ಅಲ್ಲೇ ಖರ್ಚು ಮಾಡಬೇಕಾಗುತ್ತದೆ. ಅದನ್ನು ಬೇರೆ ಕಡೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಎರಡು ಪ್ರಾಜೆಕ್ಟ್‌ಗೆ ಸ್ಪೆಸಿಫಿಕ್ಕಾಗಿ ಹೇಳಿದ್ದಾರೆ. ಇನ್ನು ಹಣ ಎಲ್ಲೆಲ್ಲಿ ಸರಿಯಾಗಿ ಖರ್ಚು ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದರ ಬಗ್ಗೆ

ವಿಚಾರ ಮಾಡೋಣ. ಮತ್ತೆ ಜಿಲ್ಲೆಗಳ ಫಾರ್ಮೇಷನ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ಎಷ್ಟು ಹಣದ ಖರ್ಚು ಬರುತ್ತದೆ ಹಾಗೂ ಇತರ ವಿಚಾರಗಳ ಬಗ್ಗೆ ಅಧಿಕಾರಿ ಮಟ್ಟದ ಸಮಿತಿ ನೋಡಬೇಕಾಗುತ್ತದೆ, ಇದನ್ನು ಮಾಡಬೇಕಾದರೆ ಹಣಕಾಸಿನ ಬಗ್ಗೆ ನೋಡಿಕೊಂಡು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಉಳಿದ ವಿಷಯಗಳಿಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ವಿಷಯಗಳ ಬಗ್ಗೆ ಗಮನಕೊಟ್ಟು ಸೂಕ್ತ ಕಾರ್ಯಕ್ರಮ ತೆಗೆದುಕೊಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಒಂದೆರಡು ಜಿಲ್ಲೆಗಳನ್ನು ಹೊಸದಾಗಿ ಫಾರ್ಮ್ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಈಗ ಹಣಕಾಸಿನ ಖರ್ಚಿನ ಬಗ್ಗೆ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩.—

ಅಧ್ಯಕ್ಷರು.—"ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೆ ಖಂಡ ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೯ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೯ನೇ ಇಸವಿಯ ಕರ್ನಾಟಕ ವೃತ್ತಿಗಳು ವ್ಯವಹಾರಗಳು ಮತ್ತು ಕಸುಬುಗಳು ಉದ್ಯೋಗಗಳ ತಿದ್ದುಪಡಿ ವಿಧೇಯಕ)

ಪರ್ಯಾಲೋಚನ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮಿಸಾಗರ್.—(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, "೧೯೮೯ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸುಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.